25 August 2026 Tuesday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ತಮ್ಮ ಅಂತರಂಗಕ್ಕೆ ಬೆಲೆ ಕೊಡಲಾರದವರು ಬದುಕಿನಲ್ಲಿ ಯಾರಿಗೂ ಬೆಲೆ ಕೊಡಲಾರರು!

-ಸ್ನೇಹಾ ಆನಂದ್

info.varthaman@gmail.com


ರಾಹುಲ್ ಗಾಂಧಿ ದೇಶದಲ್ಲಿರಲು ನಾಲಾಯಕ್: ಕೇಂದ್ರ ಸಚಿವ ವಿ.ಸೋಮಣ್ಣ — ಪುಟ ಸಂ. 2


ಚಾಮನಗರದಲ್ಲಿ ನಕಲಿ ಎನ್ಕೌಂಟರ್ ಖಂಡಿಸಿ ಪ್ರತಿಭಟನೆ — ಪುಟ ಸಂ. 3


ಕುಂಬಾರ ಸಮುದಾಯ ಶಿಕ್ಷಣಕ್ಕೆ ಒತ್ತು ನೀಡಿ: ಸಿ.ಪುಟ್ಟರಂಗಶೆಟ್ಟಿ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 260 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## 43 ಲಕ್ಷ ಮತದಾರರಿಗೆ ದಾಖಲಾತಿ ನೀಡಲು ನೋಟಿಸ್: ಸಿಇಸಿ ಅನ್ಬುಕುಮಾರ್

# 1.8 ಕೋಟಿ ಮತದಾರರು ಡಿಲೀಟ್

## ಪಟ್ಟಿಗೆ ಮತ್ತೆ ಮತದಾರರ ಹೆಸರು ಸೇರ್ಪಡೆಗೆ ಅವಕಾಶ: ಮುಖ್ಯ ಚುನಾವಣಾಧಿಕಾರಿ

**ಬೆಂಗಳೂರು:** ರಾಜ್ಯದಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್) ಪ್ರಕ್ರಿಯೆ ಮುಕ್ತಾಯಗೊಂಡಿದೆ. ಕರಡು ಮತದಾರರ ಪಟ್ಟಿಯಿಂದ ಬರೋಬ್ಬರಿ 1,07,96,339 ಮತದಾರರ ಹೆಸರನ್ನು ಪಟ್ಟಿಯಿಂದ ಡಿಲೀಟ್ ಮಾಡಲಾಗಿದೆ.

ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಸುಮಾರು 1.8 ಕೋಟಿ ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ. 5,54,32,314 ಮತದಾರರ ಹೆಸರು ಉಳಿದುಕೊಂಡಿದೆ ಎಂದು ತಿಳಿಸಿದರು.

ಇವರಲ್ಲಿ ಶಾಶ್ವತವಾಗಿ ಸ್ಥಳಾಂತರವಾದವರ ಸಂಖ್ಯೆ 65,45,679 ಇದೆ. ಪ್ರಕ್ರಿಯೆಯಲ್ಲಿ ಗೈರಾದವರ ಸಂಖ್ಯೆ 15,17,042. ಮೃತಪಟ್ಟ ಮತದಾರರ ಸಂಖ್ಯೆ 16,39,864 ಆಗಿದೆ. 7,09,870 ಮಂದಿ ಒಂದಕ್ಕಿಂತ ಹೆಚ್ಚು ಕಡೆ ಮತದಾನ ಪಟ್ಟಿಯಲ್ಲಿದ್ದಾರೆ. 3,83,884 ಮತದಾರರು ಇತರರಿದ್ದಾರೆ. ಮತದಾರರು ಮತ್ತೆ ಫಾರ್ಮ್ 6 ಬಳಸಿಕೊಂಡು ಮತದಾರರ ಪಟ್ಟಿಗೆ ಸೇರಬಹುದು ಎಂದು ತಿಳಿಸಿದರು.

43 ಲಕ್ಷ ಮತದಾರರಿಗೆ ನೋಟಿಸ್ ಕೊಡುವ ಪ್ರಕ್ರಿಯೆ ಜಾರಿಯಲ್ಲಿದೆ. ನೋಟಿಸ್ ಹೇಗೆ ಕೊಡಬೇಕು, ನೋಟಿಸ್‌ನಲ್ಲಿ ಜಾರಿ ವಿಚಾರದ ಬಗ್ಗೆ ಕಾರ್ಯಾಗಾರ ನಡೆಯಲಿದೆ. ಪರಿಶೀಲನಾ ಪ್ರಕ್ರಿಯೆ ಸೋಮವಾರದಿಂದ ಆರಂಭವಾಗಲಿದೆ. ನೋಟಿಸ್ ಕೊಡುವ ಸಲುವಾಗಿ 3 ಸಾವಿರಕ್ಕೂ ಅಧಿಕ ಇಆರ್ಒ, ಎಆರ್ಒಗಳನ್ನು ನೇಮಕ ಮಾಡಿಕೊಳ್ಳಲಾಗುತ್ತದೆ. ಅಕ್ಟೋಬರ್ 22ರೊಳಗೆ ನೋಟಿಸ್ ಪ್ರಕ್ರಿಯೆ ಮುಗಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಒಬ್ಬ ಎಆರ್ಒಗೆ ಅಂದಾಜು 1 ಸಾವಿರ ನೋಟಿಸ್ ಬರುತ್ತದೆ. ಹೆಸರು ಪರಿಷ್ಕರಣೆ, ಹುಟ್ಟಿದ ದಿನಾಂಕ ಪರಿಷ್ಕರಣೆ, ವಿಳಾಸ ಬದಲಾವಣೆಗೆ ಫಾರ್ಮ್ 8 ಅನ್ನು ಭರ್ತಿ ಮಾಡಬೇಕು. ಡ್ರಾಫ್ಟ್ ರೋಲ್‌ನಲ್ಲಿ ಹೆಸರು ಇರುವ 43 ಲಕ್ಷ ಮತದಾರರಿಗೆ ಹೆಚ್ಚುವರಿ ದಾಖಲಾತಿ ಬೇಕಾಗಿದ್ದಲ್ಲಿ ಮಾತ್ರ ಮನೆಗೆ ನೋಟಿಸ್ ನೀಡಲಾಗುತ್ತದೆ. ಅಕ್ಷೇಪಣೆ ಸಲ್ಲಿಕೆಗೆ ದಿನಾಂಕ ಸ್ಥಳ ನಿಗದಿಯಾಗಿರುತ್ತದೆ. ಅಲ್ಲಿ ಅವರು ಬಂದು ದಾಖಲಾತಿಗಳನ್ನು ನೀಡಬೇಕು ಎಂದು ತಿಳಿಸಿದರು.

ಇಆರ್ಒ ಕೊಟ್ಟಿರುವ ನೋಟಿಸ್‌ನಲ್ಲಿ ಕಾರಣ ಕೂಡ ಉಲ್ಲೇಖವಾಗಿರುತ್ತದೆ. ಮತದಾರರಿಗೆ ಖುದ್ದು ಮನೆಗೆ ಹೋಗಿ ನೋಟಿಸ್ ನೀಡಲಾಗುತ್ತದೆ. ಮೊಬೈಲ್ ಸಂದೇಶಗಳ ಮೂಲಕ ಕಳಿಸಲ್ಲ. ಏಳು ದಿನಗಳ ಕಾಲ ಸಮಯ ಇರುತ್ತದೆ ಎಂದು ಹೇಳಿದರು.

ನಗರ ಪ್ರದೇಶದಲ್ಲಿ ಹೆಚ್ಚಾಗಿ ನೋ ಮ್ಯಾಪಿಂಗ್ ಸಮಸ್ಯೆಯಾಗಿದೆ. ಸೆಪ್ಟೆಂಬರ್

ಪುಟ 2ಕ್ಕೆ




### ಮತದಾರರ ವರ್ಗೀಕರಣ

- ಜನರಲ್ (ಸಾಮಾನ್ಯ)– 4,46,35,975
- ಯುವ ಮತದಾರರು (18ರಿಂದ 19 ವರ್ಷ)– 3,70,341
- 20ರಿಂದ 29 (ವರ್ಷ)– 83,87,880
- 85+ ವಯಸ್ಸಿನ ಮತದಾರರು– 3,92,302
- ಎನ್ ಆರ್ಐ– 951
- ಸೇವೆಯಲ್ಲಿರುವ ಮತದಾರರು– 44,176
- ವಿಶೇಷ ಚೇತನರು– 5,55,691



## ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ

### ಕಾಂಗ್ರೆಸ್ ಹೈಕಮಾಂಡ್ ನಿಂದ ಲೂಟಿಯ ಟಾಸ್ಕ್ । ನಾಗೇಂದ್ರ ರಾಜೀನಾಮೆ ಪಡೆಯುವವರೆಗೆ ಹೋರಾಟ ನಿಲ್ಲಲ್ಲ

**ಬೆಂಗಳೂರು:** ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬಹುಕೋಟಿ ಹಗರಣಕ್ಕೆ ಸಂಬಂಧಿಸಿದಂತೆ ಸಚಿವ ಬಿ.ನಾಗೇಂದ್ರ ರಾಜೀನಾಮೆ ನೀಡುವಂತೆ ಆಗ್ರಹಿಸಿ ಬಿಜೆಪಿ ನಾಯಕರು ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಫ್ರೀಡಂ ಪಾರ್ಕ್ನಿಂದ ವಿಧಾನ ಸೌಧಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಬಿಜೆಪಿ ನಾಯಕರು ಹಾಗೂ ಕಾರ್ಯಕರ್ತರು ಮೆರವಣಿಗೆಗೆ ಮುಂದಾಗುತ್ತಿದ್ದಂತೆ ಪೊಲೀಸರು ಅವರನ್ನು ವಶಕ್ಕೆ ಪಡೆದರು.

ಫ್ರೀಡಂ ಪಾರ್ಕ್ನಲ್ಲಿ ಸಮಾವೇಶಗೊಂಡ ಬಿಜೆಪಿ ನಾಯಕರು ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ವಿಧಾನ ಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ನೇತೃತ್ವದಲ್ಲಿ ವಿಧಾನಸೌಧ ಚಲೋ ಆರಂಭವಾಯಿತು. ಕೆಎಸ್ಆರ್‌ಪಿ ತುಕಡಿಗಳು ಹಾಗೂ ಪ್ರತಿಭಟನಾಕಾರರನ್ನು ಕರೆದೊಯ್ಯಲು ಬಿಎಂಟಿಸಿ ಬಸ್‌ಗಳನ್ನು ನಿಯೋಜಿಸಲಾಗಿತ್ತು.

ಬಿಜೆಪಿ ನಾಯಕರನ್ನು ಪೊಲೀಸರು ಮಾರ್ಗಮಧ್ಯದಲ್ಲೇ ತಡೆದರು. ರಸ್ತೆಯಲ್ಲೇ ಜಮಾಯಿಸಿದ ಕಾರ್ಯಕರ್ತರು ಕಾಂಗ್ರೆಸ್ ಸರ್ಕಾರ ಹಾಗೂ ಸಚಿವರ ವಿರುದ್ಧ ಧಿಕ್ಕಾರ ಕೂಗಿದರು. ಬಳಿಕ ಆರ್.ಅಶೋಕ್, ಬಿ.ವೈ. ವಿಜಯೇಂದ್ರ, ಸಿ.ಟಿ.ರವಿ, ಎನ್.ರವಿಕುಮಾರ್ ಸೇರಿದಂತೆ ಪ್ರಮುಖರನ್ನು ಪೊಲೀಸರು ವಶಕ್ಕೆ ಪಡೆದರು.

ಮೇಲ್ಮನೆ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ವಾಲ್ಮೀಕಿ ಸಮುದಾಯಕ್ಕೆ ಸೇರಬೇಕಿದ್ದ 187 ಕೋಟಿ ರೂ. ಹಣವನ್ನು ಲೂಟಿ ಮಾಡಿ ಬೇರೆಡೆ ಹಂಚಲಾಗಿದೆ. ಸಚಿವ ನಾಗೇಂದ್ರ ನುಂಗಿದ್ದು ದಲಿತರ ಹಣವಲ್ಲವೇ? ಈ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಪ್ರಕರಣದಲ್ಲಿ ಉಳಿದವರ ಹೆಸರು ಬಹಿರಂಗವಾಗುತ್ತದೆ ಎಂಬ ಭಯದಿಂದ ಸಚಿವರನ್ನು ರಕ್ಷಿಸಲಾಗುತ್ತಿದೆ. ನಾಗೇಂದ್ರ ಅವರನ್ನು ಸಂಪುಟದಿಂದ

ಪುಟ 2ಕ್ಕೆ


## ಎಚ್1ಎನ್1: ಹೈಅಲರ್ಟ್ ಘೋಷಣೆ

### ರಾಜ್ಯದಲ್ಲಿ 8 ತಿಂಗಳಲ್ಲಿ 4,212 ಕೇಸ್ ದಾಖಲು, ಆತಂಕ ಹೆಚ್ಚಳ

**ಬೆಂಗಳೂರು:** ರಾಜ್ಯದಲ್ಲಿ ಎಚ್1ಎನ್1 (ಹಂದಿ ಜ್ವರ) ಸೋಂಕು ಆತಂಕಕಾರಿ ಮಟ್ಟದಲ್ಲಿ ಏರಿಕೆಯಾಗುತ್ತಿದೆ. ಕಳೆದ 8 ತಿಂಗಳಲ್ಲಿ ರಾಜ್ಯಾದ್ಯಂತ 4,212 ಪ್ರಕರಣ ವರದಿಯಾಗಿವೆ. ರಾಜ್ಯದ 15 ಜಿಲ್ಲೆಗಳಲ್ಲಿ ಪ್ರಕರಣ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ಹೈಅಲರ್ಟ್ ಘೋಷಿಸಿದೆ.

ಆರೋಗ್ಯ ಸಚಿವ ಯುಟಿ ಖಾದರ್ ಅಧ್ಯಕ್ಷತೆಯಲ್ಲಿ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಹಿರಿಯ ಆರೋಗ್ಯ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಪರಿಶೀಲನಾ ಸಭೆ ನಡೆಯಿತು. ಯಾವುದೇ ತುರ್ತು ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ರಾಜ್ಯದ ಆರೋಗ್ಯ ವ್ಯವಸ್ಥೆಯು ಅಗತ್ಯ ಮೂಲಸೌಕರ್ಯ, ಬೆಡ್‌ಗಳು ಹಾಗೂ ಔಷಧಿಗಳ ಸಂಗ್ರಹದೊಂದಿಗೆ ಸನ್ನದ್ಧವಾಗಿರುವಂತೆ ಅಧಿಕಾರಿಗಳಿಗೆ ಸಚಿವರ ಸೂಚಿಸಿದರು.

ಇಂಟಿಗ್ರೇಟೆಡ್ ಹೆಲ್ತ್ ಇನ್ಫಾರ್ಮೇಷನ್ ಪ್ಲಾಟ್ ಫಾರ್ಮ್ ನೀಡಿರುವ ಕಣ್ಗಾವಲು ವರದಿಯ ಪ್ರಕಾರ 32 ಜಿಲ್ಲೆಗಳಲ್ಲಿ ಒಟ್ಟು 4,212 ಪ್ರಯೋಗಾಲಯ ದೃಢೀಕೃತ ಪಾಸಿಟಿವ್ ಪ್ರಕರಣಗಳು ದಾಖಲಾಗಿವೆ. 2025ರಲ್ಲಿ 4,583 ಹಾಗೂ 2024ರಲ್ಲಿ 3,903 ಪ್ರಕರಣಗಳು ವರದಿಯಾಗಿದ್ದವು. ರಾಜ್ಯದಲ್ಲಿ ಸಾಮಾನ್ಯವಾಗಿ ಪ್ರತಿ ವರ್ಷ ಜನವರಿಯಿಂದ ಮಾರ್ಚ್ ಹಾಗೂ ಜುಲೈನಿಂದ ಸೆಪ್ಟೆಂಬರ್ ಅವಧಿಯಲ್ಲಿ ಇನ್‌ಫ್ಲುಯೆಂಜಾ ಪ್ರಕರಣಗಳು ಹೆಚ್ಚಾಗುವುದು ವಾಡಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.




## ನಾಳೆ ದಸರಾ ಗಜಪಯಣ

**ಮೈಸೂರು:** ನಾಡಹಬ್ಬ ಮೈಸೂರು ದಸರಾ ಉತ್ಸವಕ್ಕೆ ಮುನ್ನುಡಿ ಬರೆಯಲಿರುವ ದಸರಾ ಗಜಪಯಣಕ್ಕೆ ವೀರನಹೊಸಹಳ್ಳಿಯಲ್ಲಿ ಸಿದ್ಧತೆ ಪೂರ್ಣಗೊಂಡಿದೆ. ಆಹ್ವಾನ ಪತ್ರಿಕೆ ಬಿಡುಗಡೆಗೊಂಡಿದೆ. ಆಹ್ವಾನ ಪತ್ರಿಕೆಯಲ್ಲಿ ಅಭಿಮನ್ಯು ಮಿಂಚುತ್ತಿದೆ.

ಅರಣ್ಯ ಸಚಿವ ರಾಮಲಿಂಗರೆಡ್ಡಿ ಬಿಡುಗಡೆ ಮಾಡಿರುವ ಗಜಪಡೆಯ ಪಟ್ಟಿಯ ಮೊದಲ ಹಂತದಲ್ಲಿ ಮಹೇಂದ್ರ, ಧನಂಜಯ, ಗೋಪಿ, ಶ್ರೀರಾಮ, ಲಕ್ಷ್ಮಿ, ಕಾವೇರಿ, ಸುಗ್ರೀವ, ಏಕಲವ್ಯ, ಪ್ರಶಾಂತ ಆಗಮಿಸಲಿದ್ದು, ಎರಡನೇ ಹಂತದಲ್ಲಿ ರೂಪ, ಚೈತ್ರಾ, ಶ್ರೀಕಂಠ ಆನೆಗಳು ಬರಲಿವೆ. ಎಲ್ಲಾ ಆನೆಗಳ ಪರೀಕ್ಷೆ: ಮೊದಲ ಬಾರಿಗೆ ದಸರಾ ಆನೆಗಳ ಹೃದಯದ ಆರೋಗ್ಯ ಮತ್ತು ಸಾಮರ್ಥ್ಯ ಪರೀಕ್ಷಿ ಸಲು ಈಗಾಗಲೇ ಇಸಿಜಿ ಪರೀಕ್ಷೆ ನಡೆಸಲಾಗಿದೆ. ಪಶುವೈದ್ಯಾಧಿಕಾರಿ ಗಳ ತಂಡ ಆನೆ ಶಿಬಿರಗಳಿಗೆ ಭೇಟಿ ನೀಡಿ ಪ್ರಾಥಮಿಕ ಪಟ್ಟಿಯಲ್ಲಿರುವ ಆನೆಗಳ ಆರೋಗ್ಯ ತಪಾಸಣೆ ನಡೆ ಸಿದೆ. ಜತೆಗೆ ದಸರೆಯಲ್ಲಿ ಪಾಲ್ಗೊಳ್ಳುವ ಹೆಣ್ಣಾನೆಗಳ ಗರ್ಭಧಾರಣೆಯ ಸ್ಥಿತಿಯನ್ನು ಪರಿಶೀಲಿಸಲು ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಕಳೆದ ವಷದಂತೆ ಈ ವರ್ಷವೂ 11 ದಿನ ಗಳ ಕಾಲ ದಸರಾ ಉತ್ಸವ ನಡೆಯ ಲಿದೆ. ಆ.26ರ ಬೆಳಿಗ್ಗೆ 10ರಿಂದ 10.28ರ ಶುಭ ತುಲಾ ಲಗ್ನದಲ್ಲಿ ಗಜಪಯಣಕ್ಕೆ ಚಾಲನೆ ಸಿಗಲಿದೆ. ಸಿಎಂ ಡಿ.ಕೆ.ಶಿವಕುಮಾರ್, ಡಿಸಿಎಂ ಜಿ.ಪರಮೇಶ್ವರ್, ಅರಣ್ಯ ಸಚಿವ ರಾಮಲಿಂಗರೆಡ್ಡಿ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಗಜಪಡೆಗೆ ಪುಷ್ಪ ನಮನ

ಪುಟ 2ಕ್ಕೆ




## ವಿಪಕ್ಷಗಳ ಗದ್ದಲದ ನಡುವೆಯೂ ಮಸೂದೆಗಳಿಗೆ ಅಂಗೀಕಾರ

**ಬೆಂಗಳೂರು:** ವಾಲ್ಮೀಕಿ ನಿಗಮದಲ್ಲಿ ನಡೆದಿರುವ ಅಕ್ರಮಕ್ಕೆ ಸಂಬಂಧಿಸಿದಂತೆ ಸಚಿವ ನಾಗೇಂದ್ರ ರಾಜೀನಾಮೆ ನೀಡಬೇಕು ಎಂದು ವಿರೋಧ ಪಕ್ಷಗಳ ಸದಸ್ಯರು ಸೋಮವಾರ ಪಟ್ಟು ಹಿಡಿದರು. ಇದರಿಂದ ವಿಧಾನಮಂಡಲ ಅಧಿವೇಶನದ ಕಲಾಪದ ವೇಳೆ ಗದ್ದಲ ಉಂಟಾಯಿತು. ಹೀಗಾಗಿ, ಹಲವು ಮಸೂದೆಗಳು ಚರ್ಚೆಯೇ

ಪುಟ 2ಕ್ಕೆ

### ಅನುಮೋದನೆ ಪಡೆದ ಮಸೂದೆಗಳು

- ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ತಿದ್ದುಪಡಿ ಮಸೂದೆ
- ಕರ್ನಾಟಕ ಕೈಗಾರಿಕೆ ಸೌಲಭ್ಯ ತಿದ್ದುಪಡಿ ಮಸೂದೆ
- ಗ್ರೇಟರ್ ಬೆಂಗಳೂರು
- ಆಡಳಿತ ತಿದ್ದುಪಡಿ ಮಸೂದೆ
- ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯ ಸಂಸ್ಥೆಗಳ

ಪುಟ 2ಕ್ಕೆ

## ನಾಗೇಂದ್ರ ರಾಜೀನಾಮೆ ಅನಗತ್ಯ: ಜಾರಕಿಹೊಳಿ

**ಬೆಂಗಳೂರು:** ಸಚಿವ ಬಿ.ನಾಗೇಂದ್ರ ಅವರಿಗೆ ಲೋಕಾಯುಕ್ತ ಹಾಗೂ ಎಸ್ಐಟಿ ಈಗಾಗಲೇ ಕ್ಲೀನ್‌ಚಿಟ್ ನೀಡಿರುವುದರಿಂದ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವ ಅಗತ್ಯವಿಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅಭಿಪ್ರಾಯಪಟ್ಟರು.



ಬೆಂಗಳೂರಿನಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತಾಡಿದ ಅವರು, ನಾಗೇಂದ್ರ ಅವರನ್ನು ಸಚಿವ ಸ್ಥಾನದಿಂದ ಕೈಬಿಡುವಂತೆ ಬಿಜೆಪಿ ನಡೆಸುತ್ತಿರುವ ಹೋರಾಟ ರಾಜಕೀಯ ಪ್ರೇರಿತ ಎಂದು ಆರೋಪಿಸಿದರು.

ಧರ್ಮೇಂದ್ರ ಪ್ರಧಾನ್ ಅವರು ನೀಟ್ ಪರೀಕ್ಷೆ ಅಕ್ರಮ ಹಿನ್ನೆಲೆಯಲ್ಲಿ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕಾಗಿತ್ತು. ಅದು ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಪ್ರಶ್ನೆಯಾಗಿತ್ತು. ಆದರೆ ನಾಗೇಂದ್ರ ವಿಚಾರದಲ್ಲಿ ಹಾಗಿಲ್ಲ ಎಂದು ಸಮರ್ಥನೆ ಮಾಡಿಕೊಂಡಿದ್ದಾರೆ.

## ಸೆ.11ರಂದು ಬ್ಯಾಂಕ್ ಮುಷ್ಕರಕ್ಕೆ ನಿರ್ಧಾರ

**ನವದೆಹಲಿ:** ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ದೇಶಾದ್ಯಂತ ಸೆ.11ರಂದು ಮುಷ್ಕರ ನಡೆಸಲು ಯುನೈಟೆಡ್ ಫೋರಮ್ ಆಫ್ ಬ್ಯಾಂಕ್ ಯೂನಿಯನ್ಸ್ ನಿರ್ಧರಿಸಿದೆ.

ಸೆಪ್ಟೆಂಬರ್ 11ರಂದು ಶುಕ್ರವಾರ ಮತ್ತು ನಂತರದ ಎರಡು ದಿನಗಳು ಬ್ಯಾಂಕ್ ರಜಾ ದಿನಗಳಾಗಿವೆ. ಸೆಪ್ಟೆಂಬರ್ 14 ಗಣೇಶ ಚತುರ್ಥಿ ದಿನ ಕೆಲವು ರಾಜ್ಯಗಳಲ್ಲಿ ಬ್ಯಾಂಕ್ ಗಳಿಗೆ ರಜೆ ದಿನ. 11ರಂದು ಮುಷ್ಕರ ನಡೆದರೆ, ದೇಶದ ಹಲವು ಭಾಗಗಳಲ್ಲಿ ನಾಲ್ಕು ದಿನಗಳವರೆಗೆ ಬ್ಯಾಂಕಿಂಗ್ ಸೇವೆಗಳು

ಪುಟ 2ಕ್ಕೆ




## 8ನೇ ದಿನದ ಕಲಾಪವೂ ಬಲಿ

### ಸಚಿವ ನಾಗೇಂದ್ರ ರಾಜೀನಾಮೆಗೆ ವಿಪಕ್ಷಗಳ ಘೋಷಣೆ

**ಬೆಂಗಳೂರು:** ವಿಧಾನ ಮಂಡಲದ 8ನೇ ದಿನ ಕಲಾಪವೂ ಸಚಿವ ನಾಗೇಂದ್ರ ರಾಜೀನಾಮೆ ಗದ್ದಲಕ್ಕೆ ಬಲಿಯಾಯಿತು. ಸದನ ಪ್ರಾರಂಭ ಆದ ಕೂಡಲೇ ವಿಪಕ್ಷಗಳು ನಾಗೇಂದ್ರ



ವಜಾ ಮಾಡುವಂತೆ ಘೋಷಣೆ ಕೂಗಿ ಗದ್ದಲ ಎಬ್ಬಿಸಿದರು. ಹೀಗಾಗಿ ಯಾವುದೇ ಚರ್ಚೆ ನಡೆಯದೆ ಕಲಾಪ ವ್ಯರ್ಥವಾಯಿತು.

ವಿಧಾನ ಪರಿಷತ್ ನಲ್ಲಿ ಸಭಾಪತಿಗಳು ಮನವಿ ಮಾಡಿದರೂ ಸದಸ್ಯರು ಕಲಾಪಕ್ಕೆ ಅವಕಾಶ ನೀಡಲಿಲ್ಲ. ಈ ವೇಳೆ ಕಾಂಗ್ರೆಸ್ ಸದಸ್ಯರಾದ ಐವಾನ್ ಡಿಸೋಜ, ಹರಿಪ್ರಸಾದ್ ಗಲಾಟೆ ಮಾಡುವ ಸದಸ್ಯರನ್ನ ಹೊರಗೆ ಹಾಕಿ ಎಂದು ಮನವಿ ಮಾಡಿದರು. ಸಭಾನಾಯಕ ಯತೀಂದ್ರ ಕೂಡ ವಿಪಕ್ಷಗಳ ನಡೆಗೆ ಆಕ್ರೋಶ ವ್ಯಕ್ತಪಡಿಸಿ ದರು. ಇದಕ್ಕೂ ಕ್ಯಾರೇ ಎನ್ನದ ವಿಪಕ್ಷಗಳು ಘೋಷಣೆ ಕೂಗಿದರು. ಸರ್ಕಾರದ ವಿರುದ್ಧ ಹಾಡು ಹೇಳಿ ಬಿಜೆಪಿ ಸದಸ್ಯರು ಘೋಷಣೆ ಕೂಗಿದರು. ವಿಪಕ್ಷಗಳ ಗಲಾಟೆ ನಡುವೆ ಸಭಾಪತಿಗಳು ಪ್ರಶ್ನೋತ್ತರ ಕಲಾಪ, ಶೂನ್ಯ ವೇಳೆ ಕಲಾಪ, ಗಮನ ಸೆಳೆಯುವ ಸೂಚನೆ ಕಲಾಪ ನಡೆಸಿದರು. ವಿಪಕ್ಷಗಳು ಯಾವುದೇ ಕಲಾಪದಲ್ಲಿ ಭಾಗಿಯಾಗದೇ ಘೋಷಣೆ ಕೂಗಿದರು.

## ಮೋಡ ಬಿತ್ತನೆಗೆ ನಿರ್ಧಾರ

**ಬೆಂಗಳೂರು:** ರಾಜ್ಯದಲ್ಲಿ ತೀವ್ರ ಮಳೆ ಕೊರತೆ ಮತ್ತು ಜಲಾಶಯಗಳಿಗೆ ಒಳಹರಿವು ಕುಸಿದಿರುವ ಹಿನ್ನೆಲೆಯಲ್ಲಿ ಮೋಡ ಬಿತ್ತನೆ ಕೈಗೊಳ್ಳಲು ರಾಜ್ಯ ಸರ್ಕಾರ ಈಗಾಗಲೇ ನಿರ್ಧಾರ ಕೈಗೊಂಡಿದೆ.

ವಿಧಾನಸೌಧದಲ್ಲಿ ಜಲಸಂಪನ್ಮೂಲ ಸಚಿವ ಎನ್.ಚಲುವರಾಯಸ್ವಾಮಿ ನೇತೃತ್ವದಲ್ಲಿ ಸೋಮವಾರ ನಡೆದ ಉನ್ನತ ಮಟ್ಟದ ಪರಿಶೀಲನಾ ಸಭೆಯಲ್ಲಿ

ಮುಂಗಾರು ಮಾರುತಗಳ ಪ್ರಸ್ತುತ ಸ್ಥಿತಿಗತಿ ಮತ್ತು ಪ್ರಮುಖ ಜಲಾಶಯಗಳಲ್ಲಿನ ನೀರಿನ ಸಂಗ್ರಹದ ಕುರಿತು ಕೂಲಂಕಷವಾಗಿ ಚರ್ಚೆ

ಪುಟ 2ಕ್ಕೆ



## ಕಾವೇರಿ: ರಾಜ್ಯಕ್ಕೆ ಮತ್ತೆ ಶಾಕ್

### ನಿತ್ಯ 9 ಸಾವಿರ ಕ್ಯೂಸೆಕ್ ನೀರು ಹರಿಸಲು ಸೂಚನೆ

**ನವದೆಹಲಿ:** ಕಾವೇರಿ ನದಿ ನೀರು ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ಕರ್ನಾಟಕಕ್ಕೆ ಮತ್ತೆ ತೀವ್ರ ಹಿನ್ನಡೆಯಾಗಿದೆ. ತಮಿಳುನಾಡಿಗೆ ಮುಂದಿನ 15 ದಿನಗಳ ಕಾಲ ಪ್ರತಿದಿನ 9,000 ಕ್ಯೂಸೆಕ್ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ಸೋಮವಾರ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ.

ದೆಹಲಿಯಲ್ಲಿ ಸೋಮವಾರ ಸಿಡಬ್ಲ್ಯೂಆರ್‌ಸಿ ಮುಖ್ಯಸ್ಥ ವಿನೀತ್ ಗುಪ್ತಾ ಅವರ ನೇತೃತ್ವದಲ್ಲಿ ನಡೆದ 141ನೇ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಈ ಆದೇಶದಿಂದ ಕರ್ನಾಟಕ ಮುಂದಿನ 15 ದಿನಗಳ ಕಾಲ ತಮಿಳುನಾಡಿಗೆ 12 ಸಾವಿರ ಬದಲಿಗೆ ಈಗ 9 ಸಾವಿರ ಕ್ಯೂಸೆಕ್ ನೀರು ಹರಿಸಬೇಕಾಗಿದೆ.

ಮೊದಲ ಬಾರಿಗೆ 15 ದಿನಗಳ ಕಾಲ ಮೂರು ಸಾವಿರ ಕ್ಯೂಸೆಕ್ ನೀರು ಬಿಡಲು ಕರ್ನಾಟಕಕ್ಕೆ ಆದೇಶಿಸಲಾಗಿತ್ತು. ಎರಡನೇ ಬಾರಿಗೆ 12 ಸಾವಿರ, ಈಗ ಮೂರನೇ ಬಾರಿಗೆ 9 ಸಾವಿರ ಕ್ಯೂಸೆಕ್ ನೀರು

ಪುಟ 2ಕ್ಕೆ



### 31ಕ್ಕೆ ವಿಚಾರಣೆ ನಿಗದಿ

**ನವದೆಹಲಿ:** ಕಾವೇರಿ ನೀರು ಹಂಚಿಕೆ ವಿವಾದ ಸಂಬಂಧ ನೀರು ಬಿಡುಗಡೆಯ ದತ್ತಾಂಶದ ಸಹಿತ ವರದಿ ಸಲ್ಲಿಸುವಂತೆ ಕರ್ನಾಟಕ ಮತ್ತು ತಮಿಳುನಾಡು ಸರ್ಕಾರಗಳಿಗೆ ಸೂಚಿಸಿರುವ ಸುಪ್ರೀಂ ಕೋರ್ಟ್, ಮುಂದಿನ ವಿಚಾರಣೆಯನ್ನು ಆಗಸ್ಟ್ 31ಕ್ಕೆ ಮುಂದೂಡಿದೆ.

ಕಾವೇರಿ ನೀರು ನಿರ್ವಹಣಾ

# ಮೂಲಸೌಕರ್ಯಕ್ಕೆ ಉದ್ಯಾನಗಳ ಶೇ.5ರಷ್ಟು ಭೂಮಿ ಬಳಕೆಗೆ ಅಸ್ತು

**ಬೆಂಗಳೂರು:** ಉದ್ಯಾನಗಳು ಮತ್ತು ತೋಟಗಳ ಒಟ್ಟು ವಿಸ್ತೀರ್ಣದ ಗರಿಷ್ಠ ಶೇ.5ರಷ್ಟು ಭೂಮಿಯನ್ನು ಸಾರ್ವಜನಿಕ ಮೂಲಸೌಕರ್ಯ ಯೋಜನೆಗಳಿಗೆ ಬಳಸಲು



ಅವಕಾಶ ಕಲ್ಪಿಸುವ ಕರ್ನಾಟಕ ಸರ್ಕಾರದ ಉದ್ಯಾನವನಗಳ (ಸಂರಕ್ಷಣೆ) ಕಾಯ್ದೆ 1975ರ ತಿದ್ದುಪಡಿ ಮಸೂದೆಯನ್ನು ವಿಧಾನಸಭೆಯಲ್ಲಿ ಸೋಮವಾರ ಯಾವುದೇ ಚರ್ಚೆ ಇಲ್ಲದೆ ಅಂಗೀಕರಿಸಲಾಯಿತು.

ಭ್ರಷ್ಟಾಚಾರ ಆರೋಪ ಎದುರಿಸುತ್ತಿರುವ ಸಚಿವ ಬಿ.ನಾಗೇಂದ್ರ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ವಿರೋಧ ಪಕ್ಷಗಳು ಪ್ರತಿಭಟನೆ

ಪುಟ 2ಕ್ಕೆ

## ಅದಾನಿಗೆ ಕಾರ್ಪೆಟ್, ಜನರಿಗೆ ಬಿಸ್ಕೆಟ್!

**ಬೆಂಗಳೂರು:** ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮಹತ್ವಾಕಾಂಕ್ಷೆಯ ಸುರಂಗ ರಸ್ತೆ ಯೋಜನೆಗೆ ಲಾಲ್‌ಬಾಗ್‌ನಿಂದ ಸುಮಾರು ಆರು ಎಕರೆ ಭೂಮಿಯನ್ನು ತಾತ್ಕಾಲಿಕವಾಗಿ ಮತ್ತು ಒಂದು ಎಕರೆ ಭೂಮಿಯನ್ನು ಶಾಶ್ವತವಾಗಿ ಬಳಸುವ ಅಗತ್ಯವಿದೆ ಎನ್ನಲಾಗುತ್ತಿರುವ ಸಂದರ್ಭದಲ್ಲೇ ಈ ಮಸೂದೆ ಬಂದಿದೆ.

ಈ ಯೋಜನೆಯ ಟೆಂಡರ್‌ನಲ್ಲಿ ಅದಾನಿ ಎಂಟರ್‌ಪ್ರೈಸಸ್ ಕಡಿಮೆ ಬಿಡ್‌ದಾರನಾಗಿ ಹೊರಹೊಮ್ಮಿದೆ ಎನ್ನಲಾಗಿದೆ. ಈ ಬಗ್ಗೆ ಉದ್ಯಮಿ ಗೌತಮ್ ಅದಾನಿ ಅವರು ಮುಖ್ಯಮಂತ್ರಿ ಶಿವಕುಮಾರ್ ಅವರನ್ನು ಅವರ ನಿವಾಸದಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದ್ದರು.

ಈ ಬೆಳವಣಿಗೆ ಉಲ್ಲೇಖಿಸಿದ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ, ಶಿವಕುಮಾರ್ ಅವರು ಅದಾನಿ ಜತೆ ಒಪ್ಪಂದ ಮಾಡಿಕೊಂಡಿರುವುದರಿಂದ ತರಾತುರಿಯಲ್ಲಿ ಮಸೂದೆಗೆ ಅಂಗೀಕಾರ ಪಡೆಯಲಾಗಿದೆ ಎಂದು ಆರೋಪಿಸಿದರು.

ಶಿವಕುಮಾರ್ ಅವರ ಮನೆಗೆ ಅದಾನಿ ಹೋಗಿದ್ದು ಉದ್ಯಾನವನದ ಭೂಮಿ ಪಡೆಯಲು. ರಿಯಲ್ ಎಸ್ಟೇಟ್‌ಗಾಗಿ ಭೂಮಿಯನ್ನು ಬಿಟ್ಟುಕೊಡಲು ಶಿವಕುಮಾರ್ ಅವರು ಅದಾನಿ ಜತೆ

ಪುಟ 2ಕ್ಕೆ

## ಮೊದಲ ಪುಟದಿಂದ

### ವಿಪಕ್ಷಗಳ ಗದ್ದಲದ ನಡುವೆಯೂ ಪ್ರಮುಖ ಮಸೂದೆಗಳಿಗೆ ಅಂಗೀಕಾರ

ಇಲ್ಲದೆ ಅಂಗೀಕಾರಗೊಂಡವು. ಇದು ರಾಜ್ಯದ ಜನರಿಗೆ ಸರ್ಕಾರ ಮಾಡುತ್ತಿರುವ ಅನ್ಯಾಯ ಎಂದು ಪ್ರತಿಪಕ್ಷಗಳ ನಾಯಕರು ಆಕ್ರೋಶ ವ್ಯಕ್ತಪಡಿಸಿದರು.

### ಅನುಮೋದನೆ ಪಡೆದ ಮಸೂದೆಗಳು

- **ತಿದ್ದುಪಡಿ ಮಸೂದೆ**
- **ಕರ್ನಾಟಕ ನೋಂದಣಿ ತಿದ್ದುಪಡಿ ಮಸೂದೆ**
- **ಕರ್ನಾಟಕ ಭೂ ಕಂದಾಯ ತಿದ್ದುಪಡಿ ಮಸೂದೆ**
- **ಕರ್ನಾಟಕ ಗ್ರಾಮ ಸ್ವಾರಾಜ್ ಪಂಚಾಯತ್ ರಾಜ್ (2ನೇ ತಿದ್ದುಪಡಿ) ವಿಧೇಯಕ**
- **ಕರ್ನಾಟಕ ಸರ್ಕಾರಿ ಉದ್ಯಾನಗಳ ಸಂರಕ್ಷಣೆ ತಿದ್ದುಪಡಿ ಮಸೂದೆ**

### 1.8 ಕೋಟಿ ಮತದಾರರು ಡಿಲೀಟ್

23ರೊಳಗೆ ಫಾರ್ಮ್ 6 ಸಲ್ಲಿಕೆ ಮಾಡಿದರೆ ಅಂತಿಮ ಮತದಾರರ ಪಟ್ಟಿಯಲ್ಲಿ ಹೆಸರು ಇರಲಿದೆ ಎಂದು ಹೇಳಿದರು.

### ಸರ್ಕಾರದ ವಿರುದ್ಧ ಪ್ರತಿಭಟನೆ

ವಜಾಗೊಳಿಸದಿದ್ದರೆ ಬೀದಿ ಬೀದಿಯಲ್ಲಿ ಹೋರಾಟ ನಡೆಸುತ್ತೇವೆ ಎಂದು ವಾಗ್ದಾಳಿ ನಡೆಸಿದರು.

### ಮೂಲಸೌಕರ್ಯಕ್ಕೆ ಉದ್ಯಾನಗಳ ಶೇ.5ರಷ್ಟು ಭೂಮಿ ಬಳಕೆಗೆ ಅಸ್ತು

ನಡೆಸುತ್ತಿದ್ದಾಗಲೇ ಮಸೂದೆ ಅಂಗೀಕರಿಸಿ, ಅನುಮೋದನೆ ನೀಡಲಾಯಿತು. ಈ ಮಸೂದೆಯಲ್ಲಿ ಉದ್ಯಾನ ಅಥವಾ ತೋಟದ ಒಟ್ಟು ವಿಸ್ತೀರ್ಣದ ಗರಿಷ್ಠ ಶೇ.5ರಷ್ಟು ಭೂಮಿಯನ್ನು ಮಾರಾಟ, ಗೇಣಿ, ಕೊಡುಗೆ, ವಿನಿಮಯ, ಅಡಮಾನ ಅಥವಾ ಇತರ ಯಾವುದೇ ರೀತಿಯಲ್ಲಿ ಪರಭಾರೆ ಮಾಡಲು ರಾಜ್ಯ ಸರ್ಕಾರಕ್ಕೆ ಅವಕಾಶವಿರಲಿದೆ.

### ಸೆ.11ರಂದು ಬ್ಯಾಂಕ್ ಮುಷ್ಕರ

ಬಂದ್ ಆಗಲಿವೆ. 5 ದಿನಗಳ ಬ್ಯಾಂಕಿಂಗ್ ನೀತಿ ಅನುಷ್ಠಾನದಲ್ಲಿನ ವಿಳಂಬ, ಕಾರ್ಯಕ್ಷಮತೆಗೆ ಸಂಬಂಧಿಸಿದ ಪ್ರೋತ್ಸಾಹಕ ಯೋಜನೆಯ ಮೇಲಿನ ಭಿನ್ನಾಭಿಪ್ರಾಯ ಮತ್ತು ಪಿಂಚಣಿ ಸಂಬಂಧಿತ ಸಮಸ್ಯೆಗಳು ಬೇಡಿಕೆಗಳಲ್ಲಿ ಸೇರಿವೆ.

# ಕರಡು ಮತದಾರರ ಪಟ್ಟಿ ಪ್ರಕಟ

## ಡಿಸಿ ಯಶವಂತ್ ವಿ ಗುರುಕರ್ ಹೇಳಿಕೆ | 8,28,037 ಮತದಾರರು ಪಟ್ಟಿಯಲ್ಲಿ

ರಾಮನಗರ: ಚುನಾವಣಾ ಆಯೋಗದ ನಿರ್ದೇಶನದಂತೆ ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್) ಪ್ರಕ್ರಿಯೆ ಪೂರ್ಣಗೊಂಡಿದ್ದು, ಕರಡು ಮತದಾರರ ಪಟ್ಟಿಯನ್ನು ಸೋಮವಾರ ಜಿಲ್ಲೆಯಲ್ಲಿ ಅಧಿಕೃತವಾಗಿ ಪ್ರಕಟಿಸಲಾಗಿದೆ ಎಂದು ಜಿಲ್ಲಾಧಿಕಾರಿ ಯಶವಂತ ವಿ ಗುರುಕರ್ ತಿಳಿಸಿದ್ದಾರೆ.

ಈ ಸಂಬಂಧ ಅವರ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಒಟ್ಟು 8,28,037 ಮತದಾರರು ಕರಡು ಪಟ್ಟಿಯಲ್ಲಿದ್ದಾರೆ ಎಂದು ಅವರು ತಿಳಿಸಿದರು.

**33848 ಮಂದಿ ಮರಣ**

ಜಿಲ್ಲೆಯಲ್ಲಿ ಎಸ್ಐಆರ್ ಪ್ರಕ್ರಿಯೆ ಪ್ರಾರಂಭಕ್ಕೂ ಮುನ್ನ 9,38,586 ಮತದಾರರಿದ್ದರು. ಎಸ್ಐಆರ್ ಪ್ರಕ್ರಿಯೆಯಲ್ಲಿ 1,10,549 ಮತದಾರರು ಎನ್ಯೂಮರೇಷನ್ ಫಾರಂಗಳನ್ನು ನೀಡಿರುವುದಿಲ್ಲ. ಮ್ಯಾಪಿಂಗ್ ಆಗದ 8,203 ಹಾಗೂ 11,188 ಅನಾಮಲೀಸ್ (ಹೆಸರು ಬದಲಾವಣೆ, ಪೋಷಕರ ಹೆಸರು ಬದಲಾವಣೆ, ವಯಸ್ಸಿನ ಅಂತರ) ಮತದಾರರು ಸೇರಿದಂತೆ ಒಟ್ಟು 20,191 ಜನರಿಗೆ ಬಿಎಲ್ಓ ಮೂಲಕ ನೋಟೀಸ್ ನೀಡಲಾಗುವುದು,




33,848 ಮತದಾರರು ಮರಣ ಹೊಂದಿರುತ್ತಾರೆ, 47,098 ಮತದಾರರು ಜಿಲ್ಲೆಯಿಂದ ಶಾಶ್ವತವಾಗಿ ವಲಸೆ ಹೋಗಿರುತ್ತಾರೆ, 15,761 ಈಗಾಗಲೇ ಇತರೆಡೆ ನೋಂದಾಯಿಸಿಕೊಂಡವರು, 13,061 ಗೈರು ಮತದಾರರು ಹಾಗೂ 781 ಇತರೆ ಮತದಾರರಿದ್ದಾರೆ ಎಂದವರು ಮಾಹಿತಿ ನೀಡಿದರು.

### ತಹಶೀಲ್ದಾರರ ಕಚೇರಿಯಲ್ಲೂ ಪಟ್ಟಿ ಲಭ್ಯ

ಜಿಲ್ಲೆಯ ಕರಡು ಮತದಾರರ ಪಟ್ಟಿಯನ್ನು ಬಿಎಲ್ಒಗಳು ಗ್ರಾಮ ಸಭೆಯಲ್ಲಿ ತಿಳಿಸಲಿದ್ದಾರೆ ಹಾಗೂ ಜಿಲ್ಲೆಯ ಎಲ್ಲಾ ಮತಗಟ್ಟೆಗಳಲ್ಲಿ, ಗ್ರಾಮ ಪಂಚಾಯತ್‌ಗಳಲ್ಲಿ, ತಾಲ್ಲೂಕು ಪಂಚಾಯತ್‌ಗಳಲ್ಲಿ, ತಹಶೀಲ್ದಾರ್ ಕಚೇರಿಯಲ್ಲಿ ಕರಡು ಮತದಾರರ ಪಟ್ಟಿಯ ಮಾಹಿತಿಯನ್ನು ಪ್ರಕಟಿಸಲಾಗಿದೆ, ಜಿಲ್ಲೆಯಲ್ಲಿ ಒಟ್ಟು 1,183 ಬಿಎಲ್ಒಗಳಿದ್ದಾರೆ ಎಂದರು. ನೋಟೀಸಿನಲ್ಲಿ ತಿಳಿಸಲಾದ ನಿಗದಿತ ಅವಧಿಯೊಳಗೆ ಮತದಾರರು ಲಿಖಿತ ಮನವಿಯೊಂದಿಗೆ ಮತದಾರರ ನೋಂದಣಾಧಿಕಾರಿ ಅಥವಾ ಸಹಾಯಕ ಮತದಾರರ ನೋಂದಣಾಧಿಕಾರಿಯನ್ನು ಭೇಟಿಯಾಗಲು ಸಾಧ್ಯವಾಗದಿದ್ದಲ್ಲಿ ಮತ್ತೊಂದು ಕಾಲಾವಕಾಶ ನೀಡಲಾಗುತ್ತದೆ. ಈ ಅವಧಿಯಲ್ಲಿಯೂ ಮತದಾರರು ವಿಚಾರಣೆಗೆ ಹಾಜರಾಗದಿದ್ದರೆ ಮತದಾರರ ಪಟ್ಟಿಯಿಂದ ಹೆಸರು ತೆಗೆದು ಹಾಕಲಾಗುತ್ತದೆ ಎಂದು ಅವರು ಹೇಳಿದರು.

### ಕರಡು ಮತದಾರರ ಪಟ್ಟಿಯ ಅಂಕಿ-ಅಂಶ

**ಇಂದು ಪ್ರಕಟವಾದ ಕರಡು ಮತದಾರರ ಪಟ್ಟಿಯಂತೆ ಜಿಲ್ಲೆಯಲ್ಲಿ ಒಟ್ಟು 8,28,037 ಮತದಾರರಲ್ಲಿ 4,04,863 ಪುರುಷ ಮತದಾರರು, 4,23,136 ಮಹಿಳಾ ಮತದಾರರು ಹಾಗೂ ಇತರೆ 38 ಮತದಾರರಿದ್ದಾರೆ. 18-19 ವರ್ಷ ವಯಸ್ಸಿನ 7,927 ಮತದಾರರು, 80 ವರ್ಷ ಮೇಲ್ಪಟ್ಟ 20,634 ಮತದಾರರು, 85 ವರ್ಷಕ್ಕೂ ಹೆಚ್ಚು ವರ್ಷ ಮೇಲ್ಪಟ್ಟ 7,314 ಮತದಾರರು, 10,403 ವಿಶೇಷಚೇತನ ಮತದಾರರು, 15 ವಿಐಪಿ ಮತದಾರರು, 4 ಎನ್ಆರ್ಐ ಮತದಾರರು, 160 ಸೇವಾ ಮತದಾರರಿದ್ದಾರೆ ಎಂದು ಹೇಳಿದರು. ಚುನಾವಣಾ ಆಯೋಗವು ತಿಳಿಸಿರುವಂತೆ, 1987ರ ಜುಲೈ 1ಕ್ಕಿಂತ ಮೊದಲು ಜನಿಸಿದವರಾಗಿದ್ದರೆ, ಜನ್ಮ ದಿನಾಂಕ ಮತ್ತು ಅಥವಾ ಜನ್ಮ ಸ್ಥಳವನ್ನು ದೃಢೀಕರಿಸುವ ದಾಖಲೆಯನ್ನು ಒದಗಿಸಬೇಕು. 1987 ಜುಲೈ 1ರಿಂದ 2004ರ ಡಿಸೆಂಬರ್ 2ರೊಳಗೆ ಜನಿಸಿದ್ದವರು ಜನ್ಮ ದಿನಾಂಕ, ಅಥವಾ ಜನ್ಮ ಸ್ಥಳವನ್ನು ದೃಢೀಕರಿಸುವ ದಾಖಲೆ ಜತೆಗೆ ತಂದೆ ಅಥವಾ ತಾಯಿಗೆ ಸಂಬಂಧಿಸಿದಂತೆ ಅವರ ಜನ್ಮ ದಿನಾಂಕ ಅಥವಾ ಜನ್ಮ ಸ್ಥಳವನ್ನು ದೃಢೀಕರಿಸುವ ದಾಖಲೆಗಳನ್ನು ಸಲ್ಲಿಸಬೇಕು ಎಂದು ಅವರು ಹೇಳಿದರು.**



### ಪಟ್ಟಿಯಲ್ಲಿ ಹೆಸರಿಲ್ಲವೇ? ಬಿಎಲ್ಓ ಸಂಪರ್ಕಿಸಿ

ಕರಡು ಪಟ್ಟಿಯಲ್ಲಿ ಹೆಸರಿಲ್ಲದ ಅರ್ಹ ಮತದಾರರು ನಮೂನೆ-6ರ ಮೂಲಕ ಮತದಾರರ ನೋಂದಣಾಧಿಕಾರಿಗಳು, ಬಿಎಲ್ಓ ಅಥವಾ ವೋಟರ್ ಸರ್ವಿಸ್ ಪೋರ್ಟಲ್ ಮೂಲಕ ಹೆಸರು ಸೇರ್ಪಡೆಗೆ ಅರ್ಜಿ ಸಲ್ಲಿಸಬಹುದು. 2026ರ ಅಕ್ಟೋಬರ್ 1ಕ್ಕೆ 18 ವರ್ಷ ತುಂಬುವ ಯುವ ಮತದಾರರೂ ಕೂಡ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

### ಆಕ್ಷೇಪಣೆ ಸಲ್ಲಿಸಲು ಸೆ.23ರವರೆಗೆ ಅವಕಾಶ

ಜಿಲ್ಲೆಯಾದ್ಯಂತ ಕರಡು ಮತದಾರರ ಪಟ್ಟಿ ಪ್ರಕಟಗೊಂಡಿದ್ದು, ಇಂದಿನಿಂದ 2026ರ ಸೆಪ್ಟೆಂಬರ್ 23ರ ವರೆಗೆ ಆಕ್ಷೇಪಣೆ ಸಲ್ಲಿಸಲು ಸಾರ್ವಜನಿಕರಿಗೆ ಕಾಲಾವಕಾಶ ನೀಡಲಾಗಿದೆ. ಅಕ್ಟೋಬರ್ 22ರ ವರೆಗೆ ನೋಟೀಸ್ ಹಾಗೂ ಸಲ್ಲಿಸಲಾದ ಆಕ್ಷೇಪಣೆ ಅರ್ಜಿಗಳ ವಿಲೇವಾರಿ ನಡೆಯಲಿದೆ. 2026ರ ಅಕ್ಟೋಬರ್ 27 ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಗೊಳ್ಳಲಿದೆ ಎಂದರು. ಮತದಾರರು ಹಾಗೂ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಕರಡು ಪಟ್ಟಿಯನ್ನು ಪರಿಶೀಲಿಸಿ, ಯಾವುದೇ ಹಕ್ಕು ಮತ್ತು ಆಕ್ಷೇಪಣೆಗಳಿದ್ದಲ್ಲಿ ಆಗಸ್ಟ್ 24 ರಿಂದ ಸೆಪ್ಟೆಂಬರ್ 23ರವರೆಗೆ ಆಕ್ಷೇಪಣೆ ಸಲ್ಲಿಕೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

### 31ಕ್ಕೆ ವಿಚಾರಣೆ ನಿಗದಿ

ಪ್ರಾಧಿಕಾರದ ಆದೇಶದ ಪ್ರಕಾರ ತಮಿಳುನಾಡಿಗೆ ಕರ್ನಾಟಕ ನೀರು ಹರಿಸಿದೆ. ಅದರೆ, ನ್ಯಾಯಮಂಡಳಿ ತೀರ್ಪಿಗೆ ಅನುಗುಣವಾಗಿ ನೀರು ಹರಿದಿಲ್ಲ ಎಂದು ತಮಿಳುನಾಡು ಸರ್ಕಾರ ಪರ ವಕೀಲರು ವಾದಿಸಿದರು.

ಕರ್ನಾಟಕವು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶ ಪಾಲಿಸಿರುವುದರಿಂದ ನಿಮಗೆ ಸಮಸ್ಯೆ ಏನಿದೆ. ಉಳಿದ ವಿಷಯಕ್ಕೆ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸುವಂತೆ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು ಸಲಹೆ ನೀಡಿದೆ. ಅತ್ಯಂತ ಸಂಕಷ್ಟದ ಹೊರತಾಗಿಯೂ ತಮಿಳುನಾಡಿಗೆ ಪ್ರತಿದಿನ 12,000 ಕ್ಯುಸೆಕ್ ನೀರು ಹರಿಸಲಾಗುತ್ತಿದೆ ಎಂದು ಆ.17ರಂದು ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್ಗೆ ತಿಳಿಸಿತ್ತು. ನೆರೆ ರಾಜ್ಯಕ್ಕೆ ಕಾವೇರಿ ನೀರು ಹರಿಸುವಿಕೆಗೆ ಸಂಬಂಧಿಸಿದಂತೆ ಪಾಲನಾ ವರದಿ ಸಲ್ಲಿಸುವಂತೆ ಕರ್ನಾಟಕಕ್ಕೆ ನ್ಯಾಯಾಲಯ ನಿರ್ದೇಶನ ನೀಡಿತ್ತು.

### ಭೂಮಿ ಬಳಕೆಗೆ ಅಸ್ತು

ಶಾಮೀಲಾಗಿದ್ದಾರೆ ಎಂದು ಅಶೋಕ ಆರೋಪಿಸಿದರು. ಅದಾನಿಗೆ ಕಾರ್ಪೆಟ್, ಜನರಿಗೆ ಬಿಸ್ಕೆಟ್ ಎಂದು ಅವರು ಘೋಷಣೆ ಕೂಗಿದರು. ಲಾಲ್‌ಬಾಗ್‌ನ ಶೇ.5ರಷ್ಟು ಭೂಮಿ ಎಂದರೆ ಸುಮಾರು 10 ಎಕರೆ ಆಗಲಿದೆ ಎಂದು ಅವರು ಹೇಳಿದರು.

**ಮೊದಲ ಪುಟದಿಂದ**

### ರಾಜ್ಯಕ್ಕೆ ಮತ್ತೆ ಶಾಕ್

ಬಿಡಲು ಸೂಚಿಸಲಾಗಿದೆ. ಅಲ್ಲದೆ, ಸಿಡಬ್ಲ್ಯೂಆರ್‌ಸಿಯ ಈ ಆದೇಶದ ಕುರಿತು ನಾಳೆ ನಡೆಯಲಿರುವ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಅಂತಿಮ ನಿರ್ಧಾರ ಹೊರಬೀಳುವ ಸಾಧ್ಯತೆ ಇದೆ.

### ನಾಳೆ ಗಜಪಯಣ

ಸಲ್ಲಿಸುವ ಮೂಲಕ ಗಜಪಡೆಗೆ ಚಾಲನೆ ನೀಡಲಿದ್ದಾರೆ. ಮೊದಲ ಹಂತದಲ್ಲಿ ಒಂಭತ್ತು ಆನೆಗಳು ಮೈಸೂರಿನತ್ತ ಪ್ರಯಾಣ ಬೆಳೆಸಲಿವೆ.

### ಬಿತ್ತನೆಗೆ ನಿರ್ಧಾರ

ನಡೆಸಲಾಯಿತು. ಮಳೆ ಕೊರತೆ ನೀಗಿಸಲು ಸರ್ಕಾರ ಕೈಗೊಂಡ ನಿರ್ಧಾರದಂತೆ ಇಂದಿನಿಂದಲೇ ಮೋಡ ಬಿತ್ತನೆ ಸಾಧ್ಯತಾ ಅಧ್ಯಯನ ಅಧಿಕೃತವಾಗಿ ಆರಂಭಗೊಂಡಿದೆ. ಈ ಅಧ್ಯಯನದ ವರದಿ ಮತ್ತು ಸಾಧಕ-ಬಾಧಕಗಳನ್ನು ಪರಿಶೀಲಿಸಲು ಮತ್ತೊಂದು ಉನ್ನತ ಮಟ್ಟದ ಪುನರ್ ಪರಿಶೀಲನಾ ಸಭೆ ಕರೆಯಲಾಗಿದೆ.

## 15.50ಕೋಟಿ ರೂ. ಕಾಮಗಾರಿಗೆ ಹರೀಶ್‌ಗೌಡ ಚಾಲನೆ

ಮೈಸೂರು: ಮಹಾನಗರ ಪಾಲಿಕೆಯ ವಲಯ ಕಚೇರಿ-4ರ ವ್ಯಾಪ್ತಿಯ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ-2.0 ಅನುದಾನದಲ್ಲಿ ಒಟ್ಟು 15.50 ಕೋಟಿ ರೂ. ವೆಚ್ಚದಲ್ಲಿ ಹಮ್ಮಿಕೊಳ್ಳಲಾಗಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್ ಗೌಡ ಗುದ್ದಲಿ ಪೂಜೆ ನೆರವೇರಿಸಿದರು.

ಬೆ.9.30ಕ್ಕೆ ವಾರ್ಡ್ ನಂ.21ರ ಚದುರಂಗ ರಸ್ತೆಯಲ್ಲಿ (ಜೆ.ಸಿ ಕಾಲೇಜು ರಸ್ತೆ) ಹುಣಸೂರು ರಸ್ತೆಯಿಂದ ಬೋಗಾದಿ ರಸ್ತೆಯವರೆಗೆ 12.50ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ, ಚರಂಡಿ ಮತ್ತು ಪಾದಚಾರಿ ಮಾರ್ಗ ಅಭಿವೃದ್ಧಿ ಕಾಮಗಾರಿಗೆ ದಿವಂಗತ ಶಂಕರನಾಗ್ ವೃತ್ತದಲ್ಲಿ ಗುದ್ದಲಿ ಪೂಜೆ ನೆರವೇರಿಸಿ, ನಂತರ ವಾರ್ಡ್ ನಂ.6ರ ನಂದಗೋಕುಲ ಬಡಾವಣೆಯಲ್ಲಿ 3 ಕೋಟಿ ವೆಚ್ಚದಲ್ಲಿ ಅಡ್ಡರಸ್ತೆಗಳಲ್ಲಿ ಚರಂಡಿ ಮತ್ತು ಕಾಂಕ್ರೀಟ್ ರಸ್ತೆ, ಇ. ಡಬ್ಲ್ಯೂ.ಎಸ್ ಬಡಾವಣೆ ರಸ್ತೆಗಳಲ್ಲಿ ಚರಂಡಿ ಹಾಗೂ ಉದ್ಯಾನವನದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ-2.0 ರಡಿಯಲ್ಲಿ ನಗರಕ್ಕೆ 250 ಕೋಟಿಗಳ ಅನುದಾನ ಬಂದಿದ್ದು, ಈ ಪೈಕಿ ಚಾಮರಾಜ ಕ್ಷೇತ್ರಕ್ಕೆ 85 ಕೋಟಿ ರೂ. ಗಳು ನೀಡಿದ್ದು, ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಬದ್ಧವಾಗಿದ್ದು,



ಗುಣಮಟ್ಟದ ರಸ್ತೆ ಮತ್ತು ಶಾಶ್ವತವಾಗಿ ಮೂಲಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ವಾರ್ಡ್ ವಾರು ಸಭೆ ನಡೆಸಿ ಸ್ಥಳೀಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ ಕಾಮಗಾರಿ ಕೈಗೊಳ್ಳುತ್ತಿದ್ದು ಕನಿಷ್ಠ 20 ವರ್ಷಗಳು ಕಾಮಗಾರಿ ಶಾಶ್ವತವಾಗಿರಲಿವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಎಸ್ ಇ ಸಿಂಧು, ಇಇ ಶ್ರೀನಿವಾಸ್, ಇಂಜಿನಿಯರ್ಗಳಾದ ರಾಮಣ್ಣ, ಸಿದ್ದರಾಮೇಶ್, ಮಾಜಿ ಮಹಾಪೌರ ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ನಗರಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ, ಮುಖಂಡರಾದ ಭಾಸ್ಕರ್ ಗೌಡ, ಶ್ರೀನಿವಾಸ್, ಸುಧೀರ್, ಟೆಂಟ್ ಶ್ರೀನಿವಾಸ್, ಮೈಸೂರು ವಿ.ವಿ.ಸಿಂಡಿಕೇಟ್ ಸದಸ್ಯ ಮಹದೇಶ್, ಇಂದಿರಾಗಾಂಧಿ ಬ್ಲಾಕ್ ಕಾರ್ಯದರ್ಶಿ ರಾಮಚಂದ್ರು, ರವಿ ಪೂಜು, ರಾಜಣ್ಣ, ಯುವ ಕಾಂಗ್ರೆಸ್ ಅಧ್ಯಕ್ಷರಾದ ನಿಶಾಂತ್ ಪಟೇಲ್, ವಾರ್ಡ್ ಅಧ್ಯಕ್ಷ ದಿನೇಶ್, ಗಿರಿಜಾಂಬ, ಬ್ಲಾಕ್ ಅಧ್ಯಕ್ಷ ಮಾಯಮ್ಮ, ಲಕ್ಷ್ಮೀ ಶಿವರಾಜು, ಆಶ್ರಯ ಸಮಿತಿ ಸದಸ್ಯರಾದ ಮಂಜುನಾಥ್, ಇಬ್ರಾಹಿಂ, ರಾಣಿ ಸಿದ್ದಪ್ಪಾಜಿ ಸೇರಿ ಇತರರು ಭಾಗಿಯಾಗಿದ್ದರು.

# ರಾಹುಲ್ ಗಾಂಧಿ ದೇಶದಲ್ಲಿರಲು ನಾಲಾಯಕ್: ಕೇಂದ್ರ ಸಚಿವ ವಿ.ಸೋಮಣ್ಣ

ಮೈಸೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಫೋಟೊ ಪೊಲೀಸ್ ಠಾಣೆಯಲ್ಲಿ ಹಾಕಿರುವ ಬಗ್ಗೆ ಮಾತನಾಡಿರುವ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ದೇಶದಲ್ಲಿರಲು ನಾಲಾಯಕ್ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ವಾಗ್ದಾಳಿ ನಡೆಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪೊಲೀಸ್ ಠಾಣೆಯಲ್ಲಿ ಅಮಿತ್ ಶಾ ಫೋಟೋ ನೋಡಿ ರಾಹುಲ್ ಗಾಂಧಿ ಕಿಡಿಕಾರಿದ್ದಾರೆ. ರಾಹುಲ್ ಗಾಂಧಿಗೆ ಈ ದೇಶದ ಇತಿಹಾಸ, ಸಂಸ್ಕೃತಿ ಏನು ಗೊತ್ತಿಲ್ಲ, 10 ದಿನ ಭಾರದಲ್ಲಿ 20 ದಿನ ವಿದೇಶದಲ್ಲಿರುತ್ತಾರೆ. ಇವರಿಗೆ ಇಲ್ಲಿನ ಕಾನೂನು ತಿಳಿದಿಲ್ಲ. ಅಮಿತ್ ಶಾ ಫೋಟೊ ಹಾಕದೆ ಇನ್ಯಾರ ಫೋಟೊ ಹಾಕಬೇಕಿತ್ತು? ನಿಮ್ಮ ಅಪ್ಪ, ತಾತ,ಅಜ್ಜಿ, ಫೋಟೋ ಹಾಕಿರಲಿಲ್ವಾ? ರಾಜ್ಯದಲ್ಲಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಫೋಟೋ ಹಾಕಿಲ್ವಾ? ಅಮಿತ್ ಶಾ ದೇಶದ ನಕ್ಸಲಿಸಂ ನ ಹೊಸಕಿ ಹಾಕಿದ್ದಾರೆ. ಅವರನ್ನು ಟೀಕಿಸುವ ಶಕ್ತಿ ನಿಮ್ಮಲ್ಲಿಲ್ಲ ಎಂದು ಹೇಳಿದರು.

ಕಾಂಗ್ರೆಸ್ 70 ವರ್ಷಗಳಿಂದ ಮಾಡಿದ ಪಾಪವನ್ನು ಬಿಜೆಪಿ 12 ವರ್ಷದಿಂದ ತೊಳೆಯುತ್ತಿದೆ. ಇದಕ್ಕಾದರು ರಾಹುಲ್ ಗಾಂಧಿ ಕೃತಘ್ನತೆ ಹೇಳಬೇಕಿತ್ತು. ಯಾರನ್ನೊ ಹಿಡಿದುಕೊಂಡು ಏನೊ ಅಗಿಬಿಡುತ್ತೇನೆ ಎಂದು ರಾಹುಲ್ ಗಾಂಧಿ ಹೊರಟರೆ ಅದರಿಂದ ಏನೂ ಪ್ರಯೋಜನ ಇಲ್ಲ. ಕೇಂದ್ರ ಸಚಿವರಿಗೆ ರೈಲ್ವೆ ಅಭಿವೃದ್ಧಿ ವಿಚಾರವಾಗಿ ರಾಜ್ಯದ ಸ್ಪಂದನೆ ಸಿಗುತ್ತಿದ್ಯಾ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿದ ಸಚಿವ ವಿ.ಸೋಮಣ್ಣ, ತಕ್ಕ ಮಟ್ಟಿಗೆ ಸಾಕಾರ ಕೊಡುತ್ತಿದ್ದಾರೆ. ಹಳೇ ಯೋಜನೆಗಳು ನಡೆಯುತ್ತಿದೆ. ಹೊಸ ಯೋಜನೆಗಳಿಗೆ ದುಡ್ಡಿಲ್ಲ ಎಂದು ಈ ಹಿಂದೆಯೇ ಪತ್ರ ಬರೆದಿದ್ದಾರೆ. ರಾಜ್ಯದಲ್ಲಿ ಈಗ ಹೊಸ ಸಿಎಂ ಇದ್ದಾರೆ, ಇಂದ್ರ ಮಾಡ್ತೀನಿ ಚಂದ್ರ ಮಾಡ್ತೀನಿ ಅಂತಿದ್ದಾರೆ, ಇನ್ನು 2 ತಿಂಗಳು ಕಾದು ನೋಡೋಣ, ಏನು ಮಾಡ್ತಾರೆ ಗೊತ್ತಾಗತ್ತದೆ.



ಕಾಂಗ್ರೆಸ್ ನಲ್ಲಿ ಬುದ್ಧಿವಂತರನ್ನು ಬೆಳೆಯೋಕೆ ಬಿಡಲ್ಲ, ಸಿಎಂ ಕಾಲೆಳೆಯಲೂ ಶುರು ಮಾಡ್ತಾರ ಕಾದು ನೋಡಬೇಕು, ಸಿದ್ದರಾಮಯ್ಯ ಸ್ಥಿತಿ ಏನಾಯ್ತು ನೋಡಿದ್ರಲ್ಲ, 15 ನಿಮಿಷಕ್ಕೆ ಕಿತ್ತು ಬಿಸಾಕಿದರು. ಅವರ ಪಕ್ಷದವರೇ ಅವರ ಕಾಲು ಎಳೆಯಬಹುದು ಎಂದು ಪರೋಕ್ಷವಾಗಿ ಸಿಎಂ ಡಿ. ಕೆ.ಶಿವಕುಮಾರ್ ಹುಷರಾಗಿರಿ ಎಂದರು.

ರಾಜ್ಯ ರಾಜಕೀಯಕ್ಕೆ ಸೋಮಣ್ಣ ಬರ್ತಾರೆ ಎಂಬ ವಿಚಾರ ಕುರಿತು ಮಾತನಾಡಿದ ಅವರು, ನನಗೆ ದೇಶ ಮುಖ್ಯ. ಕೇಂದ್ರ ಸರ್ಕಾರದಲ್ಲಿ ಮಂತ್ರಿಯಾಗಿ ಕೆಲಸ ಮಾಡುತ್ತಿದ್ದೇನೆ. ವರಿಷ್ಠರು ಹೇಳಿದ್ದನ್ನು ಮಾಡುತ್ತಿದ್ದೇನೆ. ರಾಜ್ಯದಲ್ಲಿ ಅನೇಕ ಬುದ್ಧಿವಂತರಿದ್ದಾರೆ ಪಕ್ಷವು ಬಲವಾಗಿದೆ, ರಾಜ್ಯ ರಾಜಕೀಯಕ್ಕೆ ಬರುವ ಬಗ್ಗೆ ಸದ್ಯಕ್ಕೇನು ಹೇಳಲ್ಲ,ಎಲ್ಲವೂ ವರಿಷ್ಠರಿಗೆ ಬಿಟ್ಟ ವಿಚಾರ ಎಂದು ಹೇಳಿದರು.

ಕೇರಳದ ಪಲ್ಲಕ್ಕಡ್ ವಿಭಾಗದಿಂದ ಮಂಗಳೂರು ರೈಲ್ವೆ ಮೈಸೂರಿಗೆ ಸೇರಿಸಿದ ವಿಚಾರದ ಬಗ್ಗೆ ಮಾತನಾಡಿ, ಕಳೆದ 22 ವರ್ಷಗಳಿಂದ ನಮ್ಮ ಭಾಗ ಕೇರಳಕ್ಕೆ ಸೇರಿತ್ತು. ಮಂಗಳೂರು ಭಾಗದ ಸಂಸದರು ಮನವಿ ಮಾಡಿದ್ದರು. ಕೆಲ ವರ್ಷಗಳಿಂದ ಅನೇಕ ನಾಯಕರು ಮಂಗಳೂರು ರೈಲ್ವೆ ವಿಭಾಗವನ್ನು ನಮ್ಮಲ್ಲೇ ಇರಲಿ ಎಂದಿದ್ರೂ

ನಾನು ಕೇಂದ್ರ ಸಚಿವರ ಜೊತೆ ಮಾತನಾಡಿ ಮಂಗಳೂರು ಭಾಗವನ್ನು ಮೈಸೂರಿಗೆ ಸೇರಿಸಿದ್ದೇನೆ. ಇದರಿಂದ ರಾಜ್ಯದ ಅನೇಕರಿಗೆ ಉದ್ಯೋಗ ಸಿಗತ್ತೆ ಜನರಿಗೆ ಅನುಕೂಲ ಆಗತ್ತೆ. ಕೇರಳದ ಸಿಎಂ ಸೇರಿ ಅನೇಕರು ವಿರೋಧ ಮಾಡಿದ್ದಾರೆ. ಆದರೆ, ಟೆಕ್ನಿಕಲ್ ಟೀಮ್ ಮಾಡಿ ವರದಿ ತರಿಸಿ ಇದನ್ನು ಮಾಡಿರುವುದಾಗಿ ಸ್ಪಷ್ಟಪಡಿಸಿದರು.

# ತ.ನಾಡಿಗೆ ನೀರು ಮೈಸೂರಲ್ಲಿ ಆಕ್ರೋಶ

ಮೈಸೂರು: ತಮಿಳುನಾಡಿಗೆ ಕಬಿನಿ ನಾಲೆಯಿಂದ ನೀರು ಬಿಡುಗಡೆಯನ್ನು ವಿರೋಧಿಸಿ ಮೈಸೂರಿನಲ್ಲಿ ವಿವಿಧ ರೈತಪರ ಸಂಘಟನೆಗಳು ರಸ್ತೆ ತಡೆ, ಕಾಡಾ ಕಚೇರಿಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಬಡಗಲಪುರ ನಾಗೇಂದ್ರ ನೇತೃತ್ವದ ರೈತರು ಕಾಡಾ ಕಚೇರಿಗೆ ಮುತ್ತಿಗೆ ಹಾಕಿದರು. ಈ ವೇಳೆ ಪೊಲೀಸರು ಬ್ಯಾರಿಕೇಡ್ ಅಳವಡಿಸಿ ತಡೆದ ಹಿನ್ನೆಲೆಯಲ್ಲಿ ರಸ್ತೆ ತಡೆದು ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಪೊಲೀಸರು ತಡೆಯಲು ಬಂದ ಹಿನ್ನೆಲೆಯಲ್ಲಿ ರಸ್ತೆಯಲ್ಲೇ ಬಸ್ ಕೆಳಗೆ ಮಲಗಿ ತಮಿಳುನಾಡಿಗೆ ನೀರು ಬಿಡುಗಡೆ ಮಾಡದಂತೆ ಆಕ್ರೋಶ ಹೊರಹಾಕಿದರು. ಕರ್ನಾಟಕ ರಾಜ್ಯ ರೈತ ಸಂಘದಿಂದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಮಂಡ್ಯದ ಹೋರಾಟಗಾರರಿಗೆ ಮನ್ನಣೆ ನೀಡುತ್ತಾರೆ. ಮೈಸೂರು ಭಾಗದ ರೈತರಿಗೆ ಯಾಕೆ ಸ್ಪಂದಿಸಲ್ಲ. ನಾವು ಚಲುವರಾಯಸ್ವಾಮಿ ಅವರನ್ನು ಮನವಿ ಮಾಡಿದ್ದೇವೆ. ಶಾಸಕ ದರ್ಶನ್ ಪುಟ್ಟಣ್ಣಯ್ಯ ಜೊತೆ ಮನವಿ ಮಾಡಿದ್ದೆವು. ಚಲುವರಾಯಸ್ವಾಮಿ ಕರೆ ಮಾಡಿ ಮನವಿ ಮಾಡಿದ್ದಾರೆ. ಮುತ್ತಿಗೆಯನ್ನ ನಿಲ್ಲಿಸಿ ಅಂತ ಹೇಳಿದರು. ನಾವು ಯಾವುದೇ ಕಾರಣಕ್ಕೂ ಹೋರಾಟದಿಂದ ಹಿಂದೆ ಸರಿಯಲ್ಲ. ಕಬಿನಿ ಅಚ್ಚುಕಟ್ಟು ಪ್ರದೇಶದ ರೈತರ ಹಿತ ಕಾಯಿರಿ. ಡ್ಯಾಂ ನಿರ್ಮಾಣಕ್ಕಾಗಿ ಆದಿವಾಸಿಗಳು ನಿವಾಸ ಕಳೆದುಕೊಂಡಿದ್ದಾರೆ. 42 ಗ್ರಾಮಗಳು ಮುಳುಗಡೆ ಆಗಿವೆ. ಡ್ಯಾಂಗಾಗಿ ಮನೆ,ಮಠ ಕಳೆದುಕೊಂಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು.









ಕಬಿನಿ ಡ್ಯಾಂ ಇರುವುದು ತಮಿಳುನಾಡು ವಿವಾದಕ್ಕೆ ಮಾತ್ರ ಇಲ್ಲವಾದರೆ ಬೆಂಗಳೂರಿಗರಿಗೆ ಕುಡಿಯೋದಕ್ಕೆ ಮಾತ್ರ ಬೇಕು. ಯಾವುದೇ ರಾಜಕಾರಣಿಗಳು ಇದರ ಬಗ್ಗೆ ಗಮನ ಹರಿಸಲ್ಲ. ಮಾಜಿ ಪ್ರಧಾನಿ ದೇವೇಗೌಡ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಎಸ್.ಎಂ.ಕೃಷ್ಣ, ಡಿಕೆ ಶಿವಕುಮಾರ್ ಎಲ್ಲರೂ ಅಧಿಕಾರಕ್ಕೆ ಮುಗಿಬಿದ್ದರು. ರೈತರ ಹಿತವನ್ನ ಯಾರೂ ಕಾಪಾಡಲಿಲ್ಲ. ಕಬಿನಿ ಹಿತ ಕಾಯದಿದ್ದರೆ ಕುರ್ಚಿ ಕಸಿದುಕೊಳ್ಳುತ್ತೇವೆ. ಸಿಎಂ ಡಿ.ಕೆ.ಶಿವಕುಮಾರ್ ಕುರ್ಚಿ ಕಿತ್ತುಕೊಳ್ಳುತ್ತೇವೆ ಎಂದು ಹರಿಹಾಯ್ದರು. ಕಬಿನಿ ಡ್ಯಾಂ ಬಾಗಿಲು ಬಂದ್ ಮಾಡುತ್ತೇವೆ. ತಕ್ಷಣ ತಮಿಳುನಾಡಿಗೆ ನೀರು ನಿಲ್ಲಿಸಿ. ಕಬಿನಿಯನ್ನ ವಶಕ್ಕೆ ಪಡೆದುಕೊಳ್ಳುತ್ತೇವೆ. ಕಬಿನಿ ಡ್ಯಾಂ ನಾವೇ ಮುಚ್ಚುತ್ತೇವೆ ಎಂದು ಆಕ್ರೋಶ ಹೊರಹಾಕಿದರು. ಹೊಸಕೋಟೆ ಬಸವರಾಜು, ಹೊಸೂರು ಕುಮಾರ, ಪಿ.ಮರಂಕಯ್ಯ, ಆನಂದೂರು ಪ್ರಭಾಕರ್, ಕೆಆರ್.ಪುರ ಮಹೇಶ್, ಕರೋಟಿ ಕುಮಾರಸ್ವಾಮಿ, ಬೆಂಕಿಪುರ ಚಿಕ್ಕಣ್ಣ, ರವಿಕುಮಾರ್, ಪ್ರೇಮ್ ಕುಮಾರ್, ಮುದ್ದುರಾಜು ಕಂದಗಾಲ ಶ್ರೀನಿವಾಸ್ ಇನ್ನಿತರರು ಇದ್ದರು.

### ಕಬಿನಿ-ಕಾವೇರಿ ಅಚ್ಚುಕಟ್ಟು ರೈತರ ಬೆಳೆಗಳಿಗೆ ನೀರು ಹರಿಸುವಂತೆ ಒತ್ತಾಯಿಸಿ ರೈತರ ಪ್ರತಿಭನೆ

**ಜಿಲ್ಲಾಧಿಕಾರಿ ಕಚೇರಿಯಲ್ಲೂ ಪ್ರತಿಭಟನೆ:** ಕಬಿನಿ-ಕಾವೇರಿ ಅಚ್ಚುಕಟ್ಟು ರೈತರ ಬೆಳೆಗಳಿಗೆ ನೀರು ಹರಿಸುವಂತೆ ಒತ್ತಾಯಿಸಿ ಕಬಿನಿ ರೈತ ಹಿತ ರಕ್ಷಣಾ ಸಮಿತಿ ಹಾಗೂ ರಾಜ್ಯ ರೈತ ಸಂಘಟನೆಗಳ ಒಕ್ಕೂಟದಿಂದ ಪ್ರತಿಭನೆ ನಡೆಸಲಾಯಿತು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಸೋಮವಾರ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ಜಮಾಯಿಸಿದ ರೈತರು ಬೇಕೆ ಬೇಕು ನೀರು ಬೇಕು ಎಂದು ಘೋಷಣೆಗಳನ್ನು ಕೂಗಿದರು. ನೀರಾವರಿ ಸಲಹಾ ಸಮಿತಿ ಸಭೆಯನ್ನು ಈ ಭಾಗದ ರೈತರ ಸಮಸ್ಯೆಗಳನ್ನು ಆಲಿಸಿ, ಮೈಸೂರಿನಲ್ಲಿ ನಡೆಸಬೇಕು ಅದನ್ನು ಬಿಟ್ಟು ಬೆಂಗಳೂರಿನ ವಿಕಾಸಸೌಧದಲ್ಲಿ ನಡೆಸುತ್ತಿರುವುದು ಸರಿಯಾದ ಕ್ರಮ ಅಲ್ಲ ಇದು ಖಂಡನೀಯ ಮುಂದೆ ಈ ರೀತಿಯ ಬೆಳವಣಿಗೆ ನಡೆಸಬಾರದು ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ಇದೇ ವೇಳೆ ಕುರುಬೂರು ಶಾಂತಕುಮಾರ್ ಮಾತನಾಡಿ, ಕಬಿನಿ ಜಲಾಶಯ ಭರ್ತಿಯಾಗಿ 25 ದಿನಗಳು ಕಳೆದಿದೆ. ಅಚ್ಚುಕಟ್ಟು ಭಾಗದ ರೈತರ ಬೆಳೆಗಳಿಗೆ ನೀರು ಬಿಡಬೇಕಾದ ಸರ್ಕಾರದ ತಮಿಳುನಾಡಿಗೆ ನೀರನ್ನು ಹರಿಸಿದ ಕಾರಣ ತುಂಬಿದ ಜಲಾಶಯ 10 ಅಡಿಗಳಷ್ಟು ಖಾಲಿಯಾಗಿದೆ. ಈಗ ರೈತರನ್ನು ಮರೆಮಾಚಿ ನಿರ್ಧಾರ ಕೈಗೊಳ್ಳಲು ಬೆಂಗಳೂರಿನಲ್ಲಿ ಸಭೆ ಕರೆದಿದ್ದಾರೆ. ಇದು ರೈತ ದ್ರೋಹಿ ಕಾರ್ಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಬಿನಿ ಕಾವೇರಿ ಜಲಾಶಯ ಕಟ್ಟಿರುವುದು ರಾಜ್ಯದ ರೈತರ ಹಿತ ಶಕ್ತಿಗಾಗಿ ಎಂಬುದನ್ನು ಮರೆತು ರಾಜ್ಯ ಸರ್ಕಾರ ತಮಿಳುನಾಡಿನ ನೀರುಗಂಟಿ ಕೆಲಸ ಮಾಡುತ್ತಿದೆ. ರೈತರ ಬೆಳೆಗಳಿಗೆ ನೀರು ಹರಿಸಲು ನಿರ್ಧಾರ ಕೈಗೊಳ್ಳಬೇಕು. ಕೂಡಲೇ ತಮಿಳುನಾಡಿಗೆ ಬಿಡುತ್ತಿರುವ ನೀರು ನಿಲ್ಲಿಸಬೇಕು. ಜಲಾಶಯ ಖಾಲಿಯಾಗುವುದನ್ನು ತಪ್ಪಿಸಬೇಕು ಇಲ್ಲದಿದ್ದರೆ ರೈತರೇ ಕಬಿನಿ ಜಲಾಶಯ ವಶಕ್ಕೆ ಪಡೆಯಬೇಕಾಗುತ್ತದೆ ಎಂದು ಎಚ್ಚರಿಸಿದರು. ಅತ್ತಹಳ್ಳಿ ದೇವರಾಜ್, ಬರಡನಪುರ ನಾಗರಾಜ್. ಕಿರಗಸೂರು ಶಂಕರ್. ನೀಲಕಂತಪ್ಪ, ವರಕೂಡ ನಾಗೇಶ, ಪೈಲ್ವಾನ್ ವೆಂಕಟೇಶ್, ಕೆ ಜಿ ಗುರುಸ್ವಾಮಿ, ಕುರುಬೂರು ಸಿದ್ದೇಶ್, ಗೌರಿಶಂಕರ ಪ್ರದೀಪ್, ಬಿ.ಪಿ.ಪರಶಿವಮೂರ್ತಿ, ಸಾತಗಳ್ಳಿ ಬಸವರಾಜ, ಕೋಟೆ ಸುನೀಲ್, ಕೆಂಡಗಣಪ್ಪ, ಅಂಬಳೆ ಮಂಜುನಾಥ್, ವಾಚ್ ಕುಮಾರ್, ಕಾಟೂರು ನಾಗೇಶ್, ಹೆಗ್ಗೊಟ್ಟಾರ ಶಿವಸ್ವಾಮಿ, ನಂಜುಂಡಸ್ವಾಮಿ, ಮಂಜು, ಮಾರ್ಬಳ್ಳಿ ಶಿವಣ್ಣ, ಮಹೇಶ್, ಮಿಲಿಟರಿ ಕುಮಾರ್, ನಂಜುಂಡ, ಉಮೇಶ್, ಮಾರ್ಬಳ್ಳಿ ಬಸವರಾಜ, ಬರಡನಪುರ ಮಹೇಶ್ ಸೇರಿ ಅನೇಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಜಾನಪದ ಕಲೆಗಳನ್ನು ಉಳಿಸಿ ಬೆಳಸಿ: ಎಂ.ರಾಮಚಂದ್ರ

ಚಾಮರಾಜನಗರ: ಜಿಲ್ಲೆಯು ಜಾನಪದ ಕಲೆಗಳ ತವರೂರಾಗಿದ್ದು, ಜಾನಪದ ಕಲೆಗಳನ್ನು ಉಳಿಸಿ ಬೆಳಸಬೇಕು ಎಂದು ಎಂದು ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಹೇಳಿದರು.

ನಗರದ ವರವಟ ಡಾ.ರಾಜ್ ಮಾರ್ ರಂಗಮಂದಿರದಲ್ಲಿ ಸುನಿಲ್ ಸಿದ್ದಾರ್ಥ ಮಾಯಾನದನ ಮೆಲೋಡಿಸ್ ಚಾಮರಾಜನಗರ ಅರ್ಪಿಸುವ ಮಾಯಾನಂದನ' ಮ್ಯೂಸಿಕ್ ಲೆಜೆಂಡ್ಸ್ ಡಾ.ಪಿ.ಬಿ. ಶ್ರೀನಿವಾಸ್, ಡಾ.ಕೆ.ಜೆ. ಯೇಸುದಾಸ್, ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ, ಡಾ.ಎಸ್.ಜಾನಕಿ ಹಾಗೂ ಕೆ.ಎಸ್.ಚಿತ್ರ ಅವರ ಕನ್ನಡ ಚಲನಚಿತ್ರ ಗೀತೆಗಳ ಸಂಗೀತ ಕರೋಕೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ 'ಮಾತನಾಡಿದರು. ಆಧುವಿಕ ಬದುಕಿನ ಭರಾಟೆಯಲ್ಲಿ ಬಹಳಷ್ಟು ಗ್ರಾಮೀಣ ಸೊಗಡಿನ ಕಲೆಗಳು ನಶಿಸಿ ಹೋಗುತ್ತಿವೆ. ಜಿಲ್ಲೆಯಲ್ಲಿ ಶ್ರೀ ಮಹದೇಶ್ವರ, ಶ್ರೀಮಂಟೇಸ್ವಾಮಿ, ಸಿದ್ದಪ್ಪಾಜಿ, ಬಿಳಿಗಿರಿರಂಗಸ್ವಾಮಿ ಹಾಡುಗಳು ಪ್ರಸಿದ್ದಿ ಹೊಂದಿವೆ. ಹಿಂದೆ ಮದುವೆ, ಇನ್ನಿತರ ಶಾಸ್ತ್ರ ಕಾರ್ಯಕ್ರಮಗಳಲ್ಲಿ ಶೋಬಾನೆ ಜಾನಪದ ಕೇಳುತ್ತಿದ್ದೇವೆ ಅದು ಇತ್ತೀಚೆಗೆ ಮರೆಯಾಗಿದೆ ಇಂತಹ ಜಾನಪದಗಳಿಗೆ ಅವಕಾಶ ಕೊಟ್ಟು ಜಾನಪದ ಕಲೆಗಳಿಗೆ ಅವಕಾಶ ಮಾಡಿಕೊಟ್ಟು ಉಳಿಸಿ ಬೆಳೆಸುವ ಕೆಲಸ ಆಗಬೇಕಿದೆ ಎಂದರು.




ಚಾಮರಾಜನಗರ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲ ಪ್ರಕಾರಗಳ ಕಲಾವಿದರು ಇದ್ದು, ವಿಶಿಷ್ಟ ಜಾನಪದ ಕಲೆಗಳನ್ನು ಹೊಂದಿದ್ದು, ಜಿಲ್ಲೆಯ ಕಲಾವಿದರು..ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಜಾನಪದ ಹಾಡುಗಳು ಹಾಡಿ ಜಿಲ್ಲೆಯನ್ನು ಕೀರ್ತಿಯನ್ನು ಬೆಳಗಿಸಿದ್ದಾರೆ. ಜಿಲ್ಲೆಯ ವರನಟ ಡಾ.ರಾಜ್ ಕುಮಾರ್ ಅವರು ಚಿತ್ರರಂಗದಲ್ಲಿ ಉತ್ತುಂಗಕ್ಕೇರಿ ದೇಶದಲ್ಲಿ ಹೆಸರು ಮಾಡಿದ್ದರು ಅಂತಹ ಮಹಾ. ಕಲಾವಿದನ್ನು ಜಿಲ್ಲೆಯು ಕೊಡುಗೆ ಕೊಟ್ಟಿದೆ ಎಂದರು.

### ಮನಸ್ಸಿಗೆ ನೆಮ್ಮದಿ ನೀಡುವ ಸಂಗೀತ

ಮಾಜಿ ಶಾಸಕ ಎಸ್.ಬಾಲ ರಾಜು ಮಾತನಾಡಿ ಸಂಗೀತ ಮನಸ್ಸಿಗೆ ಅಪಾರವಾದ ಮೌಲ್ಯದ, ನೆಮ್ಮದಿ, ಹೊಸ ಚೈತನ್ಯವನ್ನು ನೀಡುತ್ತದೆ. ಇದು ಕೇವಲ ಮನರಂ ಜನ' ಮಾತ್ರವಲ್ಲದೆ ಮಾನಸಿಕ ಒತ್ತಡ ವನ್ನು ಕಡಿಮೆ ಮಾಡುವ ದಿವ್ಯೌಷಧಿಯಂತೆ ಕೆಲಸ ಮಾಡುತ್ತದೆ ಎಂದರು. ಜಿಲ್ಲೆಯು ಜಾನಪದ ಕವರೂರು ಆಗಿದ್ದು, ಜಿಲ್ಲೆಯಲ್ಲಿ ಎಲ್ಲಾ ಪ್ರಕಾರ'ಗಳ ಕಲಾವಿದರು ಹೆಚ್ಚಾಗಿದ್ದಾರೆ. ಸುನಿಲ್ ಸಿದ್ದಾರ್ಥ ಮಾಯಾವಂದನ ಮಲೋಡಿನ್ ಅರ್ಪಿಸುವ ಮಾಯಾನಂದನ ಮ್ಯೂಸಿಕ್ ಲ್‌ಜೆಂಡ್ಸ್ ಇಂತಹ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ನಡೆಯಬೇಕು ಎಂದರು. ಕಾರ್ಯಕ್ರಮದಲ್ಲಿ ರೈಲ್ವೆ ಮಂಡಳಿ ಮಾಜಿ ಸದಸ್ಯ ಮಾಂಬಳ್ಳಿ ನಂಜುಂಡಸ್ವಾಮಿ, ಪರಿಸರ ಪ್ರೇಮಿ ಸಿ.ಎಂ.ವೆಂಕಟೇಶ್, ಗಣಿ ಉದ್ಯಮಿ ಮಹದೇವ್ ಬುದ್ಧ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಎಂ.ಎನ್.ಶಿವಪ್ರಸಾದ್ ಮಾಯಾನಂದನ ತಂಡದ ಸುನಿಲ್ ಸಿದ್ದಾರ್ಥ, ರವಿ, ವೇಣುಗೋಪಾಲ್, ಜಾನಪದ ಗಾಯಕ ಸಿ.ಎಂ.ನರಸಿಂಹಮೂರ್ತಿ, ಅನುಪಮ ಟ್ರಸ್ಟ್ ಅಧ್ಯಕ್ಷ ಡಾ. ಪಿ.ಪ್ರೇಮ ಉಪನ್ಯಾಸಕ ಡಾ.ನಂಜುಂಡಯ್ಯ, ಬಿ.ಹೇಮಂತ್ ಇತರರು ಹಾಜರಿದ್ದರು,

# ಆ.25ರಿಂದ ಶಿವಾನುಭವ ಸಮ್ಮೇಳನ

ಗುಂಡ್ಲುಪೇಟೆ: ತಾಲೂಕಿನ ಮೂಡಗೂರು ಗ್ರಾಮದ ಶ್ರೀ ಉದ್ದಾನೇಶ್ವರ ವಿರಕ್ತ ಮಠದ ವತಿಯಿಂದ ಚಿನ್ಮಯಜ್ಞಾನಿ ಚನ್ನಬಸವಣ್ಣ ದಾಸೋಹ ಭವನದ ಲೋಕಾರ್ಪಣೆ ಹಾಗೂ ಶಿವಾನುಭವ ಸಮ್ಮೇಳನವು ಇದೇ ಆಗಸ್ಟ್ 25 ಮತ್ತು 26ರಂದು ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಭಕ್ತಿಭಾವದಿಂದ ನಡೆಯಲಿದೆ.



ಆಗಸ್ಟ್ 25ರಂದು ಬೆಳಿಗ್ಗೆ 7 ಗಂಟೆಯಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿದ್ದು, ಷಟ್‌ಸ್ಥಲ ಧ್ವಜಾರೋಹಣ, ಶಿವಯೋಗ, ಸಾಮಾಜಿಕ ಇಷ್ಟಲಿಂಗ ಪೂಜೆ ಸೇರಿದಂತೆ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಇದೇ ಸಂದರ್ಭದಲ್ಲಿ ಚಿನ್ಮಯಜ್ಞಾನಿ ಚನ್ನಬಸವಣ್ಣ ದಾಸೋಹ ಭವನದ ಲೋಕಾರ್ಪಣೆ ನೆರವೇರಲಿದೆ. ಸಂಜೆ 7 ಗಂಟೆಗೆ ಜಂಗಮೋತ್ಸವ ನಡೆಯ ಲಿದ್ದು, ರಾತ್ರಿ 9.30ಕ್ಕೆ ಶ್ರೀ ಬಸವೇಶ್ವರ ಕಲಾಸಂಘ, ಬೆಟ್ಟದಮಾದಹಳ್ಳಿ ಇವರಿಂದ 'ಪ್ರಭುಲಿಂಗಲೀಲೆ' ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ.

ಆಗಸ್ಟ್ 26ರಂದು ಬೆಳಿಗ್ಗೆ ಶಿವಾನುಭವ ಸಮ್ಮೇಳನ ನಡೆಯಲಿದೆ. ಸುತ್ತೂರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಗಳ ದಿವ್ಯ ಸಾನ್ನಿಧ್ಯದಲ್ಲಿ, ತುಮಕೂರಿನ ಶ್ರೀ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿಗಳ ದಿವ್ಯ ಸಮ್ಮುಖದಲ್ಲಿ ಸಮ್ಮೇಳನ ಜರುಗಲಿದೆ.

ಪಡಗೂರು ಅಡಿವಿಮಠದ ಶ್ರೀ ಶಿವಲಿಂಗೇಂದ್ರ ಸ್ವಾಮೀಜಿಗಳ ದಿವ್ಯ ನೇತೃತ್ವ ವಹಿಸಲಿದ್ದು, ದೇವನೂರು ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದ ಶ್ರೀ ಮಹಾಂತಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದಾರೆ. ಕನಕಪುರ ದೇಗುಲ ಮಠದ ಶ್ರೀ ಚನ್ನಬಸವ ಸ್ವಾಮೀಜಿ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದಲ್ಲಿ ವಿವಿಧ ಮಠಾಧಿಪತಿಗಳು ದಿವ್ಯ ಉಪಸ್ಥಿತರಾಗಿ ಆಶೀರ್ವಚನ ನೀಡಲಿದ್ದಾರೆ. ದಾಸೋಹ ಭವನದ ಕಟ್ಟಡವನ್ನು ಶಾಸಕ ಎಚ್. ಎಂ. ಗಣೇಶ ಪ್ರಸಾದ್ ಉದ್ಘಾಟಿಸಲಿದ್ದು, ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ಮಾಜಿ ಶಾಸಕ ಸಿ. ಎಸ್. ನಿರಂಜನ್ ಕುಮಾರ್ ನೆರವೇರಿಸಲಿದ್ದಾರೆ. ಬಸವೇಶ್ವರರ ಪುತ್ಥಳಿಗೆ ಚಾಮುಲ್ ನಿರ್ದೇಶಕ ಎಂ.ಪಿ. ಸುನೀಲ್ ಪುಷ್ಪಾರ್ಚನೆ ಸಲ್ಲಿಸಲಿದ್ದಾರೆ.

# ಉಜಿ ನೊಣ ನಿಯಂತ್ರಣಕ್ಕೆ ವೈಜ್ಞಾನಿಕ ಕ್ರಮ ಅನುಸರಿಸಿ

### ರೇಷ್ಮೆ ರೈತರಿಗೆ ಸಲಹೆ



ಗುಂಡ್ಲುಪೇಟೆ: ತಾಲೂಕಿನ ಹೊರೆಯಾಲ ಗ್ರಾಮದಲ್ಲಿ ರೇಷ್ಮೆ ಹುಳು ಸಾಕಣೆ ನಿರ್ವಹಣೆ, ರೇಷ್ಮೆ ಹುಳು ತಳಿಗಳು, ರೋಗಗಳ ನಿಯಂತ್ರಣ ಹಾಗೂ ಉಜಿ ನೊಣದ ನಿರ್ವಹಣೆ ಕುರಿತು ರೈತರಿಗೆ ತರಬೇತಿ ಕಾರ್ಯಕ್ರಮ ನಡೆಯಿತು.

ಎಂಆರ್‌ಎಂಎ 2.0, ಚಾಮರಾಜನಗರ ಜಿಲ್ಲೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ. ರಂಜಿನಿ ಎಂ.ಎಸ್. ಅವರು ರೇಷ್ಮೆ ಹುಳು ಸಾಕಣೆಯ ವೈಜ್ಞಾನಿಕ ವಿಧಾನಗಳು, ವಿವಿಧ ಹೈಬ್ರಿಡ್ ತಳಿಗಳು ಹಾಗೂ ರೋಗಗಳ ನಿರ್ವಹಣೆ ಕುರಿತು ರೈತರಿಗೆ ಮಾಹಿತಿ ನೀಡಿದರು. ಗುಂಡ್ಲುಪೇಟೆ ವ್ಯಾಪ್ತಿಯಲ್ಲಿ ಉಜಿ ನೊಣದ ಸಮಸ್ಯೆ ಹೆಚ್ಚಾಗಿ ಕಂಡುಬರುತ್ತಿರುವ ಹಿನ್ನೆಲೆಯಲ್ಲಿ, ಸಿಎಸ್‌ಬಿ-ಸಿಎಸ್‌ಆರ್‌ಟಿಐ, ಮೈಸೂರು ಅಭಿವೃದ್ಧಿಪಡಿಸಿರುವ ಉಜಿ ಮಾತ್ರೆಗಳು, ಉಜಿ ಬಲೆಗಳು ಹಾಗೂ ಎನ್‌ಟಿ ವಿಧಾನಗಳನ್ನು ಪರಿಣಾಮಕಾರಿಯಾಗಿ ಬಳಸುವ ಮೂಲಕ ಉಜಿ ನೊಣ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಲಾಯಿತು.

ಇದೇ ವೇಳೆ ಗ್ರಾಸರಿ ರೋಗ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳು, ಹೊಸ ರೇಷ್ಮೆ ಹುಳು ತಳಿಗಳು ಹಾಗೂ ಹಿಪ್ಪುನೇರಳೆ ತಳಿಗಳ ಕುರಿತು ರೈತರಿಗೆ ಮಾಹಿತಿ ನೀಡಲಾಯಿತು. ರೇಷ್ಮೆ ಕೃಷಿಯಲ್ಲಿ ಎದುರಾಗುತ್ತಿರುವ ಪ್ರಮುಖ ಸವಾಲುಗಳ ಕುರಿತು ರೈತರೊಂದಿಗೆ ಚರ್ಚೆ ನಡೆಸಲಾಯಿತು.

ರೇಷ್ಮೆ ಉಪ ನಿರ್ದೇಶಕ (ಜಿಪಂ) ಶ್ರೀ ರೇಣುಕೇಶ್, ರೇಷ್ಮೆ ಉಪ ನಿರ್ದೇಶಕಿ (ಮಾದರಿ ಬಿತ್ತನೆ ಕೋಠಿ) ಡಾ. ಸರಿತಾ ಕುಮಾರಿ, ರೇಷ್ಮೆ ಸಹಾಯಕ ನಿರ್ದೇಶಕಿ ಶ್ವೇತಾ ಕೆ.ಎನ್. ಹಾಗೂ ಎಸ್‌ಇಒ ಶಶಿ ಅವರು ರೈತರೊಂದಿಗೆ ಸಂವಾದ ನಡೆಸಿ ಮಣ್ಣಿನ ಫಲವತ್ತತೆ, ಗ್ರೇನೇಜ್ ಕಾರ್ಯಚಟುವಟಿಕೆಗಳು ಹಾಗೂ ಹಿಪ್ಪುನೇರಳೆ ಕೃಷಿಯ ನಿರ್ವಹಣೆ ಕುರಿತು ಅಗತ್ಯ ಮಾಹಿತಿ ನೀಡಿದರು. ರೇಷ್ಮೆ ಕೃಷಿಗೆ ಸಂಬಂಧಿಸಿದಂತೆ ಇನ್ನಷ್ಟು ತಾಂತ್ರಿಕ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವಂತೆ ರೈತರು ಅಧಿಕಾರಿಗಳಿಗೆ ಮನವಿ ಮಾಡಿದರು.

## ಜಿಲ್ಲಾ ಭೀಮರಾವ್ ಸಮಿತಿಗೆ ಪದಾಧಿಕಾರಿಗಳ ಆಯ್ಕೆ

ಮೈಸೂರು: ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಮೈಸೂರು ಜಿಲ್ಲಾ ಭೀಮರಾವ್ ಅಂಬೇಡ್ಕರ್ ಸಮನ್ವಯ ಸಮಿತಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ನೂತನ ಜಿಲ್ಲಾಧ್ಯಕ್ಷ ಭುಗತಗಳ್ಳಿ ಮಣಿಯಯ್ಯ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಉಪಾಧ್ಯಕ್ಷರಾಗಿ ಪ್ರಸಾದ್ ಎಂ.ನಾಡನಹಳ್ಳಿ, ಪ್ರಧಾನ ಕಾರ್ಯದರ್ಶಿಯಾಗಿ ಪಿ. ಮಹದೇವ, ಸಹ ಕಾರ್ಯದರ್ಶಿಗಳಾಗಿ ಬಿ.ಕೆ. ಈಶ್ವರ್ ಬೊಮ್ಮನಹಳ್ಳಿ, ವಿನೋದ್‌ಕುಮಾರ್, ಮಂಜುನಾಥ್, ಎಚ್.ಎಸ್. ಮಹದೇವ, ಖಜಾಂಚಿಯಾಗಿ ದೇವಣ್ಣ ಚೋರನಹಳ್ಳಿ, ನಿರ್ದೇಶಕರಾದಿ ಬಾಳಕಟ್ಟೆ ಬಿ.ಆರ್. ರಾಜಯ್ಯ, ಕಾಳಯ್ಯ ಕೂಡನಹಳ್ಳಿ, ಮಹದೇವಸ್ವಾಮಿ ದಂಡಿಕೆರೆ, ಅಂಕಯ್ಯ ವಾಜಮಂಗಲ, ಮಹದೇವ ಪಿ ಭುಗತಗಳ್ಳಿ ಆಯ್ಕೆಯಾಗಿದ್ದಾರೆಂದರು. ಇದಲ್ಲದೆ ತಾಲ್ಲೂಕು ಸಮಿತಿ ಅಧ್ಯಕ್ಷರಾಗಿ ವಾಜಮಂಗಲ ಸುರೇಶ್, ಮೈಸೂರು ನಗರ ಸಮಿತಿ ಅಧ್ಯಕ್ಷರಾಗಿ ವಿಎಸ್.ಮೋಹನ್‌ಕುಮಾರ್ ಜೊತೆಗೆ ಇನ್ನಿತರ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಸಮಿತಿಯು ಬುದ್ಧ, ಬಸವ, ಅಂಬೇಡ್ಕರ್ ಅವರ ಹಾದಿಯಲ್ಲಿ ನೊಂದವರು, ಶ್ರಮಿಕರು, ಮಹಿಳೆಯರು, ರೈತರು, ಹಿಂದುಳಿದ ವರ್ಗಗಳಿಗೆ ನ್ಯಾಯ ದೊರಕಿಸಲು ಶ್ರಮಿಸಲಿದೆ ಎಂದರು. ವಿ.ಎಸ್. ಮೋಹನ್‌ಕುಮಾರ್, ವಾಜಮಂಗಲ ಸುರೇಶ್, ಪ್ರಸಾದ್ ಎಂ.ನಾಡನಹಳ್ಳಿ, ಮಹದೇವ ಪಿ.ವರುಣ, ದೇವಣ್ಣ ಚೋರನಹಳ್ಳಿ ಇನ್ನಿತರರು ಇದ್ದರು.

# ನಕಲಿ ಎನ್ಕೌಂಟರ್ ಖಂಡಿಸಿ ಪ್ರತಿಭಟನೆ

## ನೊಂದ ಕುಟುಂಬಗಳಿಗೆ ನ್ಯಾಯ ಒದಗಿಸಲು ಆಗ್ರಹ | ಉಪವಿಭಾಗಾಧಿಕಾರಿಗೆ ಮನವಿ

ಕೊಳ್ಳೇಗಾಲ: ಹನೂರಿನ ಕಾವೇರಿ ಅರಣ್ಯ ಪ್ರದೇಶದಲ್ಲಿ ನಡೆದ ನಕಲಿ ಎನ್ಕೌಂಟರ್ ಖಂಡಿಸಿ ಹಾಗೂ ಶೂಟೌಟ್ನಲ್ಲಿ ಸಾವೀಗೀಡಾದ ಕುಟುಂಬಗಳಿಗೆ ನ್ಯಾಯ ಒದಗಿಸುವಂತೆ ಒತ್ತಾಯಿಸಿ ವಿವಿಧ ಸಂಘಟನೆಗಳ ವತಿಯಿಂದ ಪಟ್ಟಣದ ಉಪವಿಭಾಗ ಕಚೇರಿಯಲ್ಲಿ ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ ರವರಿಗೆ ಮನವಿ ಸಲ್ಲಿಸಲಾಯಿತು.

ಜಯಕರ್ನಾಟಕ ಜನಪರ ವೇದಿಕೆ, ರೈತ ಸಂಘ, ಪ್ರಜಾವಿಮೋಚನಾ ಸಮಿತಿ ಸಾಮಾಜಿಕ ನ್ಯಾಯ ಸಂಘ ಹಾಗೂ ಎಸ್.ಡಿ.ಪಿ.ಐ ಸಂಘಟನೆಗಳ ಮುಖಂಡರು ಜಮಾಯಿಸಿ ಈ ಪ್ರತಿಭಟನೆ ನಡೆಸಿದರು.



### ಉಪಸ್ಥಿತರಿದ್ದ ಮುಖಂಡರು

ಈ ಸಂದರ್ಭದಲ್ಲಿ ಜಯಕರ್ನಾಟಕ ಜನಪರ ವೇದಿಕೆಯ ಜಿಲ್ಲಾಧ್ಯಕ್ಷ ಜಕಾವುಲ್ಲಾ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜೇಶ್ ಮಹಾಜನ್, ಜಿಲ್ಲಾ ಉಪಾಧ್ಯಕ್ಷರಾದ ಶ್ರೀನಿವಾಸ್ ರಾವ್, ಚಂದ್ರಶೇಖರ್. ಎಸ್, ಸದಸ್ಯ ಸುಂದರ್, ಚಾಮರಾಜನಗರ ಅಧ್ಯಕ್ಷ ರಘು, ಕಾರ್ಯಾಧ್ಯಕ್ಷ ಸೈಯದ್ ರಿಯಾಜ್ ಉಪಸ್ಥಿತರಿದ್ದರು. ರೈತ ಸಂಘದ ರಾಜ್ಯಾಧ್ಯಕ್ಷ ಶೈಲೇಂದ್ರ, ರಾಜ್ಯ ಕಾರ್ಯದರ್ಶಿ ಸಾಲೊಮನ್, ತಾಲೂಕು ಅಧ್ಯಕ್ಷ ಮೋಳೆ ರಾಜು, ತಾಲೂಕು ಪ್ರಧಾನ ಕಾರ್ಯದರ್ಶಿ ಪೆರಿಯಾನಾಯಗಂ, ಜಿಲ್ಲಾ ಕಾರ್ಯಾಧ್ಯಕ್ಷ ವಸಂತ್ ಕುಮಾರ್, ಲಾರೆನ್ಸ್, ಪ್ರಜಾವಿಮೋಚನಾ ಸಮಿತಿ ಸಾಮಾಜಿಕ ನ್ಯಾಯ ಸಂಘದ ಜಿಲ್ಲಾಧ್ಯಕ್ಷ ಕುಣಗಳ್ಳಿ ಮಹೇಶ್, ಎಸ್.ಡಿ.ಪಿ.ಐ ಅಧ್ಯಕ್ಷ ಇಮ್ರಾನ್ ಟಿಪ್ಪು ಹಾಗೂ ಇತರರು ಭಾಗವಹಿಸಿದ್ದರು.

### ಹತ್ಯೆ ಹಿಂದಿನ ಗಂಭೀರ ಆರೋಪ

**ಸಂತ್ರಸ್ತ ಕುಟುಂಬದ ಸದಸ್ಯರು ಹೇಳುವ ಪ್ರಕಾರ, ದಿನಾಂಕ ಆ. 14ರಂದು ಅರಣ್ಯಕ್ಕೆ ಮಾಮೂಲಿಯಂತೆ ಮೇಯಲು ಹೋಗಿದ್ದ ಹಸುಗಳ ಪೈಕಿ ಕೆಲವು ಸಂಜೆ ಮನೆಗೆ ಬಂದಿರಲಿಲ್ಲ. ಹೀಗಾಗಿ ಹಸುಗಳ ಮಾಲೀಕರಾದ ಅಂತೋಣಿ ಸ್ವಾಮಿ ಎಂಬುವವರು ತಮ್ಮ ಸಂಬಂಧಿಕರಾದ ಪೀಟರ್, ಕುಮಾರ್ ಮತ್ತು ಮಹಿಮಾದಾಸ್ ಅವರೊಂದಿಗೆ ಹಸುಗಳನ್ನು ಹುಡುಕಲು ಊರಿನ ಪಕ್ಕದ ಅರಣ್ಯಕ್ಕೆ ಹೋಗಿದ್ದರು. ಹಸುಗಳು ಸಿಗದಿದ್ದಾಗ ನಿತ್ರಾಣಗೊಂಡು ಮಲಗಿದ್ದವರ ಮೇಲೆ ಅರಣ್ಯ ಇಲಾಖೆ ಸಿಬ್ಬಂದಿ ಗುಂಡು ಹಾರಿಸಿ ಮೂವರನ್ನು ಕೊಂದು ಹಾಕಿದ್ದಾರೆ. ಅಲ್ಲದೆ, ಸಾಕ್ಷ್ಯ ನಾಶಮಾಡುವ ಉದ್ದೇಶದಿಂದ ಹೆಣಗಳನ್ನು ತಮ್ಮದೇ ಜೀಪಿನಲ್ಲಿ ಮೈಸೂರಿನ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದಾರೆ ಎಂದು ಆರೋಪಿಸಿದರು.**

### ಸರ್ಕಾರದ ಮುಂದಿರುವ ಪ್ರಮುಖ ಬೇಡಿಕೆಗಳು

**ಈ ಗಂಭೀರ ಪ್ರಕರಣವನ್ನು ಕೂಡಲೇ ಹೈಕೋರ್ಟ್ ನ್ಯಾಯಮೂರ್ತಿಗಳಿಂದ ತನಿಖೆಗೆ ಆದೇಶಿಸಬೇಕು ಎಂದು ಒಕ್ಕೂಟ ಒತ್ತಾಯಿಸಿದೆ. ಇದರ ಜೊತೆಗೆ, ನೊಂದ ಕುಟುಂಬಗಳಿಗೆ ಕನಿಷ್ಠ ತಲಾ 2 ಕೋಟಿ ರೂ. ಪರಿಹಾರ, ಹತ್ಯೆಯಾಗಿರುವ ಪ್ರತಿ ಕುಟುಂಬಕ್ಕೆ ಐದು ಎಕರೆ ಕೃಷಿ ಭೂಮಿ ಹಾಗೂ ಕುಟುಂಬದ ಒಬ್ಬ ಸದಸ್ಯನಿಗೆ ಸರ್ಕಾರಿ ನೌಕರಿ ನೀಡಬೇಕು. ಅಲ್ಲದೆ, ಹತ್ಯೆಯಾಗಿರುವವರ ಮಕ್ಕಳ ವಿದ್ಯಾಭ್ಯಾಸದ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು ಎಂದು ಮುಖಂಡರು ಆಗ್ರಹಿಸಿದರು.**

### ಭಾಷಾ ಸಾಮರಸ್ಯ ಕಾಪಾಡಲು ತ.ನಾಡು ಸಿಎಂಗೆ ಒತ್ತಾಯ

**ಹನೂರು ತಾಲೂಕಿನಲ್ಲಿ ಎಲ್ಲಾ ಜಾತಿ, ಧರ್ಮ, ಭಾಷೆಯ ಜನರು ಒಂದು ಕುಟುಂಬದಂತೆ ಬದುಕುತ್ತಿದ್ದಾರೆ. ಆದರೆ ಪಕ್ಕದ ರಾಜ್ಯ ತಮಿಳುನಾಡು ಮುಖ್ಯಮಂತ್ರಿಗಳು 'ತಮಿಳು ಜನರನ್ನು ಕೊಲ್ಲಲಾಗಿದೆ' ಎಂದು ಹೇಳಿಕೆ ನೀಡುತ್ತಿರುವುದು ಸರಿಯಲ್ಲ. ಇಂತಹ ಹೇಳಿಕೆಗಳಿಂದ ಭಾಷೆ-ಭಾಷೆಗಳ ಮಧ್ಯೆ ಸಮಸ್ಯೆ ಉಂಟಾಗುವ ಸಾಧ್ಯತೆಗಳಿರುವುದರಿಂದ, ಅಲ್ಲಿನ ಮುಖ್ಯಮಂತ್ರಿಗಳು ಕೂಡಲೇ ತಮ್ಮ ಹೇಳಿಕೆಗಳನ್ನು ವಾಪಸ್ ಪಡೆಯಬೇಕು ಎಂದು ಆಗ್ರಹ ಮಾಡಿದರು.**

### ಮಾನವ ಹಕ್ಕುಗಳ ಉಲ್ಲಂಘನೆ, ರೈತರ ಆತಂಕ

**ದೇಶವು ಭಾರತಾಂಬೆಯ 80ನೇ ವರ್ಷದ ಸ್ವಾತಂತ್ರ್ಯೋತ್ಸವ ಆಚರಿಸುತ್ತಿರುವ ಸಂದರ್ಭದಲ್ಲಿ ಅರಣ್ಯ ಇಲಾಖೆಯು ಬಂದೂಕಿನ ಮೂಲಕ ಮೂವರು ನಾಗರಿಕರನ್ನು ಬಲಿಪಡೆದು ಮಾನವ ಹಕ್ಕುಗಳ ಉಲ್ಲಂಘನೆ ಮಾಡಿರುವುದನ್ನು ಪ್ರಗತಿಪರ ಸಂಘಟನೆಗಳ ಒಕ್ಕೂಟ ತೀವ್ರವಾಗಿ ಖಂಡಿಸಿದೆ. ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕು ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿದ್ದು, ಇಲ್ಲಿನ ಹೆಚ್ಚಿನ ರೈತರು ಪಶುಸಂಗೋಪನೆಯನ್ನೇ ನಂಬಿದ್ದಾರೆ. ತಲತಲಾಂತರದಿಂದ ಪಶುಗಳ ಮೇವಿಗಾಗಿ ಕಾಡನ್ನೇ ಅವಲಂಬಿಸಿರುವ ಕಾಡಂಚಿನ ರೈತ ಸಮುದಾಯದಲ್ಲಿ ಈ ಘಟನೆಯಿಂದಾಗಿ ತೀವ್ರ ಭಯದ ವಾತಾವರಣ ಸೃಷ್ಟಿಯಾಗಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.**

# ನಕಲಿ ಔಷಧಿಗೂ ಸ್ಟೋರ್‌ಗೂ ಸಂಬಂಧವಿಲ್ಲ




ಮೈಸೂರು: ಬೆಂಗಳೂರಿನಲ್ಲಿ ನಕಲಿ ಔಷಧಿ ಜಾಲ ಪತ್ತೆಯಾದುದಕ್ಕೂ ಮೆಡಿಕಲ್ ಶಾಪ್‌ಗಳಿಗೂ ಸಂಬಂಧವಿಲ್ಲ. ಮೆಡಿಕಲ್ ಶಾಪ್‌ಗಳಲ್ಲಿ ಹಲವು ಹಂತದಲ್ಲಿ ಪ್ರಮಾಣೀಕರಿಸಿದ ಔಷಧಿಗಳನ್ನಷ್ಟೇ ಮಾರಾಟ ಮಾಡಲಾಗುತ್ತಿದೆ. ಹೀಗಾಗಿ ಸಾರ್ವಜನಿಕರು ಮೆಡಿಕಲ್ ಶಾಪ್ ಔಷಧಿಗಳ ಬಗ್ಗೆ ಆತಂಕ ಪಡುವುದು ಬೇಡ ಎಂದು ರಾಜ್ಯ ನೋಂದಾಯಿತ ಫಾರ್ಮಾಸಿಸ್ಟರ ಸಂಘದ ಅಧ್ಯಕ್ಷ ಡಾ. ಕೌಶಿಕ್ ದೇವರಾಜು ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಬೆಂಗಳೂರಿನಲ್ಲಿ ಪತ್ತೆಯಾದ ನಕಲಿ ಔಷಧಿಗಳು ಮೆಡಿಕಲ್ ಶಾಪ್‌ಗಳೊಡನೆ ಸಂಪರ್ಕ ಹೊಂದಿದವಲ್ಲ,, ಅವರು ಕ್ರಿಟಿಕಲ್ ಕೇರ್ ಎಂದು ನೇರವಾಗಿ ಪೂರೈಕೆ ಆಗುವಂತಹವುಗಳಾಗಿವೆ. ಇದೇ ವೇಳೆ ಮೆಡಿಕಲ್ ಶಾಪ್‌ಗಳಲ್ಲಿನ ಔಷಧಿಗಳನ್ನು ಸಂಬಂಧಪಟ್ಟ ಇಲಾಖೆಗಳು ಆಗಾಗ್ಗೆ ತೀವ್ರ ತಪಾಸಣೆಗೊಳಪಡಿಸುತ್ತವೆ. ಹೀಗಾಗಿ ಅವು ವಿಶ್ವಾಸಾರ್ಹವಾದುವೆಂದರು. ಮತ್ತೋರ್ವ ಪದಾಧಿಕಾರಿ ಸಿ.ಕೆ. ಅರುಣ್ ಮಾತನಾಡಿ, ಈಚೆಗೆ ಆನ್‌ಲೈನ್ ಪೋರ್ಟಲ್ ಮೂಲಕ ಔಷಧ ಖರೀದಿಸುವ ಅಪಾಯಕಾರಿ ಪ್ರವೃತ್ತಿ ಬೆಳೆಯುತ್ತಿದೆ. ಇದು ಭೂಗತ ವ್ಯವಹಾರವಾಗಿದ್ದು, ಗ್ರಾಹಕರು ಎಚ್ಚೆತ್ತುಕೊಳ್ಳದಿದ್ದಲ್ಲಿ ಮುಂದೊಂದು ದಿನ ಆರೋಗ್ಯಕ್ಕೆ ಸಂಬಂಧಿಸಿದಂತೆ ದೊಡ್ಡ ಬೆಲೆ ತೆರಬೇಕಾಗುತ್ತದೆಂದು ಎಚ್ಚರಿಸಿದರು. ಜಿಲ್ಲಾಧ್ಯಕ್ಷ ಎಂ. ರಾಜು, ಇನ್ನಿತರ ಪದಾಧಿಕಾರಿಗಳಾದ ದೀಪಕ್, ವಸಂತ ಜೋಶಿ, ಮನ್ಸೂರ್ ಅಹಮದ್ ಖಾನ್ ಇದ್ದರು.

# ಸರ್ಕಾರದಿಂದ 'ನೀರಗಂಟಿ' ಕೆಲಸ

ಮೈಸೂರು: ಕಬಿನಿ ಜಲಾಶಯ ಭರ್ತಿಯಾಗಿದ್ದರೂ ಅಚ್ಚುಕಟ್ಟು ಪ್ರದೇಶದ ರೈತರ ಬೆಳೆಗಳಿಗೆ ನೀರು ಸಿಗುತ್ತಿಲ್ಲ. ಬದಲಿಗೆ ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಹರಿಸುವ ಮೂಲಕ 'ನೀರಗಂಟಿ' ಕೆಲಸ ಮಾಡುತ್ತಿದೆ ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ 'ರೈತರತ್ನ' ಕುರುಬೂರು ಶಾಂತಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ರೈತರ ಹಕ್ಕುಗಳ ರಕ್ಷಣೆ ಹಾಗೂ ಕೃಷಿ ವಲಯದ ಬಿಕ್ಕಟ್ಟುಗಳಿಗೆ ಧ್ವನಿಯಾಗುವ ಉದ್ದೇಶದಿಂದ ಮೈಸೂರು ತಾಲೂಕಿನ ಮಾರ್ಬಳ್ಳಿ ಗ್ರಾಮದಲ್ಲಿ ನೂತನ ರೈತ ಸಂಘದ ಗ್ರಾಮ ಘಟಕವನ್ನು ಉದ್ಘಾಟಿಸಿ ಮಾತನಾಡಿದರು. ಪ್ರಸ್ತುತ ಕೃಷಿ ವಲಯವು ತೀವ್ರ ಬಿಕ್ಕಟ್ಟು ಎದುರಿಸುತ್ತಿದೆ. ಬೆಂಬಲ ಬೆಲೆಯ ಕೊರತೆ, ಬ್ಯಾಂಕುಗಳ ಕಠಿಣ ಸಾಲ ನೀತಿ ಹಾಗೂ ಸ್ಥಳೀಯ ಸರ್ಕಾರಿ ಕಚೇರಿಗಳಲ್ಲಿ ರೈತರಿಗೆ ಆಗುತ್ತಿರುವ ಕಿರುಕುಳಗಳ ವಿರುದ್ಧ ಹೋರಾಡಲು ಈ ಗ್ರಾಮ ಘಟಕವನ್ನು ಆರಂಭಿಸಲಾಗಿದೆ. ರೈತ ಸಂಘಟನೆಗಳಲ್ಲಿರುವ ಒಡಕೇ ಸರ್ಕಾರಗಳ ನಿರ್ಲಕ್ಷ್ಯಕ್ಕೆ ಮುಖ್ಯ ಕಾರಣ. ಸಂಘಕ್ಕೆ ಹೊಸದಾಗಿ ಸೇರ್ಪಡೆಗೊಂಡ ನೂರಾರು ರೈತರಿಗೆ ಹಸಿರು



ಶಾಲು ಹೊದಿಸಿ ಸ್ವಾಗತಿಸಲಾಯಿತು. ಸರ್ಕಾರದಿಂದ ಸಿಗುವ ಕೃಷಿ ಸೌಲಭ್ಯಗಳು, ರಸಗೊಬ್ಬರ ಮತ್ತು ಬಿತ್ತನೆ ಬೀಜಗಳ ಪೂರೈಕೆಯಲ್ಲಿ ಎದುರಾಗುವ ಸಮಸ್ಯೆಗಳು ಹಾಗೂ ಅವುಗಳ ಪರಿಹಾರಗಳ ಕುರಿತು ರೈತರಿಗೆ ಜಾಗೃತಿ ಮೂಡಿಸಲಾಯಿತು. ಗ್ರಾಮ ಘಟಕ ಉದ್ಘಾಟನೆಯಲ್ಲಿ ಜಿಲ್ಲಾ ಉಪಾಧ್ಯಕ್ಷ ನೀಲಕಂಠಪ್ಪ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್ ತಾಲೂಕ ಅಧ್ಯಕ್ಷ ಪೈಲ್ವಾನ್ ವೆಂಕಟೇಶ್. ಜಿಲ್ಲಾ ಕಾರ್ಯದರ್ಶಿ ವರಕೋಡು ನಾಗೇಶ್. ಮಾರ್ಬಳ್ಳಿ ಗ್ರಾಮ ಘಟಕದ ಮುಖ್ಯಸ್ಥ ಮಹೇಶ್, ವಿಜಯೇಂದ್ರ, ಬಿ.ಪಿ.ಪರಶಿವಮೂರ್ತಿ, ಮಾರ್ಬಳ್ಳಿ ಶಿವಣ್ಣ, ಮಾರ್ಬಳ್ಳಿ ಬಸವರಾಜು, ಮಹೇಶ್, ನಂಜುಂಡಸ್ವಾಮಿ, ಮಿಲಿಟರಿ ಕುಮಾರ್, ಹೆಗ್ಗೊಟ್ಟಾರ ಶಿವಸ್ವಾಮಿ, ಹೆಗ್ಗೂರು ರಂಗರಾಜು, ಸತೀಶ್, ಬಾಲು, ಸಿದ್ದರಾಜು, ಸಿದ್ಧರಾಮ, ಇದ್ದರು.

### ಜಿಲ್ಲಾ ನ್ಯಾಯಾಧೀಶರಾದ ಜಿ. ಪ್ರಭಾವತಿ ಕರೆ

# ಹೊಸ ಕಾನೂನು, ತಿದ್ದುಪಡಿಗಳ ಬಗ್ಗೆ ವ್ಯಾಪಕ ಅರಿವು ಮೂಡಿಸಿ

ಚಾಮರಾಜನಗರ, ಕಾನೂನುಗಳು ಹಾಗೂ ಆಗಾಗ್ಗೆ ತಿದ್ದುಪಡಿಯಾಗುವ ಕಾನೂನುಗಳ ಬಗ್ಗೆ ಅರೆಕಾಲಿಕ ಸ್ವಯಂ ಸೇವಕರು ಗ್ರಾಮೀಣ ಭಾಗದ ಜನಸಾಮಾನ್ಯರಿಗೆ ವ್ಯಾಪಕ ಅರಿವು ಮೂಡಿಸುವಂತೆ ಜಿಲ್ಲಾ ಪ್ರಧಾನ ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಜಿ. ಪ್ರಭಾವತಿ ಅವರು ಸಲಹೆ ಮಾಡಿದರು.

ನಗರದ ವರನಟ ಡಾ.ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ರಾಜ್ಯ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಬೆಂಗಳೂರು ಔಟ್ಲಾಡ್ ಇಂಡಿಯಾ ಫೌಂಡೇಶನ್ ಹಾಗೂ ಯಳಂದೂರು, ಕೊಳ್ಳೇಗಾಲ, ಗುಂಡ್ಲುಪೇಟೆ ತಾಲ್ಲೂಕು ಕಾನೂನು ಸೇವೆಗಳ ಸಮಿತಿ ಸಹಯೋಗದಲ್ಲಿ 2025-26ನೇ ಸಾಲಿನ ಹೊಸ ಅರೆಕಾಲಿಕ ಕಾನೂನು ಸ್ವಯಂ ಸೇವಕರಿಗೆ ಹಮ್ಮಿಕೊಳ್ಳಲಾಗಿದ್ದ ಎರಡು ದಿನಗಳ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಪ್ರಸಕ್ತ ಸಾಲಿಗೆ ನೂತನವಾಗಿ ಆಯ್ಕೆಯಾಗಿರುವ ಅರೆಕಾಲಿಕ




ಕಾನೂನು ಸ್ವಯಂ ಸೇವಕರಿಗೆ ಬೆಂಗಳೂರು ಔಟ್ಲಾಡ್ ಇಂಡಿಯಾ ಫೌಂಡೇಶನ್‌ನ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ಕೊಡಿಸಲಾಗುತ್ತಿದೆ. ಬಡವರು, ದುರ್ಬಲರು, ನಿರ್ಗತಿಕರು, ಹಿರಿಯ ನಾಗರಿಕರು, ಮಹಿಳೆಯರು, ಮಕ್ಕಳು ಸೇರಿದಂತೆ ಸಮಾಜದ ಎಲ್ಲರಿಗೂ ಹೊಸ ಹಾಗೂ ತಿದ್ದುಪಡಿಯಾಗುವ ಕಾನೂನುಗಳ ಮಾಹಿತಿ ಅಗತ್ಯವಿದೆ. ಅರೆಕಾಲಿಕ ಕಾನೂನು ಸ್ವಯಂ ಸೇವಕರ ಜ್ಞಾನ, ತಿಳಿವಳಿಕೆಯನ್ನು ನವೀಕರಿಸುವುದು, ಭವಿಷ್ಯದಲ್ಲಿ ಎದುರಾಗುವ ಸವಾಲುಗಳನ್ನು ಪರಿಹರಿಸಿಕೊಳ್ಳಲು ಈ ತರಬೇತಿಯು ನೆರವಾಗಲಿದೆ ಎಂದರು.

ಕಾನೂನುಗಳು ನಿಂತ ನೀರಲ್ಲ, ಆಗಾಗ್ಗೆ ಬದಲಾಗುವ, ತಿದ್ದುಪಡಿಯಾಗುವ ಹಾಗೂ ಹೊಸದಾಗಿ ಸೃಷ್ಟಿಯಾಗುವ ಪ್ರಕ್ರಿಯೆಗಳು ನಿರಂತರವಾಗಿ ನಡೆಯುತ್ತವೆ. ಅರೆಕಾಲಿಕ ಸ್ವಯಂ ಸೇವಕರು ಇಂತಹ ಕಾನೂನುಗಳನ್ನು ಜನರ ಮನೆಬಾಗಿಲಿಗೆ ತಲುಪಿಸಿ ಅರ್ಹ ಫಲಾನುಭವಿಗಳಿಗೆ ಉಚಿತ ಕಾನೂನು ನೆರವು ನೀಡುವುದೇ ತರಬೇತಿಯ ಪ್ರಮುಖ ಉದ್ದೇಶವಾಗಿದೆ. ಜಿಲ್ಲೆಯಲ್ಲಿ ಕಷ್ಟದಲ್ಲಿರುವ ಜನರಿಗೆ ವಸತಿ, ಪಿಂಚಣಿ, ಉದ್ಯೋಗ, ಇನ್ನಿತರೆ ಸೌಲಭ್ಯಗಳನ್ನು ಕಲ್ಪಿಸಲು ಸ್ವಯಂ ಸೇವಕರು ಮುಂದಾಗಬೇಕು. ಒಟ್ಟಾರೆ ಸಮಾಜದಲ್ಲಿ ತಳಮಟ್ಟದ ಸಮಸ್ಯೆಗಳನ್ನು ಅರಿತು ಅವುಗಳನ್ನು ಪರಿಹರಿಸಿ ಮಾನವ ಹಕ್ಕು ಬಲಪಡಿಸಬೇಕು ಎಂದು ಪ್ರಭಾವತಿ ತಿಳಿಸಿದರು.

ಜಿಲ್ಲಾಧಿಕಾರಿ ಶ್ರೀರೂಪ ಮಾತನಾಡಿ ಚಾಮರಾಜನಗರ ಬಹಳ ವಿಸ್ತಾರವಾದ ಜಿಲ್ಲೆಯಾಗಿದ್ದು, ಸರ್ಕಾರದಿಂದ ಮಂಜೂರಾಗುವ ಪ್ರತಿಯೊಂದು ಸೌಲಭ್ಯಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಕೆಲಸ ಅಧಿಕಾರಿಗಳಿಂದ ಮಾತ್ರವಲ್ಲ, ಅದಕ್ಕೆ ಅರೆಕಾಲಿಕ ಸ್ವಯಂ ಸೇವಕರು ಜತೆಗೂಡಬೇಕು. ಸ್ವಯಂ ಸೇವಕರು ತಮ್ಮ ಜವಾಬ್ದಾರಿಯ ಜೊತೆಗೆ ಸಂಕಷ್ಟದಲ್ಲಿರುವ ಸಾರ್ವಜನಿಕರಿಗೆ ಸ್ಪಂದಿಸುವ ಕೆಲಸವಾಗಬೇಕು. ಸ್ವಯಂ ಸೇವಕರು ತಮ್ಮ ಕಾನೂನು ಅರಿವು, ಜ್ಞಾನವನ್ನು ಸಮಾಜದಲ್ಲಿ ಪಸರಿಸುವಲ್ಲಿ ತರಬೇತಿಯ ಪೂರ್ಣ ಯಶಸ್ಸು ಸದ್ಯವಾಗಲಿದೆ. ಈ ನಿಟ್ಟಿನಲ್ಲಿ ತರಬೇತಿಯನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಕಿವಿಮಾತು ಹೇಳಿದರು. ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಈಶ್ವರ, ಹೆಚ್ಚುವರಿ ಪೊಲೀಸ್ ವರಿ??ಧಿಕಾರಿ ಎಂ. ಎನ್. ಶಶಿಧರ್, ಬೆಂಗಳೂರು ಔಟ್ಲಾಡ್ ಇಂಡಿಯಾ ಫೌಂಡೇಶನ್‌ನ ಸಂಪನ್ಮೂಲ ವ್ಯಕ್ತಿಗಳಾದ ಸಿದ್ದಾರ್ಥ್ ಪಾಟೀಲ್, ಡಿ. ಶಾಮಾ ಉಪಸ್ಥಿತರಿದ್ದರು.

## ಖರ್ಗೆಗೆ ಅಪಮಾನಕ್ಕೆ ಖಂಡನೆ

ಮೈಸೂರು: ಉತ್ತರಾಖಂಡದ ಹಲ್ದ್ವಾನಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾಷಣ ಮಾಡಿ ಹೋದ ಬಳಿಕ ಕೆಲವರು ಸ್ಥಳವನ್ನು ಶುದ್ಧೀಕರಿಸಿದುದು ಸಂವಿಧಾನಕ್ಕೆ ಮಾಡಿದ ಅಪಚಾರ ಹಾಗೂ ಅಸ್ಪೃಶ್ಯತೆಯ ಆಚರಣೆಯಾಗಿದೆ. ಹೀಗಾಗಿ ಕಿಡಿಗೇಡಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕುವೆಂಪುನಗರ ಪರಿಶಿಷ್ಟ ಜಾತಿ ನಾಗರಿಕರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿ ರುದ್ರಯ್ಯ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ಹಿಂದೆ ಜಗಜೀವನರಾಂ ಸಚಿವರಾಗಿದ್ದಾಗ ಅವರು ಪಾಲ್ಗೊಂಡಿದ್ದ ಸ್ಥಳದಲ್ಲಿನ ಶುದ್ಧೀಕರಣ ನೆಪದಲ್ಲಿ ಅಸ್ಪೃಶ್ಯತೆ ಆಚರಣೆ ನಡೆಯಿತು. ಸ್ವಾತಂತ್ರ ಯ ದೊರೆತು ಹಲವಾರು ದಶಕಗಳಾದರೂ ಈ ಕೆಟ್ಟ ಪದ್ಧತಿ ನಿಂತಿಲ್ಲ. ಸಾಂವಿಧಾನಿಕವಾಗಿ ಹಿರಿಯ ಸ್ಥಾನದಲ್ಲಿರುವ ಖರ್ಗೆ ಅವರಿಗೂ ಈಗ ಅಪಮಾನ ಮಾಡಲಾಗಿದೆ. ಇದು ಖಂಡನೀಯವೆಂದರು. ಅಲ್ಲದೆ, ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗಡೆ ಅವರು ಮೀಸಲಾತಿ ಕುರಿತು ನೀಡಿರುವ ಹೇಳಿಕೆ ಸರಿಯಲ್ಲ. ಮೀಸಲಾತಿ ಭಿಕ್ಷೆಯಲ್ಲ, ಶೋಷಿತ ವರ್ಗಗಳಿಗೆ ಸಂವಿಧಾನ ನೀಡಿದ ಹಕ್ಕಾಗಿದೆ ಎಂದರು. ಅಧ್ಯಕ್ಷ ಬಿ.ಬೋರಯ್ಯ, ಇನ್ನಿತರ ಪದಾಧಿಕಾರಿಗಳಾದ ಶ್ರೀನಿವಾಸ್, ಗೋವಿಂದಯ್ಯ, ಉಮಾಪತಿ, ಬ್ರಹ್ಮಾನಂದ, ಪ್ರೊ.ಗುರುಸಿದ್ದಯ್ಯ, ರಾಮಚಂದ್ರ, ಮರಿಸ್ವಾಮಿ, ಬಸವರಾಜ್ ಇದ್ದರು.

# ಗಡಿ ಜಿಲ್ಲೆಯಲ್ಲಿ ಸಾಹಿತ್ಯ ಸಮ್ಮೇಳನ ಆಯೋಜನೆ



ಚಾಮರಾಜನಗರ: ಚಾಮರಾಜನಗರ ಗಡಿ ಜಿಲ್ಲೆಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಾಡುವುದು ನನ್ನ ಮೊದಲ ಅದ್ಯತೆ ಯಾಗಿದ್ದು, ಸಾಹಿತ್ಯ ಕ್ಷೇತ್ರ ಬೆಳವಣ ಗೆ ನಾಡು, ನುಡಿಯನ್ನು ಬಲಿಷ್ಠಗೊಳಿಸಲು ನನ್ನಗೊಂದು ಅವಕಾಶ ಮಾಡಿಕೊಡಿ ಎಂದು ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಮಾಜಿ ಅಧ್ಯಕ್ಷ ಹಾಗೂ ಕನ್ನಡ ಸಾಹಿತ್ಯ ಪರಿಷತ್ನ ಮುಂಬರುವ ಚುನಾವಣೆಯ ರಾಜ್ಯಾಧ್ಯಕ್ಷ ಚುನಾವಣೆಯ ಅಕಾಂಕ್ಷಿ ಡಾ. ಸಿ. ಸೋಮಶೇಖರ್ ಮನವಿ ಮಾಡಿದರು.

ನಗರದ ನಿಜಗುಣ ರೆಸಾರ್ಟ್ನಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ ಸದಸ್ಯರ ಸಮಾನ ಮಾನಸ್ಕರ್ ಪೂರ್ವಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು. ಹಿರಿಯರಾದ ದಲಿತ ನಾಯಕರಾದ ವೆಂಕಟರಮಣ ಸ್ವಾಮಿ ಪಾಪು ಅವರ ಆಶಯದಂತೆ ಚಾಮರಾಜನಗರ ಜಿಲ್ಲೆಯಲ್ಲಿ ಸಾಹಿತ್ಯ ಸಮ್ಮೇಳನ ವಾಗಿಲ್ಲ. ಮುಂಬರುವ ದಿನಗಳಲ್ಲಿ ಎಲ್ಲರು ಒಗ್ಗಟ್ಟಿನಿಂದ ಸಮ್ಮೇಳನ ಮಾಡಲು ನಾನು ಪ್ರಥಮ ಅದ್ಯತೆ ನೀಡುತ್ತದೆ. ಚಾಮರಾಜನಗರ ಜಿಲ್ಲೆಯಿಂದ ನನಗೆ ಹೆಚ್ಚಿನ ಮತಗಳನ್ನು ನೀಡಿ. ಗೆಲುವ ಅವಕಾಶ ಮಾಡಿಕೊಡಬೇಕು. ನಾನು ಎಂದು ಹೊರಗಡೆಯ ಜಿಲ್ಲೆಯವನು ಎಂಬ ಭಾವನೆ ಬಂದಿಲ್ಲ. ಚಾಮರಾಜನಗರ ಜಿಲ್ಲೆಯ ಬಗ್ಗೆ ಅಪಾರ ಪ್ರೀತಿ ಇದೆ. ಜನಪದರು ಹಾಗೂ ಮಂಟೇಸ್ವಾಮಿ, ಸಿದ್ದಾಪ್ವಾಜಿ, ಮಹದೇಶ್ವರರು ನಡೆದಾಡ ಜಿಲ್ಲೆಯಾಗಿದೆ. ಗಡಿನಾಡು ಪ್ರಾಧಿಕಾರದ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಜಿಲ್ಲೆಗೆ ಹೆಚ್ಚಿನ ಅನುದಾನ ನೀಡುವ ಜೊತೆಗೆ ಗಡಿ ಭವನ ನಿರ್ಮಾಣಕ್ಕೆ ಒತ್ತು ನೀಡಿದ್ದಾರೆ. ಗಡಿ ಶಾಲೆಗಳ ಅಭಿವೃದ್ದಿಗೆ ಅದ್ಯತೆ ನೀಡಿದೆ, ನೂರಾರು ಕೋಟಿ ರೂ.ಗಳನ್ನು ಗಡಿ ಜಿಲ್ಲೆಗೆ ನೀಡಿದ್ದೇನೆ ಎಂದರು. ಲೋಕಸೇವಾ ಆಯೋಗದ ಪರೀಕ್ಷೆಯನ್ನು ಕನ್ನಡದಲ್ಲಿ ಉತ್ತರಿಸಿ, ಕೇಂದ್ರದ ಪ್ರಥಮ ದರ್ಜೆ ಸೇವೆಗೆ ಆಯ್ಕೆಯಾಗಿದ್ದೆ. ಆದರೆ, ಕನ್ನಡ ಸೇವೆ ರಾಜ್ಯದ ಸೇವೆ ಮಾಡುವ ಸಲುವಾಗಿ ಕೇಂದ್ರಕ್ಕೆ ಹೋಗದೇ ಕರ್ನಾಟಕದಲ್ಲಿ ಉಳಿದೆ. ನಂತರ ಐಎಎಸ್ ಪಡೆದು ಅನೇಕ ಇಲಾಖೆಯಲ್ಲಿ ಸೇವೆ ಮಾಡುವ ಜೊತೆಗೆ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನನ್ನದೇ ಕೊಡುಗೆಯನ್ನು ನೀಡಿದ್ದೇನೆ. ನಿವೃತ್ತಿ ಬಳಿಕ ಗಡಿನಾಡು ಪ್ರಾಧಿಕಾರದ ಅಧ್ಯಕ್ಷನಾಗಿ ಸೇವೆ ಸಲ್ಲಿಸಿದೆ. ಈಗ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷನಾಗಿ ಇನ್ನು ಹೆಚ್ಚಿನ ಸೇವೆ ಮಾಡುವ ಹಂಬಲ ನನ್ನದಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ಕೆ. ರವಿಕುಮಾರ್, ದಲಿತ ಹಿರಿಯ ಮುಖಂಡರಾದ ವೆಂಕಟರಮಣಸ್ವಾಮಿ ಪಾಪು, ಪರಿಷತ್ ಮಾಜಿ ಅಧ್ಯಕ್ಷರಾದ ನಾಗಮಲ್ಲಪ್ಪ, ಬಿ.ಎಸ್. ವಿನಯ್, ಹೋರಾಟಗಾರರಾದ ಕೆ. ವೀರಭದ್ರ ಸ್ವಾಮಿ, ಉದ್ಯಮಿ ಜಿ. ನಿಜಗುಣರಾಜು, ಜನಪದ ಕಲಾವಿದ ಸಿ.ಎಂ ನರಸಿಂಹಮೂರ್ತಿ, ನಿವೃತ್ತ ಅಧಿಕಾರಿ ಮಂಜುನಾಥ ಪ್ರಸನ್ನ , ಕನ್ನಡ ಹೋರಾಟಗಾರ ಚಾ.ರಂ. ಶ್ರೀನಿವಾಸಗೌಡ, ಪರಿಷತ್ ತಾಲೂಕು ಅಧ್ಯಕ್ಷ ಸುರೇಶ್ ಎನ್. ಋಗ್ವೇದಿ, ದುಗ್ಗಹಟ್ಟಿ ಮಲ್ಲಿಕಾರ್ಜುನಸ್ವಾಮಿ, ಸಿದ್ದಮಲ್ಲಪ್ಪ, ನಾಗರಾಜು, ಪದ್ಮಾಕ್ಷಿ, ಹೊಂಗನೂರು ಸಿದ್ದಲಿಂಗಸ್ವಾಮಿ, ಮಹಾಲಿಂಗಸ್ವಾಮಿ ಗಿರ್ಗಿ, ಮಲ್ಲಣ್ಣ, ಮೊದಲಾದವರು ಹಾಜರಿದ್ದರು.

# ಕುಡಿಯುವ ನೀರು ಪೂರೈಕೆಗೆ ಕ್ರಮ



ಚಾಮರಾಜನಗರ:ನಗರಸಭೆ ವ್ಯಾಪ್ತಿಗೆ ಬರುವ ಗಾಳಿಪುರ ಹಾಗೂ ಸೋಮವಾರಪೇಟೆ ಬಡಾವಣೆಗಳಿಗೆ ಸಂಪರ್ಕ ಕುಡಿಯುವ ನೀರು ಪೂರೈಸಲು 2 ಕೋಟಿ ರೂ. ವೆಚ್ಚದಲ್ಲಿ ಓವರ್ ಹೆಡ್ ಟ್ಯಾಂಕ್ ನಿರ್ಮಾಣವಾಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ಗಾಳಿಪುರ ಬಡಾವಣೆಗೆ ಸೇರಿದ ಬೈಪಾಸ್ ರಸ್ತೆಗೆ ಕೆಪಿಟಿಸಿಎಲ್ ಕಚೇರಿ ಹತ್ತಿರದ ಜಾಗದಲ್ಲಿ ಕರ್ನಾಟಕ ಒಳ ಚರಂಡಿ ಮತ್ತು ಕುಡಿಯುವ ನೀರು ಸರಬರಾಜು ಮಂಡಲಿ ವತಿಯಿಂದ 15 ಲಕ್ಷ ಲೀಟರ್ ಸಾರ್ಮಥ್ಯದ ಓವರ್ ಹೆಡ್ ಟ್ಯಾಂಕ್ ನಿರ್ಮಾಣ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಅವರು ಮಾತನಾಡಿದರು. ಚಾಮರಾಜನಗರ ಪಟ್ಟಣದ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ತೀ. ನರಸೀಪುರದಿಂದ ಚ.ನಗರಕ್ಕೆ ಎಕ್ಸ್‌ಪ್ರೆಸ್ ಪೈಪ್ ಲೈನ್ ತರಲಾಗುತ್ತದೆ. ಅಲ್ಲದೇ ನಾಲ್ಕು ಭಾಗಗಳಲ್ಲಿ ಓವರ್ಹೆಡ್ ಟ್ಯಾಂಕ್‌ಗಳನ್ನು ನಿರ್ಮಾಣ ಮಾಡಿ, ಪ್ರತಿದಿನವು ಕಾವೇರಿ ನೀರು ತಲುಪು ವ್ಯವಸ್ಥೆಯನ್ನು ಮಾಡಲಾಗುತ್ತದೆ. ಈಗಾಗಲೇ 31 ವಾರ್ಡುಗಳಿಗೆ ಕಾವೇರಿ ಕುಡಿಯುವ ನೀರು ಕಲ್ಪಿಸಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಮಾಜಿ ಅಧ್ಯಕ್ಷರಾದ ಸೈಯದ್ ರಫಿ, ಸುಹೇಲ್ ಅಲಿ ಖಾನ್, ಅಯುಬ್ ಖಾನ್, ಮಾಜಿ ನಗರಸಭಾ ಅಧ್ಯಕ್ಷರಾದ ಸುರೇಶ್ ನಾಯಕ್, ರಾಜಪ್ಪ, ಯೋಗೇಂದ್ರಗೌಡ, ಚುಡಾ ಸದಸ್ಯರಾದ ದ್ವಾರಕಿ, ಪುಟ್ಟಸ್ವಾಮಿ, ಮಂಡಲಿ ಎಇಇ ಮಂಜುನಾಥ್, ಸೈಟ್ ಇಂಜಿನಿಯರ್ ರವಿಕುಮಾರ್, ಗುತ್ತಿಗೆದಾರರ ರಮೇಶ್ ಇತರರು ಇದ್ದರು.

## ಜಿಲ್ಲಾ ಮಟ್ಟದ ಸುಸಜ್ಜಿತ ಗುರು ಭವನ ನಿರ್ಮಾಣಕ್ಕೆ ಕ್ರಮ

**ಸಚಿವ ಸಿ.ಪುಟ್ಟರಂಗಶೆಟ್ಟಿ**



ಚಾಮರಾಜನಗರ: ಜಿಲ್ಲಾ ಮಟ್ಟದ ಸುಸಜ್ಜಿತ ಗುರುಭವನ ನಿರ್ಮಾಣಕ್ಕೆ ಕ್ರಮಕೈಗೊಳ್ಳುವುದಾಗಿ ಪಶು ಸಂಗೋಪನೆ, ರೇಷ್ಮೆ ಇಲಾಖೆ ಸಚಿವ ಸಿ.ಪುಟ್ಟರಂಗಶೆಟ್ಟಿ ಭರವಸೆ ನೀಡಿದರು.

ನಗರದ ವಾಲ್ಮೀಕಿ ಭವನದಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕದ ವತಿಯಿಂದ ನಡೆದ ಪ್ರತಿಭಾ ಪುರಸ್ಕಾರ, ನೂತನ ಸಚಿವರಾದ ಸಿ.ಪುಟ್ಟರಂಗಶೆಟ್ಟಿರವರಿಗೆ ಅಭಿನಂದನೆ, 2026-31ರ ಅವಧಿಯ ಸಂಘದ ಪದಾಧಿಕಾರಿಗಳ ಪದಗ್ರಹಣ ಹಾಗೂ ಶಿಕ್ಷಕರಿಗೆ ಕೃತಜ್ಞತಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು

ಯಡಬೆಟ್ಟ ಸಮೀಪದಲ್ಲಿ ಹೊಸ ಬಡಾವಣೆಗೆ ಜಾಗ ಗುರುತಿಸಿದ್ದು ಸರ್ಕಾರದಿಂದ ಅನುದಾನ ಬಿಡುಗಡೆಯಾಗುತ್ತದೆ.ನಿಮ್ಮ ಬೇಡಿಕೆಯಂತೆ ಅಲ್ಲಿ ಜಾಗ ನೀಡಿ ಜಿಲ್ಲಾ ಮಟ್ಟದ ಸುಸಜ್ಜಿತ ಗುರುಭವನ ನಿರ್ಮಿಸಲಾಗುವುದು ಎಂದರು.

ಬಿಸಿಯೂಟದ ತರಕಾರಿ, ಮೊಟ್ಟೆ ಖರೀದಿಸಲು ಶಿಕ್ಷಕರಿಗೆ ಹೊರೆಯಾಗಿದ್ದು, ಇದರಿಂದ ಗುಣಮಟ್ಟದ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ನೀಡಲು ಆಗುತ್ತಿಲ್ಲ. ಕ್ಷೇತ್ರ ಶಿಕ್ಷಣಾಧಿ ಕಾರಿಗಳ ಹೊಸ ಕಚೇರಿ ನಿರ್ಮಿಸಿಕೊಡಿ ಎಂದು ಮನವಿ ಮಾಡಿದ್ದೀರಿ. ಶಿಕ್ಷಕರ ಸಮಸ್ಯೆಗಳನ್ನು ವಿಧಾನಸಭೆಯಲ್ಲಿ ಚರ್ಚಿಸಿ ಪರಿಹರಿಸಲು ಪ್ರಯತ್ನ ಮಾಡುವುದಾಗಿ ಸಚಿವರು ಹೇಳಿದರು. ಕರ್ನಾಟಕ ರಾಜ್ಯ ಪ್ರಾಥಮಿಕ ಶಿಕ್ಷಕರ ಸಂಘದ ಜಿಲ್ಲಾ ಘಟಕವು ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಶಿಕ್ಷಕರ ಮಕ್ಕಳನ್ನು ಗುರುತಿಸಿ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸುವ ಮೂಲಕ ಅವರ ಹೆಚ್ಚಿನ ಓದಿಗೆ ಪ್ರೇರೆಸುವುದು ಒಂದು ಒಳ್ಳೆಯ ಕಾರ್ಯಕ್ರಮವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಮಹಾದೇವಸ್ವಾಮಿ ಮಾತನಾಡಿ, ಬಿಸಿಯೂಟದ ಉಚಿತ ಮೊಟ್ಟೆ ಜವಾಬ್ದಾರಿ ಏಜೆನ್ಸಿ ಗೆ ಕೊಡಬೇಕು. ಜಿಲ್ಲಾ ಮಟ್ಟದ ಗುರುಭವನ ಆಗಬೇಕು. ಕ್ಷೇತ್ರ ಶಿಕ್ಷಣಾಧಿಕಾರಿಗಳ ನೂತನ ಕಚೇರಿ ಆಗಬೇಕು. ರಾಜ್ಯ ಸಮೀಕ್ಷೆಗಳಿಗೆ ಶಿಕ್ಷಕ ನೇಮಿಸಬಾರದು, ಗಳಿಕೆ ರಜೆ ನೀಡಬೇಕು. ಶಿಕ್ಷಕನ್ನು ಇತರ ಕೆಲಸಗಳಿಗೆ ನಿಯೋಜಿಸದೆ ಭೋದನೆ ಸೀಮಿತಗೊಳಿಸಬೇಕಿದೆ ಎಂದರು.

ಎಸ್ ಎಸ್ ಎಲ್ ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಶಿಕ್ಷಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

### ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ದಾನಿಗಳಿಗೆ ಸನ್ಮಾನ

ಬಿವಿಎಸ್ ಪ್ರತಿಷ್ಠಾನದ ವೆಂಕಟನಾಗಪ್ಪಶೆಟ್ಟಿ, ರೋಟರಿ ಅಧ್ಯಕ್ಷ ಅಬ್ದುಲ್ ಅಜೀಜ್ ದೀನಾ, ಮಾಜಿ ಅಧ್ಯಕ್ಷ ಕಾಗಲವಾಡಿ ಚಂದ್ರು, ಸಿದ್ದಯ್ಯನಪುರ ಸರ್ಕಾರಿ ಶಾಲೆ ಶಿಕ್ಷಕ ನಾರಾಯಣ್, ಚೇತನ್ ಕಲಾವಾಹಿನಿ ಸಂಸ್ಥೆಯ ಅಧ್ಯಕ್ಷ ರಾಜಪ್ಪ, ಬದನಗುಪ್ಪೆ ಶಿಕ್ಷಕಿ ಮಂಜುಳ, ಟಿವಿಎಸ್ ಕಂಪನಿ, ಬಸವರಾಜೇಂದ್ರ ಟ್ರಸ್ಟ್ ಅವರನ್ನು ಸನ್ಮಾನಿಸಲಾಯಿತು.

ಸಾಹಿತಿ ದೇವನೂರು ಮಹೇಂದ್ರಕುಮಾರ್ ಮುಖ್ಯ ಭಾಷಣ ಮಾಡಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಮಾದಪ್ಪ ಪ್ರಾಸ್ತಾವಿಕ ಭಾಷಣ ಮಾಡಿದರು. ತಾಲೂಕು ಅಧ್ಯಕ್ಷ ಸಿ.ಕೆ.ರಾಮಸ್ವಾಮಿ ಮಾತನಾಡಿದರು.ಕಾರ್ಯಕ್ರಮದಲ್ಲಿ ಬಿಇಓ ಹನುಮಶೆಟ್ಟಿ, ಬಿವಿಎಸ್ ವಿ ಪ್ರತಿಷ್ಠಾನದ ವೆಂಕಟನಾಗಪ್ಪಶೆಟ್ಟಿ, ರೋಟರಿ ಅಧ್ಯಕ್ಷ ಅಬ್ದುಲ್ ಅಜೀಜ್ ದೀನಾ, ಮಾಜಿ ಅಧ್ಯಕ್ಷ ಕಾಗಲವಾಡಿ ಚಂದ್ರು, ಜಿಲ್ಲಾ ಉಪಾಧ್ಯಕ್ಷ ಶಿವಪ್ರಸಾದ್, ಭವಾನಿದೇವಿ, ಖಜಾಂಚಿ ನಂದೀಶ್, ಸಹ ಕಾರ್ಯದರ್ಶಿ ಉಮೇಶ್, ಸಂಘಟನಾ ಕಾರ್ಯದರ್ಶಿ ಶಿವರಾಜ್, ತಾಲೂಕು ಕಾರ್ಯದರ್ಶಿ ಎನ್.ಸುಧಾ, ಉಪಾಧ್ಯಕ್ಷರಾದ ಸಿ.ಎಂ.ಸುಶೀಲ, ಧನಂಜಯ, ಸಹ ಕಾರ್ಯದರ್ಶಿ ಬಿ.ಕೃಷ್ಣಮೂರ್ತಿ, ಬಿ.ಎಸ್.ಲತಾ, ಸಂಘಟನಾ ಕಾರ್ಯದರ್ಶಿಗಳಾದ ಭರತ್ ಭೂಷಣ್, ಎನ್.ಶ್ವೇತ ಇತರರು ಹಾಜರಿದ್ದರು.

# ಸಂಕಲ್ಪದಿಂದ ಭಾಷೆ, ಸಂಸ್ಕೃತಿ ರಕ್ಷಣೆ

## ಕೇಂದ್ರ ಸಚಿವ ದುರ್ಗಾದಾಸ್ ಉಯಿಕಿ ಅಭಿಮತ | ರಾಷ್ಟ್ರೀಯ ವಿಚಾರಸಂಕಿರಣ ಉದ್ಘಾಟನೆ




ಮೈಸೂರು: ಬುಡಕಟ್ಟು ಭಾಷೆ ಹಾಗೂ ಸಂಸ್ಕೃತಿಯ ಸಂರಕ್ಷಣೆಗೆ ರಾಷ್ಟ್ರೀಯ ಸಂಕಲ್ಪ ಅತ್ಯಗತ್ಯವಾಗಿದ್ದು, ನಾವೆಲ್ಲರೂ ಸೇರಿ ಬುಡಕಟ್ಟು ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಸಂಕಲ್ಪ ಮಾಡಬೇಕು ಎಂದು ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ರಾಜ್ಯ ಸಚಿವರಾದ ದುರ್ಗಾದಾಸ್ ಉಯಿಕಿ ತಿಳಿಸಿದರು.

ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ (ಬೆಂಗಳೂರು) ಹಾಗೂ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ವತಿ ಯಿಂದ ನಗರದ ಖಾಸಗಿ ಹೋಟೆಲ್ನಲ್ಲಿ 'ಬುಡಕಟ್ಟು ಭಾಷೆಗಳು ಮತ್ತು ವಸ್ತು ಸಂಗ್ರಹಾಲಯಗಳ' ಕುರಿತು ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ವಿಚಾರಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

### ಪ್ರಕೃತಿ ಸಂರಕ್ಷಣೆ ಮತ್ತು ಇತಿಹಾಸದ ದಾಖಲೀಕರಣ

ಭಾರತೀಯ ಪರಂಪರೆಯಲ್ಲಿ ಪ್ರಕೃತಿ ಮತ್ತು ಅರಣ್ಯ ಸಂಸ್ಕೃತಿಗೆ ವಿಶೇಷ ಸ್ಥಾನವಿದೆ. ಭಾರತೀಯ ಇತಿಹಾಸದ ಹಲವು ಪ್ರಮುಖ ಘಟ್ಟಗಳಲ್ಲಿ ಬುಡಕಟ್ಟು ಸಮುದಾಯಗಳು ಮಹತ್ವದ ಪಾತ್ರ ವಹಿಸಿದ್ದು, ಅವರ ಕೊಡುಗೆಗಳನ್ನು ಮುಖ್ಯವಾಹಿನಿಯ ಇತಿಹಾಸದಲ್ಲಿ ಸೂಕ್ತವಾಗಿ ದಾಖಲಿಸುವ ಅಗತ್ಯವಿದೆ. ದೇಶದ ನದಿಗಳು ಮಾಲಿನ್ಯಗೊಳ್ಳುತ್ತಿರುವುದು, ಕೃಷಿಯಲ್ಲಿ ಅತಿಯಾದ ರಾಸಾಯನಿಕ ಬಳಕೆಯಿಂದ ಆಹಾರ ಮತ್ತು ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿರುವುದು ಹಾಗೂ ವಿವಿಧ ಕಾಯಿಲೆಗಳು ಹೆಚ್ಚುತ್ತಿರುವುದು ಕಳವಳಕಾರಿ ಬೆಳವಣಿಗೆಯಾಗಿದೆ. ಭೌತಿಕ ಜೀವನಶೈಲಿಯ ಹಿಂದೆ ಸಾಗುತ್ತಿರುವ ಆಧುನಿಕ ಸಮಾಜವು ಪ್ರಕೃತಿಯೊಂದಿಗಿನ ತನ್ನ ಸಮತೋಲನವನ್ನು ಕಳೆದುಕೊಳ್ಳುತ್ತಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಈ ಕಾರ್ಯಕ್ರಮದಲ್ಲಿ ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ಜಂಟಿ ಕಾರ್ಯದರ್ಶಿ ಅನಂತ್ ಪ್ರಕಾಶ್ ಪಾಂಡೆ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಕನಗವಲ್ಲಿ, ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಬಸವರಾಜ್ ಕೋಡಗುಂಟಿ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ನಿರ್ದೇಶಕ ಡಾ. ಅಶೋಕ್, ಜಂಟಿ ನಿರ್ದೇಶಕ ಡಾ. ರಾಜ್ ಕುಮಾರ್, ಉಪ ನಿರ್ದೇಶಕಿ ಹೆಚ್.ಎಸ್. ಗಿರಿಜಾಂಬ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

### ಮೈಸೂರಿನ ಪರಂಪರೆ, ಸಂಗ್ರಹಾಲಯಗಳ ಪಾತ್ರ

**ಮೈಸೂರು ಪೌರಾಣಿಕ ಪರಂಪರೆ, ರಾಜವಂಶಗಳು, ಕಲೆ, ಸಾಹಿತ್ಯ, ಸಂಗೀತ ಮತ್ತು ಜಾನಪದ ಸಂಸ್ಕೃತಿಯ ಸುದೀರ್ಘ ಇತಿಹಾಸಕ್ಕೆ ಸಾಕ್ಷಿಯಾಗಿದೆ. ಗಂಗ, ಚಾಲುಕ್ಯ, ಚೋಳ, ಹೊಯ್ಸಳ, ವಿಜಯನಗರ ಅರಸರು ಹಾಗೂ ಒಡೆಯರು ಸೇರಿದಂತೆ ಹಲವು ರಾಜವಂಶಗಳ ಪ್ರಭಾವ ಈ ಪ್ರದೇಶದ ಇತಿಹಾಸದ ಮೇಲಿದೆ. ದೇಶದ ಸಂಸ್ಕೃತಿ, ಬುಡಕಟ್ಟು ಅಸ್ಮಿತೆ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಉಳಿಸುವ ನಿಟ್ಟಿನಲ್ಲಿ ಬುಡಕಟ್ಟು ಭಾಷೆಗಳು ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಇತಿಹಾಸವನ್ನು ದಾಖಲಿಸಿ ಸಂರಕ್ಷಿಸಲು ಇಂತಹ ವಸ್ತು ಸಂಗ್ರಹಾಲಯಗಳು ಮಹತ್ವದ ಪಾತ್ರ ವಹಿಸಲಿವೆ ಎಂದು ಸಚಿವರು ಹೇಳಿದರು.**

### ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ಕೊಡುಗೆ

**ಬುಡಕಟ್ಟು ಸಮಾಜದ ಮೂಲ ಜ್ಞಾನ, ಪರಂಪರೆ, ಶಿಕ್ಷಣ ಮತ್ತು ಸಾಂಸ್ಕೃತಿಕ ಮೌಲ್ಯಗಳ ಕುರಿತು ಮೂರು ದಿನಗಳ ಕಾಲ ನಡೆಯುತ್ತಿರುವ ಈ ಚರ್ಚೆ ಮತ್ತು ಕಾರ್ಯಾಗಾರವು ಅತ್ಯಂತ ಮಹತ್ವದ್ದಾಗಿದೆ. 2047ರ ವೇಳೆಗೆ ಭಾರತವನ್ನು ವಿಶ್ವದ ಪ್ರಮುಖ ರಾಷ್ಟ್ರವನ್ನಾಗಿ ರೂಪಿಸುವ ಗುರಿಯಲ್ಲಿ ಬುಡಕಟ್ಟು ಸಮುದಾಯಗಳೂ ಸಮಾನವಾಗಿ ಪಾಲ್ಗೊಳ್ಳಬೇಕು. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಲಕ್ಷಾಂತರ ಬುಡಕಟ್ಟು ಯೋಧರು ತಮ್ಮ ಪ್ರಾಣವನ್ನು ತ್ಯಾಗ ಮಾಡಿದ್ದಾರೆ. 2014ರ ನಂತರ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ, ವಿಶೇಷವಾಗಿ ಸ್ವಾತಂತ್ರ್ಯದ 75ನೇ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೇಶದ ವಿವಿಧ ಭಾಗಗಳ ಬುಡಕಟ್ಟು ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸಿ, ಅವರ ಕೊಡುಗೆಯನ್ನು ಜನರಿಗೆ ಪರಿಚಯಿಸುವ ಕಾರ್ಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದು ತಿಳಿಸಿದರು.**

### ವಿಕಸಿತ ಭಾರತ ನಿರ್ಮಾಣಕ್ಕೆ ಸಮನ್ವಯದ ಅಗತ್ಯ

**ಸಂಸದ ಯದುವೀರ್**

**ಕಾರ್ಯಕ್ರಮದಲ್ಲಿ ಮಾತನಾಡಿದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಕರ್ನಾಟಕದಲ್ಲಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಮನ್ವಯದಿಂದ ಕಾರ್ಯನಿರ್ವಹಿಸಿದರೆ, ಈ ಸಮುದಾಯಗಳ ಸಮಗ್ರ ಅಭಿವೃದ್ಧಿಗೆ ಉತ್ತಮ ಫಲಿತಾಂಶ ದೊರೆಯಲಿದೆ. ಭಾರತದ ಇತಿಹಾಸದುದ್ದಕ್ಕೂ ಬುಡಕಟ್ಟು ಸಮುದಾಯಗಳು ನೀಡಿರುವ ಕೊಡುಗೆ ಅಪಾರವಾಗಿದ್ದು, ಎಲ್ಲಾ ಸಮುದಾಯಗಳ ಅಭಿವೃದ್ಧಿ ಸಾಧಿಸಿದಾಗ ಮಾತ್ರ 'ವಿಕಸಿತ ಭಾರತ'ದ ಗುರಿ ಸಾಕಾರವಾಗಲಿದೆ. ಭಾಷಾ ಸಂರಕ್ಷಣೆ ಕೇವಲ ಭಾಷೆಯ ಉಳಿವಿಗೆ ಮಾತ್ರವಲ್ಲದೆ, ಸ್ಥಳೀಯ ಸಂಸ್ಕೃತಿ ಮತ್ತು ಜ್ಞಾನದ ಸಂರಕ್ಷಣೆಯಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತದೆ. ಕೇವಲ ಸರ್ಕಾರ ಬುಡಕಟ್ಟು ಸಮುದಾಯಗಳಿಗಾಗಿ ಏನು ಮಾಡಬಹುದು ಎಂದು ಚರ್ಚಿಸುವುದರ ಜೊತೆಗೆ, ವಿಕಸಿತ ಭಾರತ ನಿರ್ಮಾಣಕ್ಕೆ ಬುಡಕಟ್ಟು ಸಮುದಾಯಗಳು ನೀಡಬಹುದಾದ ಕೊಡುಗೆಯ ಬಗ್ಗೆಯೂ ಸಮಾನವಾಗಿ ಚರ್ಚಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.**

# ಸಾಮಾಜಿಕ ಬುದ್ಧಿಜೀವಿ ಪ್ರೊ.ಮುಜಾಫರ್ ಅಸಾದಿ: ದಿನೇಶ್ ಅಮೀನ್ ಮಟ್ಟು



ಮೈಸೂರು: ವಿಶ್ವವಿದ್ಯಾನಿಲಯ ಪ್ರವೇಶಿಸಲಾಗದವರ ಬಳಿಗೆ ತೆರಳಿದ ಸಾಮಾಜಿಕ ಬುದ್ಧಿಜೀವಿ ಪ್ರೊ. ಮುಜಾಫರ ಅಸಾದಿ ಎಂದು ಹಿರಿಯ ಪತ್ರಕರ್ತ ದಿನೇಶ್ ಅಮೀನ್‌ಮಟ್ಟು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಸಾರ್ವಜನಿಕ ಆಡಳಿತ ವಿಭಾಗ ಮತ್ತು ಮೈಸೂರು ಓಪನ್ ಫೋರಂವತಿಯಿಂದ ಮಾನಸಗಂಗೋತ್ರಿಯ ಬಿ.ಎಂ.ಶ್ರೀಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಪ್ರೊ.ಮುಜಾಫರ್ ಅಸ್ಸಾದಿ ಸ್ಮರಣಾರ್ಥ ಕಾರ್ಯಕ್ರಮದಲ್ಲಿ ಪ್ರೊ. ಮುಜಫರ್ ಅವರ ಚಿಂತನೆಗಳು, ಅದರ ಮೌಲ್ಯ ಮತ್ತು ಶಾಶ್ವತ ಪರಂಪರೆ ವಿಷಯ ಕುರಿತು ಮಾತನಾಡಿದರು. ವಿಶ್ವವಿದ್ಯಾನಿಲಯಗಳು ಬೀದಿಗೆ ಬರಬೇಕಿತ್ತು. ವಿವಿ ಆವರಣಕ್ಕೆ ಕೂಲಿ ಕಾರ್ಮಿಕರು, ಆದಿವಾಸಿಗಳು, ಬಡವರಿಗೆ ಪ್ರವೇಶ ಇಲ್ಲ. ವಿವಿಗಳಿಗೆ ಪ್ರವೇಶ ದೊರೆಯದ ಜನಗಳ ಬಳಿಗೆ ಹೋದವರು ಅಸಾದಿ ಎಂದರು.

ದಂತಗೋಪುರದ ಪ್ರಾಧ್ಯಾಪಕರಾಗಲಿಲ್ಲ. ಬೀದಿಯಲ್ಲಿ ನಿಂತು ಹೋರಾಟ ಮಾಡುತ್ತಿದ್ದರು. ನೊಂದವರ ಪರ ಬರೆಯುತ್ತಿದ್ದರು. ಅವರಿಗಾಗಿ ಹೋರಾಟ ಕೂಡ ಮಾಡುತ್ತಿದ್ದರು. ಸಾಮಾಜಿಕ ಹಿತಾಸಕ್ತಿಗೆ ಓಗೂಡುತ್ತಿದ್ದರೆ, ಅವರ ಮೇಧಾವಿತನ ಹಾಗೂ ಮಾನವಿಯ ಗುಣಗಳು ಎಲ್ಲರಿಗೂ ಬರುವುದಿಲ್ಲ. ಅಸ್ಸಾದಿ ಅವರಿಗೆ ಹೊಂದಾಣಿಕೆ ಮನೋಭಾವನೆ ಇದ್ದಿದ್ದರೆ, ವಿಶ್ವವಿದ್ಯಾನಿಲಯವೊಂದರೆ ಕುಲಪತಿಯಾಗಿ ನಿವೃತ್ತರಾಗಬೇಕಿತ್ತು. ಆದರೆ, ಅವರ ಜೀವನದುದ್ದಕ್ಕೂ ಸೈದ್ಧಾಂತಿಕವಾಗಿ ಬದುಕಿದವರು. ಅಸಾದಿಗೆ ಅವರಿಗೆ ಹುದ್ದೆಗಿಂತ ಸೈದ್ಧಾಂತಿಕ ನಿಲುವು ತುಂಬ ಮುಖ್ಯವಾಗಿತ್ತು. ಪ್ರೊ. ಮುಜಾಫರ್ ಅಸ್ಸಾದಿ ಅವರು ಇದ್ದಿದ್ದರೆ ಚುನಾವಣೆಯ ಪ್ರಕ್ರಿಯೆಯ ಎಸ್‌ಐಆರ್ ಬಗ್ಗೆ ಮಾತನಾಡುತ್ತಿದ್ದರು. ಅಲ್ಲದೇ ಜೆನ್ ಝೀಗಳ ಹೋರಾಟದ ರೂಪರೇಷಗಳ ಬಗ್ಗೆ ವಿಸ್ಕೃತವಾಗಿ ಚರ್ಚೆ ಮಾಡುತಿದ್ದರು. ಇವರ ನಿರ್ವಾತ ಸ್ಥಾನವನ್ನು ಯಾರಿಂದಲೂ ತುಂಬಲು ಸಾಧ್ಯವಿಲ್ಲ ಎಂದು ಹೇಳಿದರು.

ತುಮಕೂರು ವಿವಿಯ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಕೆ.ಮಹಾಲಿಂಗು ಅವರು, ಸಾಮಾಜಿಕ ಚಳುವಳಿ ಮತ್ತು ಮೌಲ್ಯಾಧಾರಿತ ವಿಚಾರಗಳು ಕುರಿತು ವಿಷಯ ಮಂಡನೆ ಮಾಡಿದರು. ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ಮುಖ್ಯಸ್ಥ ಪ್ರೊ.ಕೃಷ್ಣ ಹೊಂಬಾಳ್ ಮಾತನಾಡಿದರು. ಮೈವಿವಿ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ರವಿ ಜೋಶಿ, ಹೈದರಾಬಾದ್‌ನ ಎಂಎಎನ್‌ಯುಯು ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕಿ ಡಾ.ಶಬನ ಫರ್ಹಾನ್, ಸಂಚಾಲಕರಾದ ಡಾ.ಜಿ.ಟಿ.ರಾಮಚಂದ್ರಪ್ಪ, ಡಾ.ಸಿ.ಎಲ್.ಸೋಮಶೇಖರ್, ಪ್ರೊ.ಉಮಾಪತಿ, ಪ್ರೊ.ಬೆಳ್ಳಿಯಪ್ಪ, ಪ್ರೊ.ಮುಜಾಫರ್ ಅಸ್ಸಾದಿ ಅವರ ಪತ್ನಿ ಮತ್ತಿತರರು ಹಾಜರಿದ್ದರು.

> **ಜೆನ್-ಝೀ ನಿಲುವುಗಳ ಬಗ್ಗೆ ಅನುಮಾನ ಇದೆ. ಅಹಿಂದ ಸಮಾನ ದುಃಖಿಗಳ ಸಂಘಟನೆ ಆಗಬೇಕು. ಸಾಮಾಜಿಕ ಬುದ್ಧಿಜೀವಿಗಳನ್ನು ಸಾಮ, ದಾನ, ದಂಡವನ್ನು ಬಳಿಸಿ ಹತ್ತಿಕ್ಕಲಾಗುತ್ತಿದೆ. ಪ್ರಗತಿಪರ ಮುಸ್ಲಿಂರು ಮೌನ ವಹಿಸಿದ್ದಾರೆ. ವಿಶ್ವವಿದ್ಯಾನಿಲಯಗಳಲ್ಲಿ ಮುಸ್ಲಿಂ ಅಧ್ಯಾಪಕರ ಸಂಖ್ಯೆ ಕ್ಷಿಣಿಸುತ್ತಿದೆ.**
>
> **-ದಿನೇಶ್ ಅಮಿನ್‌ಮಟ್ಟು** ಹಿರಿಯ ಪತ್ರಕರ್ತ

**ಜಿಲ್ಲಾ ಕುಂಬಾರರ ಸಂಘದಿಂದ ಸರ್ಜಜ್ಞ ಜಯಂತಿ, ಪ್ರತಿಭಾ ಪುರಸ್ಕಾರ ಸಮಾರಂಭ**

# ಕುಂಬಾರ ಸಮುದಾಯ ಶಿಕ್ಷಣಕ್ಕೆ ಒತ್ತು ನೀಡಿ: ಸಿ.ಪುಟ್ಟರಂಗಶೆಟ್ಟಿ



ಚಾಮರಾಜನಗರ: ಕುಂಬಾರ ಸಮುದಾಯದವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಮೂಲಕ ಉನ್ನತ ಹುದ್ದೆಗಳನ್ನು ಅಲಂಕರಿಸುವಂತೆ ಮಾಡಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಿ. ಪುಟ್ಟರಂಗಶೆಟ್ಟಿ ಸಲಹೆ ನೀಡಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ಜಿಲ್ಲಾ ಕುಂಬಾರರ ಸಂಘದ ವತಿಯಿಂದ ಆಯೋಜಿಸಿದ್ದ ಸರ್ವಜ್ಞ ಜಯಂತಿ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ವನ್ನು ಉದ್ಘಾಟಿಸಿ ಮಾತನಾಡಿದರು. ಸರ್ವಜ್ಞರು ಮಹಾನ್ ಶ್ರೇಷ್ಠ ಕವಿಗಳಾಗಿದ್ದು, ಅವರು ತಮ್ಮ ಸರಳವಾಗಿ ವಚನಗಳನ್ನು ರಚಿಸುವ ಮೂಲಕ ಜೀವನದ ಮೌಲ್ಯಗಳನ್ನು ಜಗತ್ತಿಗೆ ಸಾರಿದ್ದಾರೆ. ಅವರ ವಚನಗಳ ಸಾರವನ್ನು ಪ್ರತಿಯೊಬ್ಬರು ಅರಿತು ತಮ್ಮ ಜೀವನಕ್ಕೆ ಅಳವಡಿಸಿಕೊಳ್ಳಬೇಕು ಎಂದರು.

ಈ ಸಮುದಾಯ ಹಲವು ವರ್ಷಗಳ ಬೇಡಿಕೆಯಾಗಿರುವ ಸಮುದಾಯ ಭವನಕ್ಕೆ ಜಿಲ್ಲಾ ಕೇಂದ್ರದಲ್ಲಿ ಜಾಗದ ಕೊರತೆ ಇದೆ. ನಗರದ ಹೊರವಲಯದಲ್ಲಿ ನಿವೇಶನ ಹಂಚಲು 52 ಎಕರೆ ಜಮೀನು ಖರೀದಿ ಮಾಡಲಾಗಿದೆ. ಅಲ್ಲಿ ಕುಂಬಾರ, ಮಡಿವಾಳ ಸೇರಿದಂತೆ ಇತರೆ ಹಿಂದುಳಿದ ಸಮುದಾಯಗಳಿಗೆ ಭವನ ನಿರ್ಮಿಸಲು ಜಾಗ ನೀಡುವುದಾಗಿ ಭರವಸೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕುಂಬಾರ ಸಂಘದ ಅಧ್ಯಕ್ಷ ಮದ್ದೂರು ವಿರೂಪಾಕ್ಷ ಮಾತನಾಡಿ, ಸಮುದಾಯ ಶಕ್ತಿ ಪ್ರದರ್ಶನ ಮಾಡುವುದಕ್ಕಾಗಿ ಈ ಕಾರ್ಯಕ್ರಮ ಅಯೋಜಿಸಲಾಗಿದೆ.ನಮ್ಮ ಸಮುದಾಯ ನೆಹರು ಕಾಲದಿಂದಲೂ ಕಾಂಗ್ರೆಸ್ ಬೆಂಬಲಿಸಿಕೊಂಡು ಬರಲಾಗಿದೆ. ಇನ್ನೂ ಒಂದು ವಿಧಾನಪರಿಷತ್ ಸ್ಥಾನ ನೀಡಿಲ್ಲ. ಒಂದು ತಿಂಗಳೊಳಗೆ 3 ಸ್ಥಾನ ನೀಡಬೇಕು ಇಲ್ಲದಿದ್ದರೆ ಕಾಂಗ್ರೆಸ್ ನಿಂದ ದೂರವಿರಬೇಕಾಗುತ್ತದೆ ಎಂದು ಎಚ್ಚರಿಸಿದರು

ಶ್ರೀಸುತ್ತೂರು ಕ್ಷೇತ್ರ ಜಗದ್ಗುರು ಶ್ರೀವೀರಸಿಂಹಾಸನ ಮಹಾಸಂಸ್ಥಾನದ ಶ್ರೀಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಬೆಳಗಾವಿ ಅಥಣಿ ಕುಂಬಾರರ ಗುರುಪೀಠ ಶ್ರೀಬಸವ ಕುಂಬಾರ ಗುಂಡಯ್ಯಸ್ವಾಮಿ, ಚಿತ್ರದುರ್ಗದ ಕುಂಬಾರ ಗುಂಡಯ್ಯ ಮಹಾಸಂಸ್ಥಾನದ ಬಸವಮೂರ್ತಿ ಗುಂಡಯ್ಯಸ್ವಾಮಿಜೀ ಆರ್ಶೀವಚನ ನೀಡಿದರು.

ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ ಶರಣಕುಂಬಾರ ಗುಂಡಯ್ಯರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ಗುಂಡ್ಲುಪೇಟೆ ಕ್ಷೇತ್ರದ ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಸಂತಕವಿ ಸರ್ವಜ್ಞರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು..

ಸಚಿವರಾದ ಪ್ರೋ.ಎ.ಲಕ್ಷ್ಮೀಸಾಗರ್ ಭಾವಚಿತ್ರಕ್ಕೆ ಕುಂಬಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಡಾ. ಶ್ರೀನಿವಾಸ್‌ವೇಲು ಪುಷ್ಪಾರ್ಚನೆ ಮಾಡಿ ಮಾತನಾಡಿದರು.. ತಮಕೂರು ವಿಶ್ವವಿದ್ಯಾಲಯ ಕುಲಪತಿ ಪ್ರೊ. ನಾಗಭೂಷಣ್, ವಿಧಾನ ಪರಿಷತ್ ನಿವೃತ್ತ ಕಾರ್ಯದರ್ಶಿ ನಿರ್ಮಲ, ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತ ಉಪನಿರ್ದೇಶಕ ಕೆ.ಕೆ.ಪುಟ್ಟಸ್ವಾಮಿ ವಿದ್ಯಾರ್ಥಿಗಳಿಗೆ ಹಿತವಚನ ನೀಡಿದರು.. ಸಾಹಿತಿ ಶಿವಣ್ಣ ಇಂದುವಾಡಿ ಸರ್ವಜ್ಞರ ಬಗ್ಗೆ ಉಪನ್ಯಾಸ ನೀಡಿದರು.

ಮಾಜಿ ಅಡ್ವಕೇಟ್ ಜನರಲ್ ಎನ್.ದೇವದಾಸ್, ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ರಾಜುಕುಂಬಾರ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಕುಂಬಾರ ಸಂಘ ಅಧ್ಯಕ್ಷ ಬಾಬುರಾವ್ ಕುಂಬಾರ, ಬೆಂಗಳೂರು ಕುಂಬಾರ ಸಂಘದ ಅಧ್ಯಕ್ಷ ಶ್ರೀನಿವಾಸ್, ಜಿಲ್ಲಾ ಸರ್ಕಾರಿ ನೌಕರರ ಕುಂಬಾರರ ಸಂಘ ಅಧ್ಯಕ್ಷ ಡಾ. ಎಂ.ಮಹೇಶ್ ,ಜಿಲ್ಲಾ ಕುಂಬಾರರ ಕೈಗಾರಿಕಾ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ರಾಜೇಂದ್ರ, ಉಪಾಧ್ಯಕ್ಷ ರಮೇಶ್ ಹೆಗ್ಗೋಠಾರ, ಮಲ್ಲಯ್ಯನಪುರ ಶಿವಣ್ಣ, ತಾಳವಾಡಿ ಪಿರ್ಕಾ ರಾಮಚಂದ್ರ, ಮಸಣಾಪುರ ಶ್ರೀನಿವಾಸ, ನಾಗವಳ್ಳಿ ಚಾಮರಾಜು, ಕೃಷ್ಣಪ್ಪ ಮಲ್ಲೂಪುರ, ಅಮಚವಾಡಿ ರಾಜಣ್ಣ, ಕೊಳ್ಳೇಗಾಲ ಲಿಂಗರಾಜು ಹಾಜರಿದ್ದರು

## ಶೋಭಗೆ ಪಿಎಚ್. ಡಿ



**ಮೈಸೂರು:** ಶೋಭ ಎಲ್. ಎನ್ ಅವರು ಸಂಶೋಧನೆ ನಡೆಸಿ ಸಾದರಪಡಿಸಿದ 'ಇಪ್ಪತ್ತೊಂದನೆಯ ಶತಮಾನದ ಮಹಿಳಾ ಅಂಕಣ ಸಾಹಿತ್ಯ: ಬಹುಶಿಸ್ತೀಯ ನೆಲೆಗಳು' ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿ ಘೋಷಿಸಿದೆ.

ಅವರು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕಿಯಾದ ಡಾ.ಎಸ್.ಡಿ.ಶಶಿಕಲಾ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು.

ಶೋಭ ಅವರು ನಗರದ ನಿವಾಸಿಯಾಗಿದ್ದು, ಕೆ.ಆರ್.ಪೇಟೆಯ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇವರು ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೂಕಿನ ಲಾಳಂದೇವನಹಳ್ಳಿಯ ನಾಗರಾಜು ಎಲ್.ಪಿ ಮತ್ತು ವನಜಾಕ್ಷಿ ಅವರ ಪುತ್ರಿ ಹಾಗೂ ಮೋಹನ್ ಕುಮಾರ್ ಅವರ ಪತ್ನಿಯಾಗಿದ್ದಾರೆ.

## ಅರ್ಜಿ ಆಹ್ವಾನ

**ಮಡಿಕೇರಿ :** ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯಗಳಲ್ಲಿ 2026-27ನೇ ಸಾಲಿನಲ್ಲಿ ಪೂರ್ಣ ಕಾಲಿಕವಾಗಿ ಪಿಎಚ್‌ಡಿ ಸಂಶೋಧನೆ ಕೈಗೊಳ್ಳುತ್ತಿರುವ ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ (ಜೆಆರ್‌ಎಫ್ ಮಾದರಿ) ಫೆಲೋಶಿಪ್ ಪಾವತಿಸುವ ಸಂಬಂಧ ಪಿಹೆಚ್.ಡಿ ಫೆಲೋಶಿಪ್ ಯೋಜನೆಯಡಿ ಸೇವಾ ಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ವಿದ್ಯಾರ್ಥಿಗಳು ಕೂಡಲೇ ಇದರ ಸದುಪಯೋಗ ಪಡಿಸಿಕೊಳ್ಳಲು ಕೋರಿದೆ. ಅರ್ಜಿ ಸಲ್ಲಿಸಲು ಅಕ್ಟೋಬರ್, 31 ಕೊನೆಯ ದಿನವಾಗಿದೆ. ಸಂಶೋಧನಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. ಅಲ್ಪಸಂಖ್ಯಾತರ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ವರ್ಗಕ್ಕೆ ಸೇರಿದವರಾಗಿರಬೇಕು. ಸರ್ಕಾರಿ/ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳು ಫೆಲೋಶಿಪ್‌ಗಾಗಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ. ವಿದ್ಯಾರ್ಥಿಯ/ಪಾಲಕರ/ಪೋಷಕರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಲ್ಲಿ ರೂ.8 ಲಕ್ಷಗಳನ್ನು ಮೀರಬಾರದು. ವಿದ್ಯಾರ್ಥಿಯ ಗರಿಷ್ಠ ವಯೋಮಿತಿ 35 ವರ್ಷ ಮೀರಬಾರದು.

ವಿದ್ಯಾರ್ಥಿಯು ಸರ್ಕಾರದಿಂದ ಶಾಸನಬದ್ಧ ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳಲ್ಲಿ ಪಿಎಚ್.ಡಿ. ಕೋರ್ಸಿಗೆ ಪ್ರವೇಶ ಪಡೆದಿರಬೇಕು. ಕೋರ್ಸ್-ಪೂರ್ಣಕಾಲಿಕ. ಈ ಯೋಜನೆಯ ಪ್ರಯೋಜನ ಪಡೆಯಲು ವಿದ್ಯಾರ್ಥಿಗಳು ತಮ್ಮ ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆ ಆಗಿರುವ ಬಗ್ಗೆ ಹಾಗೂ ಎನ್‌ಪಿಸಿಐ ಮ್ಯಾಪಿಂಗ್ ಆಕ್ಟಿವ್ ಆಗಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು. ಈ ಯೋಜನೆಯ ಪ್ರಕ್ರಿಯೆಯು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಸರ್ಕಾರದ ಆದೇಶಗಳು ಹಾಗೂ ಮಾರ್ಗಸೂಚಿಗಳಿಗೆ ಒಳಪಟ್ಟಿರುತ್ತದೆ.

ತಾಲ್ಲೂಕು ಮಾಹಿತಿ ಕೇಂದ್ರ ಸೋಮವಾರಪೇಟೆ ದೂ.ಸಂ. 8548068519, ಜಿಲ್ಲಾ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ, ಮೌಲಾನಾ ಆಜಾದ್ ಭವನ, ಎಫ್‌ಎಂಸಿ ಕಾಲೇಜು ಹತ್ತಿರ, ಮಡಿಕೇರಿ ಕೊಡಗು ಜಿಲ್ಲೆ 9972799091, ತಾಲ್ಲೂಕು ಮಾಹಿತಿ ಕೇಂದ್ರ ವಿರಾಜಪೇಟೆ ದೂ.ಸಂ.9900731037 ನ್ನು ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಸಚಿನ್ ಸಿ.ಎಸ್. ಅವರು ತಿಳಿಸಿದ್ದಾರೆ.

## ಸೆ. 11 ರಂದು ಶಿಕ್ಷಕರ ದಿನಾಚರಣೆ: ಪೂರ್ವಭಾವಿ ಸಭೆ

# ಶಿಕ್ಷಕರ ದಿನಾಚರಣೆ ಅರ್ಥಪೂರ್ಣವಾಗಿ ಆಚರಿಸಲು ಡೀಸಿ ಸೂಚನೆ



**ಮಂಡ್ಯ:** ಸೆಪ್ಟೆಂಬರ್ 11 ರಂದು ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆಯನ್ನು ನಗರದ ಅಂಬೇಡ್ಕರ್ ಭವನದಲ್ಲಿ ಅರ್ಥಪೂರ್ಣವಾಗಿ ಹಾಗೂ ಅಚ್ಚುಕಟ್ಟಾಗಿ ಆಯೋಜಿಸುವ ಸಂಬಂಧ ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಸಭೆಯಲ್ಲಿ ಸೆಪ್ಟೆಂಬರ್ 11 ರಂದು ಜಿಲ್ಲಾಮಟ್ಟದಲ್ಲಿ ನಡೆಯಲಿರುವ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದ ಸಿದ್ಧತೆಗಳ ಕುರಿತು ಸಮಗ್ರವಾಗಿ ಚರ್ಚಿಸಲಾಯಿತು.

ಕಾರ್ಯಕ್ರಮದ ಸ್ಥಳ, ವೇದಿಕೆ ವ್ಯವಸ್ಥೆ, ಶಿಕ್ಷಕರ ಸನ್ಮಾನ, ಪ್ರಶಸ್ತಿ ಪ್ರದಾನ, ಆಹ್ವಾನಿತರು, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ವಿವಿಧ ಇಲಾಖೆಗಳ ಜವಾಬ್ದಾರಿಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆಯಲಾಯಿತು.

ಶಿಕ್ಷಕರು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವುದರ ಜೊತೆಗೆ ಉತ್ತಮ ಸಮಾಜ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ. ಆದ್ದರಿಂದ ಶಿಕ್ಷಕರ ದಿನಾಚರಣೆಯು ಶಿಕ್ಷಕರ ಸೇವೆ, ಸಮರ್ಪಣೆ ಹಾಗೂ ಶೈಕ್ಷಣಿಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯನ್ನು ಗೌರವಿಸುವ ರೀತಿಯಲ್ಲಿ ನಡೆಯಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಅವರು ತಿಳಿಸಿದರು.

**ಅತ್ಯುತ್ತಮ ಶಿಕ್ಷಕರಿಗೆ ಸನ್ಮಾನ:** ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿರುವ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ವಿಶೇಷ ಕೊಡುಗೆ ನೀಡಿರುವ 24 ಶಿಕ್ಷಕರನ್ನು ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಸನ್ಮಾನಿಸುವ ಕಾರ್ಯಕ್ರಮವನ್ನು ಗೌರವಯುತವಾಗಿ ಆಯೋಜಿಸಬೇಕು. ಕಾರ್ಯಕ್ರಮವನ್ನು ಯಾವುದೇ ಲೋಪಕ್ಕೆ ಅವಕಾಶವಿಲ್ಲದಂತೆ ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ತಾಲ್ಲೂಕು ಮಟ್ಟದಲ್ಲಿ ಸೆಪ್ಟೆಂಬರ್ 5ರಂದು ಶಿಕ್ಷಕರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಹಾಗೂ ಅಚ್ಚುಕಟ್ಟಾಗಿ ಆಚರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು. ಶಿಕ್ಷಕರ ಸೇವೆ, ಸಮರ್ಪಣೆ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ಅವರು ನೀಡಿರುವ ಕೊಡುಗೆಯನ್ನು ಸ್ಮರಿಸುವ ಜೊತೆಗೆ, ವಿದ್ಯಾರ್ಥಿಗಳಲ್ಲಿ ಶಿಕ್ಷಕರ ಮೇಲಿನ ಗೌರವ ಮತ್ತು ಅಭಿಮಾನವನ್ನು ಹೆಚ್ಚಿಸುವಂತಹ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದು ತಿಳಿಸಲಾಯಿತು.

ಜಿಲ್ಲಾ ಮಟ್ಟದಲ್ಲಿ ಸೆಪ್ಟೆಂಬರ್ 11ರಂದು ಶಿಕ್ಷಕರ ದಿನಾಚರಣೆಯನ್ನು ವಿಶೇಷವಾಗಿ ಆಯೋಜಿಸಲು ನಿರ್ಧರಿಸಲಾಗಿದ್ದು, ಕಾರ್ಯಕ್ರಮದಲ್ಲಿ ಇತ್ತೀಚೆಗೆ ನಿವೃತ್ತರಾದ 117 ಶಿಕ್ಷಕರನ್ನು ಗೌರವಿಸಿ ಸನ್ಮಾನಿಸಲಾಗುವುದು. ಅಲ್ಲದೆ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ 400 ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದ ವೇದಿಕೆ, ಆಸನ, ಧ್ವನಿ ವ್ಯವಸ್ಥೆ, ಕುಡಿಯುವ ನೀರು, ವಾಹನ ನಿಲುಗಡೆ, ಸ್ವಚ್ಛತೆ ಹಾಗೂ ಇತರೆ ಅಗತ್ಯ ಮೂಲಸೌಕರ್ಯಗಳ ಕುರಿತು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಾದ ಕೆ. ಆರ್. ನಂದಿನಿ ರವರು ಮಾತನಾಡಿ ಶಿಕ್ಷಕರ ಉತ್ತಮ ಕಾರ್ಯವೈಖರಿ, ನವೀನ ಬೋಧನಾ ವಿಧಾನಗಳು ಹಾಗೂ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಅವರು ನೀಡಿರುವ ಕೊಡುಗೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು ದಿನಾಚರಣೆಯ ಪ್ರಮುಖ ಉದ್ದೇಶವಾಗಿರಬೇಕು ಎಂದು ಅವರು ಹೇಳಿದರು.

ಕಾರ್ಯಕ್ರಮಕ್ಕೆ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಅಗತ್ಯ ವ್ಯವಸ್ಥೆ ಮಾಡಬೇಕು. ಕಾರ್ಯಕ್ರಮದ ಯಶಸ್ಸಿಗೆ ಶಿಕ್ಷಣ ಇಲಾಖೆ ಸೇರಿದಂತೆ ಸಂಬಂಧಪಟ್ಟ ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು.

ಕಾರ್ಯಕ್ರಮದಲ್ಲಿ ಯಾವುದೇ ಗೊಂದಲ ಉಂಟಾಗದಂತೆ ಎಲ್ಲ ಸಿದ್ಧತೆಗಳನ್ನು ಮುಂಚಿತವಾಗಿ ಪೂರ್ಣಗೊಳಿಸುವಂತೆ ತಿಳಿಸಿದರು. ಸಭೆಯಲ್ಲಿ ಜಿಲ್ಲಾ ನೌಕರರಾದ ಸಂಘದ ಅಧ್ಯಕ್ಷರಾದ ನಾಗೇಶ್, ಡಿಡಿಪಿಐ ಬಸವರಾಜು, ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಕರುನಾಡು ದೀಪಾ ಸೇವಾ ಟ್ರಸ್ಟ್ ವತಿಯಿಂದ ಸಾಧಕರಿಗೆ ಸನ್ಮಾನ




**ಮೈಸೂರು:** ನಗರದ ರೋಟರಿ ಭವನದಲ್ಲಿ ಕರುನಾಡು ದೀಪಾ ಸೇವಾ ಟ್ರಸ್ಟ್ ವತಿಯಿಂದ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಸಾಧಕರ ಸನ್ಮಾನ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ವರ್ತಮಾನ ಪತ್ರಿಕೆಯ ಕೆ.ಆರ್. ನಗರ ತಾಲೂಕು ವರದಿಗಾರರು ಹಾಗೂ ಗ್ರಾಮೀಣ ನಿಧಿ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷರಾದ ಶ್ಯಾಮ್ ಸುಂದರ್ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸಾಂಬಸದಾಶಿವ ಮಹಾಸ್ವಾಮಿಗಳು, ಶ್ರೀ ಉಕ್ಕಿನ ಕಂತೆ ಮಠ, ಮಾದಳ್ಳಿ, ಕರುನಾಡು ದೀಪ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ಟಿ. ಮೋಹನ್ ಕುಮಾರ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಹಾಗೂ ಅಖಿಲ ಭಾರತ ಐಟಿಐ ಎಂಪ್ಲಾಯಿಸ್ ಫೆಡರೇಷನ್ ನವದೆಹಲಿಯ ರಾಷ್ಟ್ರೀಯ ಹಿರಿಯ ಉಪಾಧ್ಯಕ್ಷರಾದ ಶ್ರೀ ಸೋಮಶೇಖರ್, ನಂಜನಗೂಡು ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ನಾಗರಾಜು ಕರಳಾಪುರ, ಪೋಷಕ ನಟ ಶಂಕರ್ ಅಶ್ವಥ್, ಚಿತ್ರನಟಿ ಕಾವ್ಯ, ಗ್ರಾಮೀಣ ನಿಧಿ ಸೌಹಾರ್ದ ಸೊಸೈಟಿ ನಿರ್ದೇಶಕರಾದ ನರಸಿಂಹ ಎಂ.ಎಸ್., ಲೋಕೇಶ್ ಕೆ.ಎಲ್. ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಸಿಐಎಸ್‌ಸಿಇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಶಿಪ್‌ಗೆ ಜ್ಞಾನವಿ ಆಯ್ಕೆ



**ಮಂಡ್ಯ:** ಉತ್ತರ ಪ್ರದೇಶ ರಾಜ್ಯದ ಖಾನಾಪುರ ಜಿಲ್ಲೆಯಲ್ಲಿ ಇದೇ ಅಕ್ಟೋಬರ್ ತಿಂಗಳಲ್ಲಿ ನಡೆಯಲಿರುವ ಸಿಐಎಸ್‌ಸಿಇ ರಾಷ್ಟ್ರೀಯ ಚೆಸ್ ಚಾಂಪಿಯನ್ ಶಿಪ್‌ಗೆ ಎಂ.ಎಸ್. ಜ್ಞಾನವಿ ಆಯ್ಕೆಯಾಗಿದ್ದಾರೆ ಎಂದು ಮಂಡ್ಯ ರಾಯಲ್ ಚೆಸ್ ಅಕಾಡೆಮಿಯ ಸಂಸ್ಥಾಪಕ ಎಂ.ಎಸ್.ಚೇತನ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಕಾಡೆಮಿಯ ವಿದ್ಯಾರ್ಥಿನಿ ಜ್ಞಾನವಿ ಅವರು ಕರ್ನಾಟಕ-ಗೋವ ತಂಡವನ್ನು ಪ್ರತಿನಿಧಿಸಲಿದ್ದು, ಕಳೆದ 2023, 2025ರ ಅವಧಿಯಲ್ಲಿಯೂ ಆಯ್ಕೆಯಾಗಿದ್ದಾರೆ. 2025ರಲ್ಲಿ ಚಿನ್ನದ ಪದಕ ಗಳಿಸಿ ಈ ಬಾರಿಗೂ ಆಯ್ಕೆಯಾಗಿದ್ದು, ತಮ್ಮ ನಾಲ್ಕು ಪ್ರಯತ್ನಗಳಲ್ಲಿ 3 ಭಾರಿ ಆಯ್ಕೆಯಾಗಿದ್ದಾರೆ ಎಂದರು.

ಹಲವು ಅಂತರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಚೆಸ್ ಪಂದ್ಯಾವಳಿಗಳಲ್ಲಿ ಭಾಗವಹಿಸಿರುವ ಜ್ಞಾನವಿ 1600ಕ್ಕೂ ಹೆಚ್ಚು ಫಿಡೆ ರೇಟಿಂಗ್‌ಗಳಿಸಿದ್ದಾರೆ. ಪ್ರಸ್ತುತ ನಡೆಯಲಿರುವ ಸಿಐಎಸ್‌ಸಿಇ ರಾಷ್ಟ್ರೀಯ ಚೆಸ್ ಚಾಂಪಿಯನ್ ಮೂಲಕ ಎಸ್‌ಜಿಎಫ್‌ಐ ರಾಷ್ಟ್ರೀಯ ಚೆಸ್ ಪಂದ್ಯಾವಳಿಗೆ ಆಯ್ಕೆಯಾಗುವ ವಿಶ್ವಾಸ ಮೂಡಿಸಿದ್ದಾರೆ ಎಂದು ಹೇಳಿದರು.

ಗೋಷ್ಠಿಯಲ್ಲಿ ವಿದ್ಯಾರ್ಥಿನಿ ಎಂ.ಎಸ್. ಜ್ಞಾನವಿ ಇದ್ದರು.

# ಪಿರಿಯಾಪಟ್ಟಣದಲ್ಲಿ 22,847 ಮತದಾರರ ಇಳಿಕೆ

**ಕರಡು ಮತದಾರರ ಪಟ್ಟಿ ಪ್ರಕಟ: 9,046 ಮತದಾರರಿಗೆ ನೋಟಿಸ್**



**ಪಿರಿಯಾಪಟ್ಟಣ:** ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ (SIR) ಹಿನ್ನೆಲೆಯಲ್ಲಿ ಪಿರಿಯಾಪಟ್ಟಣ ತಾಲೂಕಿನಲ್ಲಿ ಕರಡು ಮತದಾರರ ಪಟ್ಟಿಯನ್ನು ಸೋಮವಾರ ಪ್ರಕಟಿಸಲಾಗಿದೆ. 2026ರ ಅಕ್ಟೋಬರ್ 1 ಅನ್ನು ಅರ್ಹತಾ ದಿನಾಂಕವಾಗಿ ನಿಗದಿಪಡಿಸಲಾಗಿದ್ದು, ಅಂತಿಮ ಮತದಾರರ ಪಟ್ಟಿ ಅಕ್ಟೋಬರ್ 27ರಂದು ಪ್ರಕಟವಾಗಲಿದೆ ಎಂದು ಮೈಸೂರು ಜಿಲ್ಲೆಯ ಮುಡಾ ಕಾರ್ಯದರ್ಶಿ ಕೆ. ಜಾನ್ಸನ್ ತಿಳಿಸಿದರು.

ತಾಲೂಕು ತಹಸೀಲ್ದಾರ್ ಕಚೇರಿಯಲ್ಲಿ ಸೋಮವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಒಟ್ಟು 1,99,706 ಮತದಾರರಿಗೆ ಗಣತಿನಮೂನೆಗಳನ್ನು ವಿತರಿಸಲಾಗಿದ್ದು, ಶೇ.100ರಷ್ಟು ನಮೂನೆಗಳ ವಿತರಣೆ ಪೂರ್ಣಗೊಂಡಿದೆ. ಈ ಪೈಕಿ 1,76,859 ನಮೂನೆಗಳನ್ನು ಡಿಜಿಟೀಕರಣಗೊಳಿಸಲಾಗಿದ್ದು, ಶೇ.88.56ರಷ್ಟು ಪ್ರಗತಿಯಾಗಿದೆ. 22,847 ಮತದಾರರ (ಶೇ.11.44) ವಿವರಗಳು ವರ್ಗಾವಣೆಗೆ ಸೇರಿವೆ ಎಂದರು. ಕರಡು ಪಟ್ಟಿಯ ಪ್ರಕಾರ 88,333 ಪುರುಷರು, 88,523 ಮಹಿಳೆಯರು ಹಾಗೂ ಮೂವರು ತೃತೀಯಲಿಂಗಿ ಮತದಾರರು ಸೇರಿದಂತೆ ಒಟ್ಟು 1,76,859 ಮತದಾರರು ಪಟ್ಟಿಯಲ್ಲಿದ್ದಾರೆ. ಜೂನ್ 16ರ ಮತದಾರರ ಪಟ್ಟಿಗೆ ಹೋಲಿಸಿದರೆ ಒಟ್ಟು ಮತದಾರರ ಸಂಖ್ಯೆಯಲ್ಲಿ 22,847ರಷ್ಟು ಇಳಿಕೆಯಾಗಿದೆ ಎಂದು ತಿಳಿಸಿದರು.

ತಾಲೂಕಿನಲ್ಲಿ ಮತಗಟ್ಟೆಗಳ ಸಂಖ್ಯೆಯೂ 235ರಿಂದ 240ಕ್ಕೆ ಹೆಚ್ಚಳವಾಗಿದ್ದು, ಐದು ಮತಗಟ್ಟೆಗಳು ಹೆಚ್ಚುವರಿಯಾಗಿ ಸೇರ್ಪಡೆಗೊಳಿಸಲಾಗಿದೆ ಎಂದರು. ಕನಿಷ್ಠ 1,200 ಮತದಾರರನ್ನು ಹೊಂದಿರುವ ಬೂತ್‌ಗಳ ಆಧಾರದ ಮೇಲೆ ರಾಜನ ಬಿಳಗುಲಿ, ಹಲಗನಹಳ್ಳಿ, ಕೆಳಗನಹಳ್ಳಿ, ಆವರ್ತಿ ಹಾಗೂ ಎನ್. ಶೆಟ್ಟಹಳ್ಳಿ ಗ್ರಾಮಗಳನ್ನು ಹೆಚ್ಚುವರಿ ಮತಗಟ್ಟೆಗಳನ್ನಾಗಿ ಕಲ್ಪಿಸಲಾಗಿದೆ ಎಂದರು.

ಕರಡು ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಆಗಸ್ಟ್ 24ರಿಂದ ಸೆಪ್ಟೆಂಬರ್ 23ರವರೆಗೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು,ಈ ಅವಧಿಯಲ್ಲಿ ಮತದಾರರು ತಮ್ಮ ಹೆಸರು, ವಿಳಾಸ ಸೇರಿದಂತೆ ವಿವರಗಳನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ತಿದ್ದುಪಡಿಗೆ ಅರ್ಜಿ ಸಲ್ಲಿಸಬಹುದಾಗಿದೆ ಹಾಗೂ

ಅಂತಿಮ ಮತದಾರರ ಪಟ್ಟಿ ಅಕ್ಟೋಬರ್ 27ರಂದು ಪ್ರಕಟವಾಗಲಿದೆ ಎಂದು ತಿಳಿಸಿದರು.

ತಹಸೀಲ್ದಾರ್ ತಹಸೀಲ್ದಾರ್ ನಿಸರ್ಗ ಪ್ರಿಯಾ ಮಾತನಾಡಿ ಪಿರಿಯಾಪಟ್ಟಣ ತಾಲೂಕಿನಲ್ಲಿ 7,171 ಮತದಾರರ ವಿವರಗಳಲ್ಲಿ ವೈಫರೀತ್ಯಾ ಕಂಡುಬಂದಿದ್ದು, 1,875 ಮತದಾರರ ವಿವರಗಳು ಮ್ಯಾಪಿಂಗ್ ಆಗಿಲ್ಲ. ಒಟ್ಟು 9,046 ಮತದಾರರಿಗೆ ಸಂಬಂಧಿಸಿದಂತೆ ಇ.ಆರ್.ಒ.ಗಳಿಂದ ನೋಟಿಸ್ ನೀಡಲಾಗುತ್ತದೆ.ಹೊಸ ಮತದಾರರ ಹೆಸರು ಸೇರ್ಪಡೆಗೆ ನಮೂನೆ-6, ವಿವರಗಳ ತಿದ್ದುಪಡಿ ಅಥವಾ ವರ್ಗಾವಣೆಗೆ ನಮೂನೆ-8 ಹಾಗೂ ಹೆಸರು ತೆಗೆದುಹಾಕಲು ನಮೂನೆ-7 ಮೂಲಕ ಅರ್ಜಿ ಸಲ್ಲಿಸಬಹುದು. ಕರಡು ಪಟ್ಟಿ ಇ.ಆರ್.ಒ.ಅಥವಾ ಎ.ಇ.ಆರ್.ಒ.ಕಚೇರಿಗಳಲ್ಲಿ ಲಭ್ಯವಿದ್ದು, ಅಧಿಕೃತ ಚುನಾವಣಾ ವೆಬ್‌ಸೈಟ್‌ಗಳಲ್ಲಿಯೂ ವೀಕ್ಷಿಸಬಹುದಾಗಿದ್ದು,ಸಾರ್ವಜನಿಕರು ತಮ್ಮ ಹೆಸರು ಮತ್ತು ವಿವರಗಳನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ನಿಗದಿತ ಅವಧಿಯೊಳಗೆ ಹಕ್ಕು ಅಥವಾ ಆಕ್ಷೇಪಣೆ ಸಲ್ಲಿಸುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರೆಹಮತ್ ಜಾನ್ ಬಾಬು, ಮುಖಂಡರಾದ ಜಗದೀಶ್, ಲೋಕಪಾಲಯ್ಯ,ಪುಟ್ಟರಾಜು ಸುನೀಲ್, ಶಿರೆಸ್ತದಾರ್ ನಾಗರಾಜ್, ರಾಕೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಜನಜಾಗೃತಿ ಅಗತ್ಯ




**ಮಂಡ್ಯ:** ಆಗಸ್ಟ್ 24: ಮಂಡ್ಯ ಜಿಲ್ಲಾ ಕಾರ್ಮಿಕ ಇಲಾಖೆ ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ವತಿಯಿಂದ ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಇಂದು ಮಂಡ್ಯದಲ್ಲಿ ಜನಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಗೌರವಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಎಚ್. ಶಶಿಧರ್ ಶೆಟ್ಟಿ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಆನಂದ ಎಂ. ಅವರು ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಮಂಡ್ಯ ಉಪವಿಭಾಗದ ಜಿಲ್ಲಾ ಕಾರ್ಮಿಕ ಅಧಿಕಾರಿಗಳಾದ ಡಾ. ಸವಿತಾ ಎಂ., ಯೋಜನಾ ನಿರ್ದೇಶಕರಾದ ಪ್ರಭಾಕರ್ ಹೆಚ್.ಬಿ., ಪ್ರಥಮ ವೃತ್ತದ ಕಾರ್ಮಿಕ ನಿರೀಕ್ಷಕರಾದ ಗಂಗಾಧರ್ ಎಸ್., ಕಾರ್ಮಿಕ ಇಲಾಖೆಯ ಕಚೇರಿ ಸಿಬ್ಬಂದಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಮೂಲಕ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿಯ ದುಷ್ಪರಿಣಾಮಗಳು, ಮಕ್ಕಳ ಹಕ್ಕುಗಳು ಹಾಗೂ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸಾರ್ವಜನಿಕರ ಸಹಕಾರದ ಕುರಿತು ಅರಿವು ಮೂಡಿಸಲಾಯಿತು.

# ಕೆಎಂಎಫ್ ಹಾಲಿನ ಉತ್ಪನ್ನಗಳಲ್ಲಿ ಕಲಬೆರಕೆ ಆರೋಪಕ್ಕೆ ಮನ್ಮುಲ್ ಅಧ್ಯಕ್ಷರ ಸ್ಪಷ್ಟನೆ




**ಮಂಡ್ಯ:** ಕೆಎಂಎಫ್ ಸಂಸ್ಥೆಯ ಉತ್ಪನ್ನಗಳ ಕಲಬೆರಕೆ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಭಿತ್ತರವಾದ ವರದಿಯಲ್ಲಿ ಯಾವುದೇ ಹುರುಳಿಲ್ಲ ಎಂದು ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ (ಮನ್‌ಮುಲ್) ಅಧ್ಯಕ್ಷ ಎಂ.ಕೆ.ಹರೀಶ್ ಬಾಬು ಸ್ಪಷ್ಟ ಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, "ಇತ್ತೀಚೆಗೆ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟವಾದ ವರದಿಯಲ್ಲಿ ಕೆಎಂಎಫ್ ಉತ್ಪನ್ನಗಳಲ್ಲಿ ಕಲಬೆರಕೆ ಮಾಡಲಾಗುತ್ತಿದೆ ಎಂದು ಪ್ರಸ್ತಾಪಿಸಲಾಗಿತ್ತು. ರಾಜ್ಯದ 14 ಹಾಲು ಒಕ್ಕೂಟಗಳ ಪೈಕಿ ಮಂಡ್ಯ ಜಿಲ್ಲಾ ಹಾಲು ಒಕ್ಕೂಟದಲ್ಲೂ ಕಲಬೆರಕೆ ನಡೆಯುತ್ತಿದೆ ಎಂದು ಬಿಂಬಿಸಿರುವುದು ಸತ್ಯಕ್ಕೆ ದೂರ" ಎಂದು ತಿಳಿಸಿದರು.


ಈ ವರ್ಷದ ಮಾರ್ಚ್ ತಿಂಗಳಿನಲ್ಲಿ ಗೆಜ್ಜಲಗೆರೆ ವ್ಯಾಪ್ತಿಯ ಹೊರಭಾಗದಲ್ಲಿರುವ 'ಮಾಸ್ಟರ್ ಇನ್ಸುಲೇಶನ್' ಗೋದಾಮಿನಲ್ಲಿ ದಾಸ್ತಾನು ಮಾಡಲಾಗಿದ್ದ ಹಾಲಿನ ಪೌಡರ್‌ನಲ್ಲಿ ಕಲಬೆರಕೆ ಕಂಡು ಬಂದಿತ್ತು. ಈ ಸಂಬಂಧ ಗೋದಾಮಿನ ಮಾಲೀಕರ ಮೇಲೆ ದೂರು ನೀಡಲಾಗಿದೆ. ಇದಾದ 3 ತಿಂಗಳ ನಂತರ ಖಾಸಗಿ ಮಾಧ್ಯಮ ಸಂಸ್ಥೆ ನಮ್ಮ ಒಕ್ಕೂಟಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ, ರಜಾ ದಿನವಾಗಿದ್ದರೂ ನಮ್ಮ ಅಧಿಕಾರಿಗಳು ಉಪಸ್ಥಿತರಿದ್ದು, ಅವರು ಕೇಳಿದ ಎಲ್ಲಾ ಪ್ರಶ್ನೆಗಳು ಮತ್ತು ಸಂದೇಹಗಳಿಗೆ ಸೂಕ್ತ ದಾಖಲೆಗಳೊಂದಿಗೆ ಸ್ಪಷ್ಟನೆ ಹಾಗೂ ವಿವರಣೆಯನ್ನು ನೀಡಿದ್ದಾರೆ," ಎಂದು ವಿವರಿಸಿದರು.

"ಕೆಎಂಎಫ್ ಮಾರ್ಗದರ್ಶನ ಹಾಗೂ ಟೆಂಡರ್ ಪ್ರಕ್ರಿಯೆಯ ನಿಯಮಗಳ ಪ್ರಕಾರ, ಉತ್ಪಾದನೆಯಾದ ಕೆನೆ ರಹಿತ ಹಾಲಿನ ಪೌಡರನ್ನು ಕಾಯ್ದಿರಿಸಲು ಎರಡು ವರ್ಷಗಳ ಅವಧಿಗೆ ಗೋದಾಮುಗಳನ್ನು ಬಾಡಿಗೆಗೆ ಪಡೆಯಲಾಗುತ್ತದೆ. ಅದರಂತೆ ಈ ಗೋದಾಮಿನಲ್ಲಿ ಇರಿಸಲಾದ ಪೌಡರ್ ಕಲಬೆರಕೆಯಾಗಿದೆ. ಇದರ ಮಾಲೀಕರಾದ ಎಸ್.ಅನಂತ್ ಮತ್ತು ಎಸ್.ಶ್ರೀಕಾಂತ್ ವಿರುದ್ಧ ಮದ್ದೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ ಎಂದು ಹೇಳಿದರು.

ಸಂಸ್ಥೆಯ ಉತ್ಪನ್ನಗಳು ಕರ್ನಾಟಕ ಮಾತ್ರವಲ್ಲದೇ ದೇಶದ ಹೊರರಾಜ್ಯಗಳು, ವಿದೇಶಗಳಿಗೂ ಸರಬರಾಜಾಗುತ್ತಿವೆ. ಉತ್ಪನ್ನ ತಯಾರಿಕೆಗೂ ಮುನ್ನ ಎಲ್ಲ ಪರೀಕ್ಷೆಗಳನ್ನು ಮಾಡಲಾಗಿರುತ್ತದೆ. ಇದನ್ನು ಎಫ್‌ಎಸ್‌ಎಸ್‌ಎಐ ಸಂಸ್ಥೆಯ ಅಧಿಕಾರಿಗಳಿಂದ ಪರಿಶೀಲನೆಗೆ ಒಳಗೊಂಡ ನಂತರವಷ್ಟೇ ಅಗತ್ಯ ಇರುವ ಕಡೆಗೆ ಸರಬರಾಜು ಮಾಡಲಾಗುತ್ತದೆ ಎಂದು ಸ್ಪಷ್ಟೀಕರಿಸಿದರು.

ಗೋಷ್ಠಿಯಲ್ಲಿ ಮನ್‌ಮುಲ್ ವ್ಯವಸ್ಥಾಪಕ ಎಚ್.ಆರ್.ರಘು, ನಿರ್ದೇಶಕರಾದ ಉಮ್ಮಡಳ್ಳಿ ಶಿವು, ಅಪ್ಪಾಜಿಗೌಡ, ಕೃಷ್ಣೇಗೌಡ, ಲಕ್ಷ್ಮೀನಾರಾಯಣ್, ಮಾಜಿ ಅಧ್ಯಕ್ಷ ಬೋರೇಗೌಡ ಇದ್ದರು.

# ಸಾವಿಗೂ ಬಾಗಿಲು ಮುಚ್ಚುವ ಕಾಯ




ದೇಹ ಮಾಂಸದ ಗೂಡಲ್ಲ, ಅದು ಬೆಳಕಿನ ಗುಡಿ. ಒಳಗಿನ ಮೈಟೋಕಾಂಡ್ರಿಯಾ ದೀಪ ಆರದಿರಲು, ಉಪವಾಸದ ಮೌನದಲ್ಲಿ ಆಟೋಫೇಜಿ ಎಂಬ ಮನದರಸಿ ಎಚ್ಚೆತ್ತು ಕಸ ಗುಡಿಸಿ ಹೊಸ ಯೌವನಕ್ಕೆ ರಂಗೋಲಿ ಇಡುತ್ತಾಳೆ. ಸತುವು-ಸೆಲೆನಿಯಂ ಸಿಂಪಡಿಕೆ, ಒಮೆಗಾ-3 ಗೆಳೆತನ, ನವಣೆ-ಕೊರಲೆಗಳ ನೈವೇದ್ಯ ? ಇವು ಡಿಎನ್‌ಎ ಮಂತ್ರಾಕ್ಷತೆಯನ್ನು ಕಾಯ್ದು ಕಾಲನ ಹೆಜ್ಜೆ ತಡೆಯುತ್ತವೆ.

ದೇಹವನ್ನು ದೇವರೆಂದು ಕಂಡರೆ ವ್ಯಸನದ ಹೊಗೆ, ದ್ವೇಷದ ಕಿಚ್ಚು, ಒಂಟಿತನದ ಬೂದಿ ಒಳಸೇರದು. ಬೀದಿನಾಟಕದ ಚಪ್ಪಾಳೆ, ಭಜನೆಯ ತಾಳ, ರಕ್ತದಾನದ ಹನಿ, ಹಸಿದ ಬಾಯಿಗೆ ತುತ್ತು ? ಇದೆಲ್ಲ ಹೃದಯಕ್ಕೆ ಎಂಡಾರ್ಫಿನ್ ಅಭಿಷೇಕ. ಹಿರಿಯರ ಪಾದಸ್ಪರ್ಶ, ಕಂದನ ನಗು, ಅತಿಥಿ ಉಪಚಾರದಿಂದ ಎದೆಬಡಿತ ಲಯಕ್ಕೆ ಬರುತ್ತದೆ. ಈ ನಂಟೇ ರೋಗ ತಡೆಯುವ ಜೀವಂತ ಕವಚ.

**ಆರೋಗ್ಯದ ಪಂಚಮಂತ್ರ ಇಲ್ಲಿದೆ:** ಮಣ್ಣ ಮೇಲೆ ಬರಿಗಾಲು- ಭೂಸ್ಪರ್ಶ; ನಸುಕಿನ ಗಾಳಿಗೆ ಎದೆ ತೆರೆದು ಉಸಿರು ಪ್ರಾಣಸ್ಪರ್ಶ; ಸೂರ್ಯನಮಸ್ಕಾರ ಕಿರಣಸ್ನಾನ; ತೊರೆ ನೀರಿನಲ್ಲಿ ಮಿಂದು ಜಲಶುದ್ಧಿ; ನಕ್ಷತ್ರದ ಕೆಳಗೆ ಮೌನ ಆಕಾಶ ಧ್ಯಾನ. ತಟ್ಟೆಯಲ್ಲಿ ಕಾಮನಬಿಲ್ಲು ತುಂಬಿ.

ಶುಚಿ-ಸಂಯಮ-ಸೌಹಾರ್ದದ ತ್ರಿವೇಣಿಯಲ್ಲಿ ಮಿಂದಾಗ, ಈ ಕಾಯದ ಬಾಗಿಲಲ್ಲಿ ಸಾವೇ ಕೈಕಟ್ಟಿ ನಿಲ್ಲುತ್ತದೆ.ಆಯಸ್ಸು ಆಗಸ, ಬದುಕು ಹಬ್ಬ!

ಅಂಕಣ-03
ಸಾವು ಸಂಕಟಪಡುವ ಸಂಗತಿಗಳು..!



|ಡಾ.ಸುಧಾಕರ.ಜಿ.ಲಕ್ಕವಳ್ಳಿ

# ಬ್ರ್ಯಾಂಡ್ ಮೊಹರು: ಪ್ರಾಣಿಗಳ ಮೌನ ಕ್ರಂದನ ಮತ್ತು ಮಾನವನ ವೈಭೋಗ



| ರೂಪ ಮಂಜುನಾಥ ಹೊಳೆನರಸೀಪುರ

ಇಲ್ಲಿನ ಹೆಸರಾಂತ ಮಾಲ್ ಒಂದರಲ್ಲಿ ಮಹಿಳೆಯೊಬ್ಬಳು ಒಂದು ದುಬಾರಿ ಹಸಿರು ಬಣ್ಣದ ಕೈಚೀಲವನ್ನು ಹಿಡಿದಿದ್ದಳು. ಅದರ ಮೇಲೆ ಮೊಸಳೆಯ (Crocodile) ಲಾಂಛನವಿತ್ತು. ನಾನು ನನ್ನ ಸೆಸೆಗೆ,ಇದೇನು ಲೀನಾ Crocodile ಬ್ರಾಂಡಾ ಕೇಳಿರಲಿಲ್ಲ. ಎಂದೆ. ಅದಕ್ಕೆ ಆಕೆ,ಹೌದು ಆಂಟಿ. ಈ ಚೀಲಗಳನ್ನು ಮೊಸಳೆಯ ಚರ್ಮಗಳಿಂದಲೇ ಮಾಡ್ತಾರೆ. ಇದು ಹೆಸರಾಂತ ಬ್ರಾಂಡ್ ಚೀಲಗಳು. ಕಡಿಮೆ ಎಂದೂ ಮೂರು, ನಾಲ್ಕು ಲಕ್ಷಗಳೇ ಆಗುತ್ತೆ, ಅಂದಳು.ಆಗ ನಾನು,ಅಬ್ಬೋ.ಚೀಲಕ್ಕೆ ಇಷ್ಟು ದುಡ್ಡಾದ್ರೆ, ಚೀಲದೊಳಗೆ ಎಷ್ಟು ದುಡ್ಡಿಟ್ಟರಬೇಕೋ ಮಹಾತಾಯೀ, ಅಂತ ಬೆರಗಾಗಿ ಬಾಯಿ ಬಿಟ್ಟಿದ್ದೆ.

ಇಂದಿನ ನಾಗರಿಕ ಜಗತ್ತಿನಲ್ಲಿ 'ಬ್ರಾ್ಯಂಡ್' ಎಂಬುದು ಕೇವಲ ಒಂದು ಗುರುತಲ್ಲ, ಅದು ಅಂತಸ್ತಿನ ಸಂಕೇತವಾಗಿ ಮಾರ್ಪಟ್ಟಿದೆ. ದೊಡ್ಡ ದೊಡ್ಡ ಕಂಪನಿಗಳ ಲಾಂಛನಗಳು (Logos) ನಮ್ಮ ಬಟ್ಟೆ, ಬ್ಯಾಗು ಮತ್ತು ಚಪ್ಪಲಿಗಳ ಮೇಲೆ ಮಿಂಚುತ್ತಿದ್ದರೆ ನಮಗೆ ಏನೋ ಒಂದು ರೀತಿಯ ಹೆಮ್ಮೆ. ಆದರೆ, ಈ ಹೊಳೆಯುವ ಲಾಂಛನಗಳ ಹಿಂದೆ ಅಡಗಿರುವ ರಕ್ತಸಿಕ್ತ ಕಥೆಗಳನ್ನು ನಾವು ಮರೆತಿದ್ದೇವೆಯೇ ಅಥವಾ ಮಾನವತೆಯನ್ನು ಮರೆಯುತ್ತಿದ್ದೇವೆಯೇ ಪ್ರಕೃತಿಯ ಒಂದು ಭಾಗವಾಗಬೇಕಿರುವ ಮನುಷ್ಯ, ಇಂದು ಪ್ರಕೃತಿಯ ಒಡೆಯನಂತೆ ವರ್ತಿಸುತ್ತಾ ಮೂಕ ಪ್ರಾಣಿಗಳನ್ನು ತನ್ನ ಸ್ವಾರ್ಥದ ಬಲಿಪೀಠಕ್ಕೆ ಏರಿಸುತ್ತಿದ್ದಾನೆ ಅನ್ನುವುದು ಎಂಥಾ ವಿಪರ್ಯಾಸವಾದರೂ, ಅದು ಸತ್ಯವಾದ ವಿಷಯ ಅನ್ನುವುದನ್ನ ಒಪ್ಪಿಕೊಳ್ಳಲೇಬೇಕಿದೆ.

**ಬ್ರಾ್ಯಂಡ್ ವ್ಯಾಮೋಹ:** ಮನುಷ್ಯ ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳಲು ಇಂತಹ ದುಬಾರಿ ವಸ್ತುಗಳನ್ನು ಬಯಸುತ್ತಾನೆ.

ಪ್ರಾಣಿಗಳ ಸಂಕೇತ: ಲಾಂಛನದಲ್ಲಿ ಮೊಸಳೆಯನ್ನು ಬಳಸಲಾಗಿದೆ. ಆದರೆ ವಾಸ್ತವದಲ್ಲಿ, ಇಂತಹ ಅನೇಕ ಐಷಾರಾಮಿ ಉತ್ಪನ್ನಗಳನ್ನು ತಯಾರಿಸಲು ನಿಜವಾದ ಪ್ರಾಣಿಗಳ ಚರ್ಮವನ್ನೇ ಬಳಸಲಾಗುತ್ತದೆ.

ಆ ಮಹಿಳೆ ಹೆಮ್ಮೆಯಿಂದ ತನ್ನ ಜಂಭದ ಚೀಲವನ್ನು ಹೆಗಲಿಗೇರಿಸಿಕೊಂಡಿದ್ದಾಳೆ. ಆದರೆ ಆ ಬ್ಯಾಗಿನ ತಯಾರಿಕೆಯ ಹಿಂದೆ ಒಂದು ಜೀವದ ಅಂತ್ಯವಿರುತ್ತದೆ ಎಂಬ ಸತ್ಯ ಆ ಜಂಭದ ಚೀಲ ಹಿಡಿದು ಬೀಗುವ ನಗುವಿನ ಹಿಂದೆ ಮರೆಯಾಗಿದೆ.

ಪ್ರಾಣಿಗಳ ಮೇಲಿನ ದೌರ್ಜನ್ಯ ಮತ್ತು ಮಾನವನ ಸ್ವಾರ್ಥ ಇಂದು ನೆನ್ನೆಯದಲ್ಲ! ಮಾನವನು ತನ್ನ ಸುಖಕ್ಕಾಗಿ ಪ್ರಾಣಿಗಳನ್ನು ಹಲವಾರು ರೀತಿಯಲ್ಲಿ, ಹಲವಾರು ಕಾರಣಗಳನ್ನು ಕೊಡುತ್ತಾ, ಅವುಗಳನ್ನು ಸತತವಾದಗಿ ಹಿಂಸಿಸುತ್ತಿದ್ದಾನೆ.

ಚರ್ಮದ ಉದ್ಯಮ: ಹಾವು, ಮೊಸಳೆ, ಹುಲಿ ಮತ್ತು ಆನೆಗಳಂತಹ ಪ್ರಾಣಿಗಳನ್ನು ಅವುಗಳ ಚರ್ಮಕ್ಕಾಗಿ ಕ್ರೂರವಾಗಿ ಕೊಲ್ಲಲಾಗುತ್ತದೆ. ಬೆಲೆಬಾಳುವ ಪರ್ಸ್, ಬೆಲ್ಟ್ ಮತ್ತು ಜಾಕೆಟ್‌ಗಳಿಗಾಗಿ ಈ ಪ್ರಾಣಿಗಳು ತಮ್ಮ ಜೀವ ತೆರುತ್ತಿವೆ.

ಚರ್ಮದ ಉದ್ಯಮವು (Leather Industry) ಒಂದು ಪ್ರಾಚೀನ ಮತ್ತು ಸಂಕೀರ್ಣವಾದ ಜಾಗತಿಕ ಕೈಗಾರಿಕೆಯಾಗಿದೆ. ಇದು ಪ್ರಾಣಿಗಳ ಹಸಿ ಚರ್ಮವನ್ನು ಸಂಸ್ಕರಿಸಿ, ಅವುಗಳನ್ನು ಕೆಡದಂತೆ ಬಾಳಿಕೆ ಬರುವ "ಲೆದರ್" ಆಗಿ ಪರಿವರ್ತಿಸುವ ಪ್ರಕ್ರಿಯೆಯಾಗಿದೆ.

ಈ ಉದ್ಯಮದ ವಿವಿಧ ಹಂತಗಳು ಮತ್ತು ಅದರ ಪ್ರಭಾವಗಳ ಕುರಿತು ಇಲ್ಲಿದೆ ವಿವರಣೆ:

ಚರ್ಮದ ಮೂಲ (Sources):ಚರ್ಮದ ಉದ್ಯಮಕ್ಕೆ ಬೇಕಾಗುವ ಕಚ್ಚಾ ವಸ್ತುಗಳು ಪ್ರಮುಖವಾಗಿ ಈ ಕೆಳಗಿನವುಗಳಿಂದ ಬರುತ್ತವೆ:

**ಸಾಕು ಪ್ರಾಣಿಗಳು:** ಹಸು, ಎಮ್ಮೆ, ಆಡು ಮತ್ತು ಕುರಿಗಳು ಈ ಉದ್ಯಮದ ಬೆನ್ನೆಲುಬು.

ವಿಲಾಸಿ ಚರ್ಮ (Exotic Leather): ಮೊಸಳೆ, ಹಾವು, ಆಮೆ ಮತ್ತು ಕೆಲವು ಅಪರೂಪದ ಮೀನುಗಳ ಚರ್ಮವನ್ನು ಐಷಾರಾಮಿ ಉತ್ಪನ್ನಗಳಿಗಾಗಿ ಬಳಸಲಾಗುತ್ತದೆ.

ಸಂಸ್ಕರಣಾ ಹಂತಗಳು (The Tanning Process)

ಹಸಿ ಚರ್ಮವು ಪ್ರತ್ಯೇಕಿಸಿದ ನಂತರ ಬೇಗನೆ ಕೊಳೆಯುತ್ತದೆ. ಅದನ್ನು ಗಟ್ಟಿಯಾಗಿಸಲು 'ಟ್ಯಾನಿಂಗ್' (Tanning) ಪ್ರಕ್ರಿಯೆಗೆ ಒಳಪಡಿಸಲಾಗುತ್ತದೆ:

**ಶುಚಿಗೊಳಿಸುವಿಕೆ:** ಚರ್ಮದ ಮೇಲಿರುವ ಕೂದಲು, ಮಾಂಸದ ಅಂಶ ಮತ್ತು ಕೊಳೆಯನ್ನು ತೆಗೆಯಲಾಗುತ್ತದೆ.

**ಟ್ಯಾನಿಂಗ್:** ಇಲ್ಲಿ ಪ್ರಾಣಿಯ ಚರ್ಮವನ್ನು ರಾಸಾಯನಿಕಗಳ (ಹೆಚ್ಚಾಗಿ ಕ್ರೋಮಿಯಂ) ಅಥವಾ ಸಸ್ಯಜನ್ಯ ದ್ರವಗಳಲ್ಲಿ ನೆನೆಸಲಾಗುತ್ತದೆ. ಇದು ಚರ್ಮವನ್ನು ಮೆತ್ತಗೆ ಮಾಡುವುದಲ್ಲದೆ ಕೊಳೆಯದಂತೆ ತಡೆಯುತ್ತದೆ.

**ಫಿನಿಶಿಂಗ್:** ಚರ್ಮಕ್ಕೆ ಬೇಕಾದ ಬಣ್ಣ ಮತ್ತು ಹೊಳಪನ್ನು ನೀಡಿ ಅಂತಿಮವಾಗಿ ವಸ್ತುಗಳ ತಯಾರಿಕೆಗೆ ಸಿದ್ಧಪಡಿಸಲಾಗುತ್ತದೆ.

**ಸಿದ್ಧಪಡಿಸುವ ಉತ್ಪನ್ನಗಳು**

ಚರ್ಮದ ಉದ್ಯಮವು ನಮಗೆ ಅನೇಕ ದೈನಂದಿನ ವಸ್ತುಗಳನ್ನು ನೀಡುತ್ತದೆ:

**ಪಾದರಕ್ಷೆಗಳು:** ಶೂ ಮತ್ತು ಸ್ಯಾಂಡಲ್‌ಗಳು.

**ಬಟ್ಟೆಗಳು:** ಜಾಕೆಟ್‌ಗಳು ಮತ್ತು ಗ್ಲೌಸ್‌ಗಳು.

ಪರಿಕರಗಳು (Accessories):ಕೈಚೀಲಗಳು (Handbags), ಪರ್ಸ್ ಮತ್ತು ಬೆಲ್ಟ್‌ಗಳು.

**ಗೃಹಾಲಂಕಾರ:** ಸೋಫಾ ಸೆಟ್‌ಗಳು ಮತ್ತು ಆಟೋಮೊಬೈಲ್ ಸೀಟ್ ಕವರ್‌ಗಳು. ಪರಿಸರ ಮತ್ತು ಸಾಮಾಜಿಕ ಸವಾಲುಗಳು



ಈ ಉದ್ಯಮವು ಆರ್ಥಿಕವಾಗಿ ಲಾಭದಾಯಕವಾಗಿದ್ದರೂ, ಕೆಲವು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದೆ:

ಮಾಲಿನ್ಯ: ಟ್ಯಾನಿಂಗ್ ವೇಳೆ ಬಳಸುವ ರಾಸಾಯನಿಕಗಳು ***(Chromium)*** ನದಿ ಮತ್ತು ಹಳ್ಳಗಳಿಗೆ ಸೇರಿ ನೀರನ್ನು ತೀವ್ರವಾಗಿ ಕಲುಷಿತಗೊಳಿಸುತ್ತವೆ.

ಪ್ರಾಣಿ ದಯೆ: ಈ ಉದ್ಯಮವು ಪ್ರಾಣಿಗಳ ಹತ್ಯೆಯನ್ನು ಅವಲಂಬಿಸಿರುವುದರಿಂದ, ಪ್ರಾಣಿ ಹಕ್ಕುಗಳ ಹೋರಾಟಗಾರರು ಇದನ್ನು ವಿರೋಧಿಸುತ್ತಾರೆ.

ಆರೋಗ್ಯ ಸಮಸ್ಯೆ: ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಚರ್ಮದ ಕಾಯಿಲೆಗಳು ಮತ್ತು ಉಸಿರಾಟದ ತೊಂದರೆಗಳು ಕಾಡುವ ಸಾಧ್ಯತೆ ಹೆಚ್ಚಿರುತ್ತದೆ.

ಪರ್ಯಾಯ ಮಾರ್ಗಗಳು ***(Alternatives)***

ಇಂದು ವಿಜ್ಞಾನ ಬೆಳೆದಂತೆ ಪರಿಸರ ಸ್ನೇಹಿ ಪರ್ಯಾಯಗಳು ಚಾಲ್ತಿಗೆ ಬರುತ್ತಿವೆ:

ಸಸ್ಯಾಹಾರಿ ಚರ್ಮ ***(Vegan Leather):*** ಅನಾನಸ್ ಎಲೆಗಳು, ಮಶ್ರೂಮ್ (ಅಣಬೆ) ಅಥವಾ ಕೃತಕ ರಬ್ಬರ್ ಬಳಸಿ ಚರ್ಮದಂತಹ ವಸ್ತುವನ್ನು ತಯಾರಿಸಲಾಗುತ್ತದೆ.

ಕೃತಕ ಚರ್ಮ ***(Synthetic Leather):*** ಪ್ಲಾಸ್ಟಿಕ್ ಆಧಾರಿತ ***(PU*** ಅಥವಾ ***PVC)*** ವಸ್ತುಗಳು.

ಚರ್ಮದ ಉದ್ಯಮವು ಲಕ್ಷಾಂತರ ಜನರಿಗೆ ಉದ್ಯೋಗ ನೀಡಿದ್ದರೂ, ಅದರ ಹಿಂದಿರುವ ಕ್ರೌರ್ಯ ಮತ್ತು ಮಾಲಿನ್ಯದ ಬಗ್ಗೆ ಜಗತ್ತು ಇಂದು ಪರ್ಯಾಯಗಳನ್ನು ಹುಡುಕುತ್ತಿದೆ. ನಾವು ಕೊಳ್ಳುವ ಪ್ರತಿ ಚರ್ಮದ ವಸ್ತುವಿನ ಹಿಂದೆ ಒಂದು ಜೀವ ಮತ್ತು ಪರಿಸರದ ಮೇಲೆ ಉಂಟಾದ ಪರಿಣಾಮವಿರುತ್ತದೆ ಎಂಬ ಅರಿವು ನಮಗಿರಲಿ.

ಸೌಂದರ್ಯವರ್ಧಕಗಳ ಪ್ರಯೋಗ ***(Testing)***: ನಾವು ಬಳಸುವ ಲಿಪ್‌ಸ್ಟಿಕ್, ಶಾಂಪೂ ಮತ್ತು ಕ್ರೀಮ್‌ಗಳನ್ನು ಮೊದಲು ಮೊಲ ಅಥವಾ ಇಲಿಗಳ ಕಣ್ಣು ಮತ್ತು ಚರ್ಮದ ಮೇಲೆ ಪ್ರಯೋಗಿಸಲಾಗುತ್ತದೆ. ಇದು ಆ ಪ್ರಾಣಿಗಳಿಗೆ ಅಸಹನೀಯ ನೋವನ್ನು ಉಂಟುಮಾಡುತ್ತದೆ.ಸೌಂದರ್ಯವರ್ಧಕಗಳ ತಯಾರಿಕೆಯಲ್ಲಿ ಪ್ರಾಣಿಗಳ ಮೇಲೆ ನಡೆಸುವ ಪ್ರಯೋಗಗಳು ಅತ್ಯಂತ ನೋವಿನಿಂದ ಕೂಡಿದ ಪ್ರಕ್ರಿಯೆಗಳಾಗಿವೆ. ನಾವು ಬಳಸುವ ಸೌಂದರ್ಯವರ್ಧಕಗಳು ***(Cosmetics)*** ಮಾನವನ ಚರ್ಮಕ್ಕೆ ಸುರಕ್ಷಿತವೇ ಎಂದು ಪರೀಕ್ಷಿಸಲು ಮೂಕ ಪ್ರಾಣಿಗಳನ್ನು ಬಲಿಪಶುಗಳನ್ನಾಗಿ ಮಾಡಲಾಗುತ್ತದೆ.

ಇದರ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲಿದೆ:

ಈ ಪ್ರಕ್ರಿಯೆಯಲ್ಲಿ ಪ್ರಯೋಗಕ್ಕೊಳಗಾಗುವ ಪ್ರಾಣಿಗಳು ಮುಖ್ಯವಾಗಿ ಮೊಲಗಳು, ಇಲಿಗಳು, ಹೆಗ್ಗಣಗಳು ಮತ್ತು ಗಿನಿ ಹಂದಿಗಳನ್ನು ಬಳಸಲಾಗುತ್ತದೆ. ಇವುಗಳ ದೇಹ ರಚನೆಯು ಕೆಲವು ಸೌಮ್ಯ ಪ್ರತಿಕ್ರಿಯೆಗಳನ್ನು ತೋರಿಸುವುದರಿಂದ ವಿಜ್ಞಾನಿಗಳು ಇವುಗಳನ್ನು ಆಯ್ದುಕೊಳ್ಳುತ್ತಾರೆ.

2. ನಡೆಸಲಾಗುವ ವಿವಿಧ ಪರೀಕ್ಷೆಗಳು

ಕಣ್ಣಿನ ಕಿರಿಕಿರಿ ಪರೀಕ್ಷೆ ***(Draize Test):*** ಶಾಂಪೂ ಅಥವಾ ಮಸ್ಕರಾದಂತಹ ದ್ರವಗಳನ್ನು ಮೊಲಗಳ ಕಣ್ಣುಗಳಿಗೆ ಹಾಕಲಾಗುತ್ತದೆ. ಇದರಿಂದ ಅವುಗಳ ಕಣ್ಣುಗಳಲ್ಲಿ ಉರಿ, ರಕ್ತಸ್ರಾವ ಅಥವಾ ಕುರುಡುತನ ಉಂಟಾಗುತ್ತದೆಯೇ ಎಂದು ಗಮನಿಸಲಾಗುತ್ತದೆ. ಈ ವೇಳೆ ಪ್ರಾಣಿಗಳು ಕಣ್ಣು ಮುಚ್ಚದಂತೆ ಅವುಗಳ ಕಣ್ಣನ್ನು ಬಲವಂತವಾಗಿ ಬಿಡಿಸಿ, ಹಿಂಸಿಸಿ ಪ್ರಯೋಗ ಮಾಡಲಾಗುತ್ತದೆ.

ಚರ್ಮದ ಅಲರ್ಜಿ ಪರೀಕ್ಷೆ: ಪ್ರಾಣಿಗಳ ಮೈಮೇಲಿನ ಕೂದಲನ್ನು ಬೋಳಿಸಿ, ಅಲ್ಲಿ ರಾಸಾಯನಿಕಗಳನ್ನು ಹಚ್ಚಲಾಗುತ್ತದೆ. ಇದು ಚರ್ಮದ ಮೇಲೆ ಕೆಂಪು ಕಲೆಗಳು ಅಥವಾ ಹುಣ್ಣುಗಳನ್ನು ಉಂಟುಮಾಡುತ್ತದೆಯೇ ಎಂದು ಪರೀಕ್ಷಿಸಲಾಗುತ್ತದೆ.

ವಿಷತ್ವ ಪರೀಕ್ಷೆ ***(Toxicity Test)***: ಹೊಸ ರಾಸಾಯನಿಕಗಳನ್ನು ಪ್ರಾಣಿಗಳಿಗೆ ಬಲವಂತವಾಗಿ ತಿನ್ನಿಸಲಾಗುತ್ತದೆ ಅಥವಾ ಉಸಿರಾಟದ ಮೂಲಕ ಅವುಗಳ ಶ್ವಾಸಕೋಶಕ್ಕೆ ಕಳುಹಿಸಲಾಗುತ್ತದೆ. ಇದರಿಂದ ಆಂತರಿಕ ಅಂಗಗಳ ಮೇಲೆ ಆಗುವ ದುಷ್ಪರಿಣಾಮಗಳನ್ನು ಅಭ್ಯಸಿಸಲಾಗುತ್ತದೆ.

ಫಲಿತಾಂಶ ಮತ್ತು ಪ್ರಾಣಿಗಳ ಅಂತ್ಯ

ಹೆಚ್ಚಿನ ಸಂದರ್ಭಗಳಲ್ಲಿ, ಪರೀಕ್ಷೆಗಳು ಮುಗಿದ ನಂತರ ಆ ಪ್ರಾಣಿಗಳನ್ನು ಕೊಲ್ಲಲಾಗುತ್ತದೆ. ಏಕೆಂದರೆ ಅಷ್ಟು ನೋವು ಮತ್ತು ರಾಸಾಯನಿಕಗಳ ಪ್ರಭಾವಕ್ಕೆ ಒಳಗಾದ ಪ್ರಾಣಿಗಳು ಮತ್ತೆ ಸಹಜ ಸ್ಥಿತಿಗೆ ಮರಳಲು ಸಾಧ್ಯವಿರುವುದಿಲ್ಲ.

ಈ ಕ್ರೌರ್ಯಕ್ಕೆ ಪರ್ಯಾಯವೇನು

ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನ ಬೆಳೆದಿದ್ದು, ಪ್ರಾಣಿಗಳ ಅಗತ್ಯವಿಲ್ಲದೆಯೇ ಸುರಕ್ಷತೆಯನ್ನು ಪರೀಕ್ಷಿಸಬಹುದು:

**ಕೃತಕ ಚರ್ಮದ ಕೋಶಗಳು:** ಪ್ರಯೋಗಾಲಯದಲ್ಲಿ ತಯಾರಿಸಿದ ಮಾನವ ಚರ್ಮದ ಕೋಶಗಳ ಮೇಲೆ ಪರೀಕ್ಷೆ ನಡೆಸುವುದು.

**ಕಂಪ್ಯೂಟರ್ ಮಾದರಿಗಳು:** ಅತ್ಯಾಧುನಿಕ ಸಾಫ್ಟ್‌ವೇರ್‌ಗಳ ಮೂಲಕ ರಾಸಾಯನಿಕಗಳ ಪರಿಣಾಮವನ್ನು ಊಹಿಸುವುದು.

ಒಬ್ಬ ಜವಾಬ್ದಾರಿಯುತ ಗ್ರಾಹಕರಾಗಿ, ನಾವು ***"Cruelty-Free"*** (ಕ್ರೌರ್ಯಮುಕ್ತ) ಅಥವಾ ಮೊಲದ ಚಿತ್ರವಿರುವ ***(Leaping Bunny logo)*** ಉತ್ಪನ್ನಗಳನ್ನು ಆರಿಸಿಕೊಳ್ಳುವ ಮೂಲಕ ಈ ಹಿಂಸೆಯನ್ನು ತಡೆಯಲು ಸಹಕರಿಸಬಹುದು.

ನಮ್ಮ ಬಾಹ್ಯ ಸೌಂದರ್ಯಕ್ಕಾಗಿ ಮತ್ತೊಂದು ಜೀವಿಯ ಅಸಹನೀಯ ನೋವು ಕಾರಣವಾಗುವುದು ಎಷ್ಟು ಸರಿ ಇದು ಪ್ರತಿಯೊಬ್ಬರೂ ಯೋಚಿಸಬೇಕಾದ ವಿಷಯ.

**ಮನರಂಜನೆಯ ನೆಪ:** ಸರ್ಕಸ್‌ಗಳಲ್ಲಿ, ಪ್ರವಾಸೋದ್ಯಮದಲ್ಲಿ ಆನೆ ಮತ್ತು ಕುದುರೆಗಳನ್ನು ಅವುಗಳ ಶಕ್ತಿಯ ಮೀರಿ ದುಡಿಸಿಕೊಳ್ಳಲಾಗುತ್ತದೆ. ಮಾಲೀಕನ ಅಂಕುಶದ ಏಟಿಗೆ ಹೆದರಿ ಅವು ಮೌನವಾಗಿ ಅಳುತ್ತಿವೆ. ಮನರಂಜನೆಯ ಹೆಸರಿನಲ್ಲಿ ಪ್ರಾಣಿಗಳನ್ನು ಬಳಸಿಕೊಳ್ಳುವುದು ಅತ್ಯಂತ ಪುರಾತನ ಕಾಲದಿಂದಲೂ ನಡೆದುಬಂದಿದೆ. ಆದರೆ, ಈ 'ಮನರಂಜನೆ'ಯ ಹಿಂದೆ ಇರುವ ಕರಾಳ ಸತ್ಯವೇನೆಂದರೆ, ಮನುಷ್ಯನ ಕೆಲವೇ ನಿಮಿಷಗಳ ಸಂತೋಷಕ್ಕಾಗಿ ಪ್ರಾಣಿಗಳು ತಮ್ಮ ಇಡೀ ಜೀವನವನ್ನೇ ಪಂಜರದಲ್ಲಿ ಅಥವಾ ಸರಪಳಿಯ ಬಂಧನದಲ್ಲಿ ಕಳೆಯಬೇಕಾಗುತ್ತದೆ.

**ಸರ್ಕಸ್‌ಗಳಲ್ಲಿ ಪ್ರಾಣಿಗಳ ಬಳಕೆ:** ಸರ್ಕಸ್ ಅಂದಾಕ್ಷಣ ನಮಗೆ ನೆನಪಾಗುವುದು ಹುಲಿಯ ಜಿಗಿತ, ಆನೆಗಳ ಆಟ ಅಥವಾ ಮಂಗಗಳ ಕುಣಿತ. ಆದರೆ ಇವುಗಳನ್ನು ತರಬೇತಿಗೊಳಿಸುವ ರೀತಿ ಅತ್ಯಂತ ಭಯಾನಕ:

**ಹಸಿವು ಮತ್ತು ಭಯ:** ಪ್ರಾಣಿಗಳು ನಮಸ್ಕಾರ ಮಾಡುವುದನ್ನು ಅಥವಾ ಸೈಕಲ್ ತುಳಿಯುವುದನ್ನು ಕಲಿಯುವುದು ಪ್ರೀತಿಯಿಂದಲ್ಲ, ಬದಲಿಗೆ ಹಸಿವು ಮತ್ತು ಹೊಡೆತದ ಭಯದಿಂದ.

ಅಂಕುಶದ ಬಳಕೆ: ಆನೆಗಳನ್ನು ನಿಯಂತ್ರಿಸಲು 'ಅಂಕುಶ' ಎಂಬ ಚೂಪಾದ ಕಬ್ಬಿಣದ ಸಾಧನವನ್ನು ಬಳಸಲಾಗುತ್ತದೆ, ಇದು ಅವುಗಳ ಮೃದುವಾದ ಚರ್ಮಕ್ಕೆ ತೀವ್ರ ನೋವುಂಟು ಮಾಡುತ್ತದೆ.

ಪ್ರವಾಸೋದ್ಯಮ ಮತ್ತು ಸವಾರಿ ***(Rides)***

ಪ್ರವಾಸಿ ತಾಣಗಳಲ್ಲಿ ಆನೆ ಸವಾರಿ, ಒಂಟೆ ಸವಾರಿ ಅಥವಾ ಕುದುರೆ ಸವಾರಿ ಬಹಳ ಜನಪ್ರಿಯ.

**ವಿಶ್ರಾಂತಿ ರಹಿತ ದುಡಿಮೆ:** ಪ್ರವಾಸಿಗರು ಹೆಚ್ಚಿದ್ದಾಗ ಈ ಪ್ರಾಣಿಗಳಿಗೆ ಸರಿಯಾದ ಆಹಾರ ಅಥವಾ ನೀರು ನೀಡದೆ ಗಂಟೆಗಟ್ಟಲೆ ಬಿಸಿಲಿನಲ್ಲಿ ನಡೆಸಲಾಗುತ್ತದೆ.

**ಭಾರವಾದ ಹೊರೆ:** ಪ್ರಾಣಿಗಳ ಬೆನ್ನಿನ ಮೇಲೆ ಭಾರವಾದ ಹೌದ ಅಥವಾ ಸೀಟುಗಳನ್ನು ಕಟ್ಟಿರುವುದರಿಂದ ಅವುಗಳ ಬೆನ್ನುಮೂಳೆಗೆ ಹಾನಿಯಾಗುತ್ತದೆ.

ಪ್ರಾಣಿಗಳ ಪ್ರದರ್ಶನ ಮತ್ತು ಫೋಟೋಶೂಟ್

ಇತ್ತೀಚಿನ ದಿನಗಳಲ್ಲಿ ಹುಲಿ ಮರಿಗಳ ಜೊತೆ ಫೋಟೋ ತೆಗೆಸಿಕೊಳ್ಳುವುದು ಅಥವಾ ಅವುಗಳ ಜೊತೆ ಆಟವಾಡುವುದು ಒಂದು ಕ್ರೇಜ್ ಆಗಿದೆ.

ಮಕ್ಕಳಿಂದ ಬೇರ್ಪಡಿಸುವಿಕೆ: ಕೇವಲ ಪ್ರವಾಸಿಗರ ಆಕರ್ಷಣೆಗಾಗಿ ಹುಲಿ ಮರಿಗಳನ್ನು ಅವುಗಳ ತಾಯಿಯಿಂದ ಚಿಕ್ಕ ವಯಸ್ಸಿನಲ್ಲೇ ಬೇರ್ಪಡಿಸಲಾಗುತ್ತದೆ.

**ಮದ್ದು ನೀಡುವುದು:** ಪ್ರಾಣಿಗಳು ಪ್ರವಾಸಿಗರ ಮೇಲೆ ದಾಳಿ ಮಾಡದಂತೆ ತಡೆಯಲು ಅವುಗಳಿಗೆ ನಿದ್ರೆ ಬರುವಂತೆ ಮಾಡುವ ಅಥವಾ ಶಾಂತವಾಗಿರುವಂತೆ ಮಾಡುವ ಮದ್ದುಗಳನ್ನು ***(Sedatives)*** ನೀಡಲಾಗುತ್ತದೆ.

ಕ್ರೀಡೆ ಮತ್ತು ಪಂದ್ಯಗಳು

ಕೋಳಿ ಅಂಕ, ಕುರಿ ಕಾಳಗ ಅಥವಾ ಎತ್ತುಗಳ ಓಟದಂತಹ ಕ್ರೀಡೆಗಳಲ್ಲಿ ಪ್ರಾಣಿಗಳನ್ನು ಬಳಸಲಾಗುತ್ತದೆ.

ಗಾಯ ಮತ್ತು ಸಾವು: ಈ ಪಂದ್ಯಗಳಲ್ಲಿ ಪ್ರಾಣಿಗಳು ಪರಸ್ಪರ ಹೊಡೆದಾಡಿ ತೀವ್ರವಾಗಿ ಗಾಯಗೊಳ್ಳುತ್ತವೆ, ಕೆಲವೊಮ್ಮೆ ಪ್ರಾಣವನ್ನೂ ಕಳೆದುಕೊಳ್ಳುತ್ತವೆ.

ಪ್ರಾಣಿಸಂಗ್ರಹಾಲಯಗಳು ***(Zoos)***

ಶಿಕ್ಷಣದ ನೆಪದಲ್ಲಿ ಪ್ರಾಣಿಗಳನ್ನು ಸಣ್ಣ ಪಂಜರಗಳಲ್ಲಿ ಕೂಡಿಹಾಕಲಾಗುತ್ತದೆ.

ಮಾನಸಿಕ ಒತ್ತಡ: ನೂರಾರು ಕಿಲೋಮೀಟರ್ ಓಡಾಡುವ ಪ್ರಕೃತಿ ದತ್ತ ಗುಣವಿರುವ ಪ್ರಾಣಿಗಳು, ನಾಲ್ಕು ಗೋಡೆಗಳ ಮಧ್ಯೆ ಬಂಧಿಯಾದಾಗ ಮಾನಸಿಕ ಖಿನ್ನತೆಗೆ ಒಳಗಾಗುತ್ತವೆ. ಇದನ್ನು 'ಜೂಚೋಸಿಸ್' ***(Zoochosis)*** ಎಂದು ಕರೆಯುತ್ತಾರೆ.

ನಾವು ಮಾಡಬಹುದಾದ ಬದಲಾವಣೆ:

ಪ್ರಾಣಿಗಳನ್ನು ಬಳಸುವ ಸರ್ಕಸ್‌ಗಳಿಗೆ ಹೋಗುವುದನ್ನು ನಿಲ್ಲಿಸುವುದು. ಪ್ರಾಣಿ ಸವಾರಿಗಳಿಗಿಂತ ಸಫಾರಿಗಳ (ಜಂಗಲ್ ಸಫಾರಿ) ಮೂಲಕ ಅವುಗಳನ್ನು ಅವುಗಳ ನೈಸರ್ಗಿಕ ಪರಿಸರದಲ್ಲಿ ನೋಡುವುದನ್ನು ರೂಢಿಸಿಕೊಳ್ಳುವುದು. ಪ್ರಾಣಿಗಳನ್ನು ಫೋಟೋ ತೆಗೆಸಿಕೊಳ್ಳುವ ವಸ್ತುವಾಗಿ ನೋಡದೆ, ಜೀವಿಯಾಗಿ ನೋಡುವುದು.

ನೀತಿ: ಪ್ರಾಣಿಗಳು ನಮಗಾಗಿ ಸೃಷ್ಟಿಯಾದ ಆಟದ ಸಾಮಾನುಗಳಲ್ಲ, ಅವುಗಳು ಕೂಡ ಈ ಭೂಮಿಯ ಸಮಾನ ಪಾಲುದಾರರು. ಅವುಗಳ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಹಕ್ಕು ನಮಗಿಲ್ಲ.

ಆಹಾರಕ್ಕಾಗಿ ಕ್ರೌರ್ಯ: ಕೇವಲ ನಾಲಿಗೆಯ ರುಚಿಗಾಗಿ ಲಕ್ಷಾಂತರ ಪ್ರಾಣಿಗಳನ್ನು ಅತ್ಯಂತ ಅಮಾನವೀಯ ಪರಿಸ್ಥಿತಿಯಲ್ಲಿ ಸಾಕಲಾಗುತ್ತದೆ ಮತ್ತು ಕೊಲ್ಲಲಾಗುತ್ತದೆ.ಆಹಾರಕ್ಕಾಗಿ ಪ್ರಾಣಿಗಳನ್ನು ಬಳಸುವ ಪ್ರಕ್ರಿಯೆಯು ಇಂದು ಕೇವಲ ಹಸಿವನ್ನು ನೀಗಿಸುವ ಮಾರ್ಗವಾಗಿ ಉಳಿದಿಲ್ಲ; ಅದು ಒಂದು ಬೃಹತ್ ಕಾರ್ಖಾನೆಯ ಮಾದರಿಯ ಉದ್ಯಮವಾಗಿ ***(Factory Farming)*** ಮಾರ್ಪಟ್ಟಿದೆ. ಈ ಹಂತದಲ್ಲಿ ಪ್ರಾಣಿಗಳು ಅನುಭವಿಸುವ ಕಷ್ಟಗಳು ವರ್ಣನಾತೀತ.

ಇದರ ಕರಾಳ ಮುಖಗಳನ್ನು ಈ ಕೆಳಗಿನಂತೆ ವಿವರಿಸಬಹುದು:

ಇಕ್ಕಟ್ಟಾದ ಜಾಗ ಮತ್ತು ಬಂಧನ

**ಫ್ಯಾಕ್ಟರಿ ಫಾರ್ಮಿಂಗ್:** ಮಾಂಸ ಮತ್ತು ಮೊಟ್ಟೆಯ ಉತ್ಪಾದನೆಗಾಗಿ ಸಾವಿರಾರು ಕೋಳಿಗಳನ್ನು ಅಥವಾ ಹಂದಿಗಳನ್ನು ಸಣ್ಣ ಕೊಠಡಿಗಳಲ್ಲಿ ಕೂಡಿಹಾಕಲಾಗುತ್ತದೆ. ಅವುಗಳಿಗೆ ತಿರುಗಾಡಲು ಅಥವಾ ರೆಕ್ಕೆ ಬಿಚ್ಚಲು ಕನಿಷ್ಠ ಜಾಗವೂ ಇರುವುದಿಲ್ಲ.

**ಬೆಳಕಿನ ನಿಯಂತ್ರಣ:** ಕೋಳಿಗಳು ಹೆಚ್ಚು ಮೊಟ್ಟೆ ಇಡಲಿ ಎಂಬ ಕಾರಣಕ್ಕೆ ಕೃತಕ ಬೆಳಕನ್ನು ಬಳಸಿ ಅವುಗಳ ನೈಸರ್ಗಿಕ ನಿದ್ರೆಯ ಕ್ರಮವನ್ನು ತಪ್ಪಿಸಲಾಗುತ್ತದೆ.

ಹಾರ್ಮೋನ್ ಮತ್ತು ಆಂಟಿಬಯೋಟಿಕ್ಸ್ ಬಳಕೆ

**ವೇಗವಾಗಿ ಬೆಳೆಯಲು ಚುಚ್ಚುಮದ್ದು:** ಪ್ರಾಣಿಗಳು ನೈಸರ್ಗಿಕವಾಗಿ ಬೆಳೆಯುವ ಸಮಯಕ್ಕಿಂತ ಮುಂಚಿತವಾಗಿಯೇ ದೊಡ್ಡದಾಗಲು ಅವುಗಳಿಗೆ ಹಾರ್ಮೋನ್ ಚುಚ್ಚುಮದ್ದುಗಳನ್ನು ನೀಡಲಾಗುತ್ತದೆ. ಇದರಿಂದ ಅವುಗಳ ದೇಹದ ತೂಕ ಹೆಚ್ಚಾಗಿ, ಕಾಲುಗಳು ಆ ಭಾರವನ್ನು ತಡೆಯಲಾರದೆ ಮುರಿದುಹೋಗುವ ಸಂದರ್ಭಗಳೂ ಇವೆ.ಈ ಪ್ರಾಣಿಗಳನ್ನು ನಾವು ಆಹಾರವಾಗಿ ಸೇವಿಸಿದಾಗ ಇಂಥ ಹಾರ್ಮನುಗಳು ನಮ್ಮ ದೇಹದೊಳಗೂ ನುಸುಳಿ ಸಲ್ಲದ ರೋಗಗಳಿಗೆ ಎಡೆಮಾಡಿಕೊಡುವ ಸಾಧ್ಯತೆಗಳಿವೆ.

**ರೋಗ ನಿರೋಧಕಗಳ ಅತಿಯಾದ ಬಳಕೆ:** ಕೊಳಕು ಮತ್ತು ಇಕ್ಕಟ್ಟಾದ ಜಾಗದಲ್ಲಿ ರೋಗ ಹರಡದಂತೆ ತಡೆಯಲು ಅವುಗಳಿಗೆ ನಿರಂತರವಾಗಿ ಆಂಟಿಬಯೋಟಿಕ್ಸ್‌ಗಳನ್ನು ನೀಡಲಾಗುತ್ತದೆ, ಇದು ಅಂತಿಮವಾಗಿ ಮನುಷ್ಯನ ಆರೋಗ್ಯದ ಮೇಲೂ ಕೆಟ್ಟ ಪರಿಣಾಮ ಬೀರುತ್ತದೆ.

ಸಾಗಣೆಯ ವೇಳೆ ಹಿಂಸೆ:ಪ್ರಾಣಿಗಳನ್ನು ಕಸಾಯಿಖಾನೆಗೆ ಸಾಗಿಸುವಾಗ ವಾಹನಗಳಲ್ಲಿ ಒಂದರ ಮೇಲೊಂದರಂತೆ ತುಂಬಿಸಲಾಗುತ್ತದೆ.ಹಲವು ದಿನಗಳ ಪ್ರಯಾಣದ ಸಮಯದಲ್ಲಿ ಅವುಗಳಿಗೆ ಸರಿಯಾದ ಆಹಾರ ಅಥವಾ ನೀರು ಸಿಗುವುದಿಲ್ಲ. ಬಿಸಿಲು, ಮಳೆ ಮತ್ತು ಚಳಿಯಲ್ಲಿ ನರಳುತ್ತಲೇ ಅವು ಸಾವಿನ ಮನೆಗೆ ತಲುಪುತ್ತವೆ.

ಅಮಾನವೀಯ ಹತ್ಯೆ ವಿಧಾನಗಳು:ಅನೇಕ ಕಡೆಗಳಲ್ಲಿ ಪ್ರಾಣಿಗಳಿಗೆ ಪ್ರಜ್ಞೆ ತಪ್ಪಿಸದೆಯೇ ***(Stunning*** ಮಾಡದೆ) ಅತ್ಯಂತ ಕ್ರೂರವಾಗಿ ಕುತ್ತಿಗೆ ಸೀಳಿ ಕೊಲ್ಲಲಾಗುತ್ತದೆ. ಒಂದು ಪ್ರಾಣಿಯ ಎದುರಿಗೇ ಮತ್ತೊಂದು ಪ್ರಾಣಿಯನ್ನು ಕೊಲ್ಲುವ ಮೂಲಕ ಅವುಗಳಲ್ಲಿ ತೀವ್ರ ಭಯ ಮತ್ತು ಮಾನಸಿಕ ಯಾತನೆಯನ್ನು ಉಂಟುಮಾಡಲಾಗುತ್ತದೆ.

ಹೈನುಗಾರಿಕೆಯಲ್ಲಿನ ಶೋಷಣೆ ***(Dairy Industry):*** ಹಾಲು ಪಡೆಯುವ ಉದ್ದೇಶದಿಂದ ಹಸುಗಳನ್ನು ನಿರಂತರವಾಗಿ ಗರ್ಭಧರಿಸುವಂತೆ ಮಾಡಲಾಗುತ್ತದೆ. ಕರು ಹುಟ್ಟಿದ ಕೆಲವೇ ಗಂಟೆಗಳಲ್ಲಿ ಅದನ್ನು ತಾಯಿಯಿಂದ ಬೇರ್ಪಡಿಸಲಾಗುತ್ತದೆ, ಇದರಿಂದ ತಾಯಿ ಮತ್ತು ಎಳೆಗರು ಇಬ್ಬರೂ ಮಾನಸಿಕವಾಗಿ ನರಳುತ್ತಾರೆ. ಗಂಡು ಕರುಗಳನ್ನು ಹಾಲಿನ ಉದ್ಯಮಕ್ಕೆ ಬೇಡವೆಂದು ಮಾಂಸಕ್ಕಾಗಿ ಮಾರಾಟ ಮಾಡಲಾಗುತ್ತದೆ.

ಇಲ್ಲಿ ನಾವು ಯೋಚಿಸಬೇಕಾದ ಅಂಶವೇನೆಂದರೆ,ನಾವು ತಿನ್ನುವ ಆಹಾರವು ಕೇವಲ ರುಚಿಗಾಗಿ ಇರಬೇಕೇ ಅಥವಾ ಅದರಲ್ಲಿ ಕರುಣೆಯೂ ಇರಬೇಕೇಸಾಧ್ಯವಾದಷ್ಟು ಸಸ್ಯಾಹಾರಕ್ಕೆ ಒತ್ತು ನೀಡುವುದು ಪ್ರಾಣಿ ಹಿಂಸೆಯನ್ನು ತಡೆಯಲು ಇರುವ ನೇರ ಮಾರ್ಗ.ಒಂದು ವೇಳೆ ಮಾಂಸಾಹಾರ ಸೇವಿಸಿದರೂ, ಅದು ಎಲ್ಲಿಂದ ಬರುತ್ತದೆ ಮತ್ತು ಆ ಪ್ರಾಣಿಗಳನ್ನು ಹೇಗೆ ನಡೆಸಿಕೊಳ್ಳಲಾಗುತ್ತದೆ ಎಂಬ ಅರಿವು ನಮಗಿರಬೇಕಾದ್ದು ಧರ್ಮ ಎಂಬುದು ನನ್ನ ಭಾವನೆ.

ನಮ್ಮ ತಟ್ಟೆಯಲ್ಲಿರುವ ಆಹಾರದ ಹಿಂದೆ ಒಂದು ಜೀವದ ಮೌನ ಅಳು ಇರಬಾರದು. "ಬದುಕಿ ಮತ್ತು ಬದುಕಲು ಬಿಡಿ" ಎಂಬ ತತ್ವವೇ ಜಗತ್ತಿನ ಶ್ರೇಷ್ಠ ನೀತಿ ಅಲ್ಲವೇ

"ಜೀವಿಸುವ ಹಕ್ಕು ಕೇವಲ ಮನುಷ್ಯನಿಗಷ್ಟೇ ಅಲ್ಲ, ಈ ಭೂಮಿಯ ಮೇಲಿರುವ ಪ್ರತಿಯೊಂದು ಜೀವಿಯೂ ಸುಖವಾಗಿ ಬದುಕುವ ಹಕ್ಕನ್ನು ಹೊಂದಿದೆ. ಪ್ರಾಣಿಗಳ ರಕ್ತದಿಂದ ತೊಯ್ದ ವಿಲಾಸಿ ಜೀವನ ನಮಗೆ ಹೆಮ್ಮೆಯ ವಿಷಯವಾಗಬಾರದು. ನಾವು ಕೊಳ್ಳುವ ಪ್ರತಿಯೊಂದು ವಸ್ತುವಿನ ಹಿಂದೆ ಯಾರದ್ದಾದರೂ ನೋವಿದೆಯೇ ಎಂದು ಯೋಚಿಸುವ ಮಾನವೀಯತೆ ನಮ್ಮಲ್ಲಿ ಬೆಳೆಯಲಿ. ಪ್ರಾಣಿಗಳನ್ನು ಪ್ರೀತಿಸೋಣ, ಅವುಗಳ ಅಸ್ತಿತ್ವವನ್ನು ಗೌರವಿಸೋಣ.ಯಾಕೆಂದರೆ,ಒಂದೊಳ್ಳೆ ಪರಿಸರಕ್ಕೆ ಪ್ರಕೃತಿಯ ಎಲ್ಲ ಪಾತ್ರಗಳ ಭಾಗವಹಿಸುವಿಕೆಯೂ ಅಷ್ಟೇ ಮುಖ್ಯವಲ್ಲವೇಬದುಕೋಣ. ಬದುಕಲು ಬಿಡೋಣ! ವಂದನೆಗಳು.

# ಆಚಾರವೇ ಪ್ರಾಣ ಲಿಂಗವಾದ... ಡೋಹರ ಕಕ್ಕಯ್ಯ



| ವೀಣಾ ಹೇಮಂತ್‌ಗೌಡ ಪಾಟೀಲ್

ಬಸವಣ್ಣನವರ ಸಮಕಾಲೀನರಾದ ಡೋಹರ ಕಕ್ಕಯ್ಯನವರು 12ನೇ ಶತಮಾನದ ಶ್ರೇಷ್ಠ ವಚನಕಾರರು. ಸತ್ತ ಪ್ರಾಣಿಗಳ ತೊಗಲನ್ನು ಹದ ಮಾಡುವ ಕಾಯಕವನ್ನು ಮಾಡುತ್ತಿದ್ದ ಅವರು ಮಾಳವ ದೇಶದಿಂದ ವಲಸೆ ಬಂದವರು.

ಅಭಿನವ ಮಲ್ಲಿಕಾರ್ಜುನ ಎಂಬ ಅಂಕಿತನಾಮವನ್ನು ಹೊಂದಿದ್ದ ಇವರು ಒಟ್ಟು ಆರು ವಚನಗಳನ್ನು ರಚಿಸಿದ್ದಾರೆ.

ಸಮಾನತೆಯ ಹಾಗೂ ಭಕ್ತಿಯ ಹಾದಿಯಲ್ಲಿ ನಡೆಯುವ ಆಶಯವನ್ನು ಹೊಂದಿದ್ದ ಬಸವಣ್ಣನವರ ಕೀರ್ತಿಯನ್ನು ಕೇಳಿ ದೂರದ ಮಾಳವ ದೇಶದಿಂದ ಕಲ್ಯಾಣಕ್ಕೆ ಬಂದು ನೆಲೆಸಿದರು. ಲಿಂಗ ದೀಕ್ಷೆಯನ್ನು ಪಡೆದು ಲಿಂಗಸೇವಾ ನಿಷ್ಠರಾಗಿದ್ದರು. ಸಮಾಜದ ಅತ್ಯಂತ ಕೆಳ ವರ್ಗವಾದ ಡೋಹರ ಜಾತಿಗೆ ಸೇರಿದ ಕಕ್ಕಯ್ಯನವರು ಸಾಮಾಜಿಕ ಅಂದ ವಿಶ್ವಾಸಗಳ ವಿರುದ್ಧ ತಾರತಮ್ಯದ ವಿರುದ್ಧ ಹೋರಾಡಿದವರು.

ಅದ್ಭುತ ಕಾಯಕ ನಿಷ್ಠರಾದ ಅವರು ಚರ್ಮ ಹದ ಮಾಡುವ ತಮ್ಮ ಕಾಯಕದಲ್ಲಿ ಅಪಾರ ನಿಷ್ಠೆಯನ್ನು ತೋರುತ್ತಿದ್ದರು. ಮನಸ್ಸನ್ನು ಶಿವನ ಧ್ಯಾನದಲ್ಲಿ ತಲ್ಲೀನವಾಗಿಸುತ್ತಿದ್ದರು.

ಡೋಹರ ಕಕ್ಕಯ್ಯನವರ ಭಕ್ತಿ ಹಾಗೂ ಆಚಾರ ಸಂಪನ್ನತೆಯನ್ನು ಬಸವಣ್ಣನವರು ಮೆಚ್ಚಿಕೊಂಡಿದ್ದು ಮಾತ್ರವಲ್ಲದೆ ಕಕ್ಕಯ್ಯನವರ ಪ್ರಸಾದಕ್ಕೆ ಸದಾ ಹಾತೊರೆಯುವ ಮನಸ್ಥಿತಿಯನ್ನು ಹೊಂದಿದ್ದರು


.ಹಿರಿಯ ಜೀವಿಗಳಾಗಿದ್ದ ಕಕ್ಕಯ್ಯನವರು ಅನುಭವ ಮಂಟಪದಲ್ಲಿ ಹಿರಿಯ ಶರಣರಲ್ಲಿ ಕಕ್ಕಯ್ಯನವರು ಪ್ರಮುಖರಾಗಿದ್ದು ಯಾವುದೇ ರೀತಿಯ ಜಾತಿ ಭೇದವಿಲ್ಲದೆ ಎಲ್ಲರನ್ನೂ ಸಮಾನವಾಗಿ ಕಾಣುವ ಬಸವಣ್ಣನವರ ಸಿದ್ಧಾಂತವನ್ನು ಅವರು ತಮ್ಮ ಬದುಕಿನ ಭಾಗವನ್ನಾಗಿಸಿಕೊಂಡಿದ್ದರು. ಅವರ ಆಚಾರ ಸಂಪನ್ನತೆಯಿಂದಾಗಿ ಅವರಿಗೆ ವೀರ ಮಾಹೇಶ್ವರ ಎಂಬ ಅಗ್ಗಳಿಕೆ ಪ್ರಾಪ್ತವಾಗಿತ್ತು

ಕಕ್ಕಯ್ಯನವರು ಗಣಾಚಾರಿಯಾಗಿದ್ದರು ಕೂಡ. ಶಿವನನ್ನು ನಿಂದಿಸುವ ವ್ಯಕ್ತಿಯ ಬಾಯಿಂದ ಬರುತ್ತಿದ್ದ ನಿಂದೆಯ ಮಾತುಗಳನ್ನು ಕೇಳಲು ಕಕ್ಕಯ್ಯನವರಿಗೆ ವಿಪರೀತ ಕಷ್ಟವಾಗುತ್ತಿತ್ತು.

ಒಂದೊಮ್ಮೆ ಶಿವನಿಂದೆ ಮಾಡುತ್ತಿದ್ದ, ಶಿವಲಿಂಗವನ್ನು ಕಲ್ಲು ಗುಂಡು ಎಂದು ಹೀಗಳೆಯುತ್ತಿದ್ದವರ ಜೊತೆಗೆ ಜಗಳ ಕಾಯ್ದು ಶಿಕ್ಷೆ ನೀಡಿ ತಮ್ಮ ಕೋಪವನ್ನು ತೀರಿಸಿಕೊಂಡಿದ್ದರು.

ಉಪೇಕ್ಷಿತ ವಚನಕಾರರು

ಅನುಭವ ಮಂಟಪದಲ್ಲಿ ಡೋಹರ ಕಕ್ಕಯ್ಯನವರು ಶರಣರೊಡನೆ ಒಡನಾಡಿ ಅನುಭಾವ ಸಂಪನ್ನ ಎನಿಸಿಕೊಂಡಿದ್ದರು. ಸಂಖ್ಯೆಯಲ್ಲಿ ಕಿಡಿದಾದರೂ ಹಿರಿದಾದ ವಿಷಯ ಸಂಪತ್ತನ್ನು ಹೊಂದಿರುವ ಅವರ ವಚನಗಳು ಲೌಕಿಕದ ಜನರಿಗೆ ಆಧ್ಯಾತ್ಮದ ಕುರಿತ ದಾರಿದೀಪವಾಗಿವೆ.



ಕಲ್ಯಾಣ ಕ್ರಾಂತಿಯ ನಂತರ ವಚನದ ಕಟ್ಟುಗಳ ಸಂರಕ್ಷಣೆಗೆ ಬದ್ಧರಾಗಿ ಉಳಿವಿಯೆಡೆಗೆ ಪ್ರಯಾಣ ಬೆಳೆಸಿದ ಶರಣರ ರಕ್ಷಣೆಯ ಪ್ರಮುಖ ಜವಾಬ್ದಾರಿಯನ್ನು ಗಣಾಚಾರಿ ಕಕ್ಕಯ್ಯನವರು ವಹಿಸಿದರು.ಅಂತೆಯೇ ಅತ್ಯಂತ ವಿರೋಚಿತವಾಗಿ ಅಲ್ಲಲ್ಲಿ ಬಿಜ್ಜಳನ ಸೈನ್ಯವನ್ನು ಎದುರಿಸಿದರು ಕೂಡ.

ಹಲವಾರು ಬಾರಿ ಶರಣರ ರಕ್ಷಣೆಗಾಗಿ ಹೋರಾಟ ನಡೆಸಿದ ಅವರು ಕಾತರವಳ್ಳ ಕಾಳಗದ ನಂತರ ಬಿಜ್ಜಳನ ಸೈನ್ಯವನ್ನು ದಾರಿ ತಪ್ಪಿಸಿ ಬೆಳಗಾವಿಯ ಹತ್ತಿರದ ಕಕ್ಕೇರಿಯ ಕಡೆ ತಿರುಗಿಸಿದರು.

ಕಕ್ಕೇರಿಯ ಬಳಿ ಅವರನ್ನು ಎದುರುಗೊಂಡು ವೀರೋಚಿತವಾಗಿ ಹೋರಾಡಿದ ವೀರಶರಣ ಡೋಹರ ಕಕ್ಕಯ್ಯನವರು ಅಲ್ಲಿಯೇ ಹುತಾತ್ಮರಾದರು.

ಇಂದಿಗೂ ಕೂಡ ಕಕ್ಕೇರಿಯ ಬಳಿ ಅವರ ಹೆಸರಿನ ಬಾವಿ ಮತ್ತು ಕೆರೆಗಳು ಇವೆ.. ಅಲ್ಲಿಯೇ ಅವರ ಸಮಾಧಿಯೂ ಕೂಡ ಇದೆ.

ತನಗೆ ಇಷ್ಟಲಿಂಗ ದೀಕ್ಷೆಯನ್ನು ನೀಡಿ ತನ್ನ ಕುಲದ ಸೂತಕವನ್ನು ಬಸವಾದಿ ಶರಣರು ಕಳೆದರೆಂದು ಹೇಳುವ ಡೋಹರ ಕಕ್ಕಯ್ಯನವರು ಆ ಕುರಿತು ಹೀಗೊಂದು ವಚನವನ್ನು ರಚಿಸಿದ್ದಾರೆ.

ಲಿಂಗ ಬಂದು ಸೋಂಕಲೊಡನೆ ಎನ್ನ ಸರ್ವಾಂಗದ ಅವಲೋಹವಳಿಯಿತ್ತಯ್ಯಾ ಎಂಬ ಅವರ ವಚನದ ಮಾತು ಅಂದಿನ ಸಾಮಾಜಿಕ ಕ್ರಾಂತಿಯ ಸ್ವರೂಪವನ್ನು ತೆರೆದು ತೋರುತ್ತದೆ.

ತಮ್ಮ ಮತ್ತೊಂದು ವಚನದಲ್ಲಿ ಅವರು

ನೆನೆಯಲರಿಯೆ, ನಿರ್ಧರಿಸಲರಿಯೆ ಮನವಿಲ್ಲವಾಗಿ
ಭಾವಿಸಲರಿಯೆ ಬೆರೆಸಲರಿಯೆ ಭಾವನಿರ್ಭಾವ ವಾಯಿತ್ತಾಗಿ
ಧ್ಯಾನ ಮೌನವನರಿಯೇ ಧ್ಯಾನಾತೀತ ತಾನಾಯಿತ್ತಾಗಿ
ಜ್ಞಾನ ಜ್ಞೇಯಂಗಳೆಲ್ಲವ ಮೀರಿ ಅಭಿನವ ಮಲ್ಲಿಕಾರ್ಜುನನಲ್ಲಿ ಪರಮ ಸುಖಿಯಾಗಿರ್ದೆ



.ಮನವಿಲ್ಲದೆ ಯಾವುದನ್ನು ನೆನೆಯಲಾಗದು ನಿರ್ಧರಿಸಲು ಕೂಡ ಆಗದು. ನಿರ್ಭಾವುಕತೆ ಇದ್ದಾಗ ವ್ಯಕ್ತಿ ಭಾವಿಸಲು ಹಾಗೂ ಬೆರೆಯಲು ಅರಿಯಲಾರ

ಧ್ಯಾನ ಮೌನಗಳನ್ನು ಕೂಡ ತಾನು ಅರಿಯಲಾರದ ಧ್ಯಾನಕ್ಕೆ ಅತೀತನಾದ ವ್ಯಕ್ತಿ ತಾನು... ಎಲ್ಲವನ್ನು ಮರೆತು ತನ್ನ ಶಿವ ಧ್ಯಾನದಲ್ಲಿ ಪರಮ ಸುಖಿಯಾಗಿರುವೆ ಎಂದು ಅವರು ತಮ್ಮ ವಚನದಲ್ಲಿ ಹೇಳುತ್ತಾರೆ.

ಶರಣ ಸಂಕುಲದ ಉಳಿವಿಗಾಗಿ ವಚನ ಸಾಹಿತ್ಯದ ರಕ್ಷಣೆಗಾಗಿ ಹೋರಾಡಿ ಅತ್ಮಾರ್ಪಣೆ ಮಾಡಿದ ಹಿರಿಯ ಶರಣ ಡೋಹರ ಕಕ್ಕಯ್ಯನವರಿಗೆ ಶರಣು ಶರಣಾರ್ಥಿ

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,